
ಸಂಪುಟ 23 ಸಂಚಿಕೆ 12
ಮಾರ್ಚ್ 25, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

# ಪೆಕ್ಸ್ಯಾರಂಗ



# ದೇಶದ ರಕ್ಷಣೆ - ಭಕ್ಷಣೆ

## ಹಲ್ಕಾಗಳನ್ನು ಬಯಲಿಗೆಳೆದ ತೆಹಲ್ಕಾ

## 'ಜನಮೋರ್ಚಾ' ಅಸ್ತಿತ್ವಕ್ಕೆ

# ಮತ ಎಣಿಕೆಯಲ್ಲಿ ಅಕ್ರಮ

**ಕಳೆದ ಸಂಚಿಕೆಯಲ್ಲಿ ಕೇಂದ್ರ ಮಂತ್ರಿ ಎಸ್.ಎಸ್.ರಾಯ್ ಪಿತೂರಿ, 1971 ರ ಕಾಳಿಪುರ ಹತ್ಯಾಕಾಂಡ, ಪ.ಬಂಗಾಳ ಚುನಾವಣೆಯಲ್ಲಿನ ದಬ್ಬಾಳಿಕೆ, ರಿಗ್ಗಿಂಗ್‌ನ ಪರಾಕಾಷ್ಠೆ, ಗೂಂಡಾ ದುರಾಚಾರಗಳ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಎಸ್.ಎಸ್.ರಾಯ್‌ಯಿಂದ ಪ್ರಜಾಪ್ರಭುತ್ವದ ಮುಖಕ್ಕೆ ಮಸಿ, ಕಾಂಗ್ರೆಸ್-ಸಿಪಿಐ ಕೂಟದ ಬಣ್ಣ ಬಯಲು, ಚುನಾವಣೆಯೆಂಬ ಪ್ರಹಸನ, ಮತಗಟ್ಟೆ ವಶ, ರಿಗ್ಗಿಂಗ್, ಚುನಾವಣೆ ಆಯುಕ್ತ ಸೇನ್ ಬರ್ಮಾರಿಗೂ ಕಾಂಗ್ರೆಸ್‌ನಿಂದ ಬೆದರಿಕೆ ಈ ಬಗ್ಗೆ ಓದಿ**

ಇಷ್ಟೊಂದು ದೌರ್ಜನ್ಯ ನಡೆದರೂ, ಮುಕ್ತ ಮತದಾನಕ್ಕೆ ಅವಕಾಶ ಕೊಟ್ಟರೆ ನಮ್ಮ ಮತಗಳನ್ನು ಹೆಚ್ಚಿಸಿಕೊಳ್ಳುವ ಸಂಪೂರ್ಣ ಆತ್ಮವಿಶ್ವಾಸ ನಮಗೆ ಇತ್ತು. ಆದರೆ ಅಂಥ ಅವಕಾಶ ಸೃಷ್ಟಿಯಾದೀತೆಂಬ ನಿರೀಕ್ಷೆ ಇರಲಿಲ್ಲ. ಮತದಾನದ ದಿನವೇ ಕಾಂಗ್ರೆಸ್ಸಿಗರು ಏನಾದರೂ ಆಟೋಟೋಪ ನಡೆಸಿಯಾರು ಎಂಬ ಭೀತಿ ನಮಗೆ ಇದ್ದೇ ಇತ್ತು. ಆ ನಮ್ಮ ಅನುಮಾನಗಳು ನಿಜ ಎಂಬುದು ಆಮೇಲೆ ಸ್ಪಟಿಕದಷ್ಟು ಸ್ಪಷ್ಟವಾಯಿತು.

**ಕರಾಳ ದಿನ**

1972 ಮಾರ್ಚ್ 11, ನಮ್ಮ ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಒಂದು ಅತ್ಯಂತ ಕರಾಳ ದಿನ.

ಮತದಾನದ ದಿನವೇ ಕಾಂಗ್ರೆಸ್ಸಿಗರು ನಮ್ಮ ಪಕ್ಷದ ಒಂಬತ್ತು ಬೆಂಬಲಿಗರನ್ನು ಕೊಂದು ಹಾಕಿದ್ದರು. ರಾಜ್ಯದ ಉಸ್ತುವಾರಿಯ ಹೊಣೆ ಹೊತ್ತಿದ, ಕೇಂದ್ರ ಮಂತ್ರಿ ಸಿದ್ಧಾರ್ಥ ಶಂಕರ ರಾಯ್ ಅವರಿಂದಲೇ ಪ್ರಜಾಪ್ರಭುತ್ವದ ಮುಖಕ್ಕೆ ಮಸಿ ಬಳಿಯುವ ಕೃತ್ಯ ನಡೆಯಿತು.

ಏನಾದರೂ ಮಾಡಿ ಅಧಿಕಾರ ಕಸಿದುಕೊಳ್ಳಬೇಕೆಂಬ ಗುರಿಯಿದ್ದ ಕಾಂಗ್ರೆಸ್ ಪಕ್ಷ ಯಾವ ಮಟ್ಟಕ್ಕೆ ಇಳಿದೀತು ಎಂಬುದನ್ನು ಅಂದಾಜು ಮಾಡುವಲ್ಲಿ ನಾವು ವಿಫಲರಾದೆವು ಎನ್ನುವುದು ಕಟು ಸತ್ಯ. ಕನಿಷ್ಠ ಪಕ್ಷ ಜನರಿಗೆ ಮತದಾನ ಮಾಡಲು ಅವಕಾಶ ನೀಡಲಾಗುವುದು ಹಾಗೂ ಆಡಳಿತ ನಿಷ್ಪಕ್ಷಪಾತ ಧೋರಣೆ ತಳೆಯುತ್ತದೆ ಎಂಬುದು ನಮ್ಮನಮ್ಮ ನಿರೀಕ್ಷೆಯಾಗಿತ್ತು.

ಆದರೆ ಎಸ್.ಎಸ್.ರಾಯ್ ಮತ್ತವರ ಕೂಟ ಈ ರೀತಿಯಾಗಿ ಯೋಚನೆಯನ್ನು ಮಾಡಲಿಲ್ಲ. ಅಧಿಕಾರ ದಾಹದ ಗುರಿಯ ಹತಾಶೆಯಿಂದ ಕಾಂಗ್ರೆಸ್ ಪಕ್ಷ ಹಿಂದೆಂದೂ ನಡೆಸದ ದುಷ್ಕಾರ್ಯಗಳಿಗೆ ಇಳಿಯಿತು. ಇದೊಂದು ಪೂರ್ಣಪ್ರಮಾಣದ ಯುದ್ಧವಾಗಿತ್ತು. ಪ್ರಜಾಪ್ರಭುತ್ವದ ಮೂಲಭೂತ ತತ್ವನಿಯಮಗಳೇ ಕಾಂಗ್ರೆಸ್ಸಿನ ಶತ್ರುಗಳಾಗಿದ್ದವು.

**ಬಣ್ಣ ಬಯಲು**

ಕಾಂಗ್ರೆಸ್ ಮತ್ತು ಸಿಪಿಐ ನ ಬಣ್ಣ ಕೊನೆಗೂ ಜನರಿಗೆ ಗೊತ್ತಾಯಿತು. ಕಾಂಗ್ರೆಸ್ ಮತ್ತು ಸಿಪಿಐನ 'ಜಂಟಿ ಕಾರ್ಯಾಚರಣೆ' ಕಲ್ಪನಾತೀತವಾಗಿತ್ತು. ಒಂದು ಯೋಜಿತ ಕಾರ್ಯಾಚರಣೆ ನಡೆದಿದ್ದು ಮಾತ್ರ ಸತ್ಯ. ಮತದಾನದ ದಿನದ ವಿದ್ಯಮಾನಗಳು ಹಠಾತ್ತನೆ ಉದ್ಭವಿಸಿದ್ದು ಏನೂ ಅಲ್ಲ. ಅವೆಲ್ಲ ಪೂರ್ವಯೋಜಿತ ಕೃತ್ಯಗಳೇ ಹೌದು.

ಭಯದ ವಾತಾವರಣವನ್ನು ಸೃಷ್ಟಿಸುವುದು ಹಾಗೂ ಅದಕ್ಕೆ ಯಾವುದೇ ರೀತಿಯ ವಿರೋಧ ಬರುವುದನ್ನು ತಡೆಯುವುದು ಈ ಯೋಜನೆಯ ಮೊದಲ ಹಂತ. ಮತದಾನದ ದಿನದಂದು ಎರಡನೇ ಹಂತವನ್ನು ಕಾರ್ಯಗತಗೊಳಿಸಲು ಯೋಜಿಸಲಾಗಿತ್ತು.


ಎಡಪಂಥೀಯರ ಪ್ರಭಾವವಿರುವ ಪ್ರದೇಶಗಳಿಗೆ ಸೇನೆ ಕಳಿಸಲಾಯಿತು. ಹಾಗೂ ಕೊಲೆ ಮತ್ತು ರಾಜಕೀಯ ಹತ್ಯೆಗಳು ಎಗ್ಗಿಲ್ಲದೆ ಮುಂದುವರಿದವು. ಕಾಂಗ್ರೆಸ್ ಕಾರ್ಯಕರ್ತರು ಸರಕಾರಿ ಜೀಪುಗಳಲ್ಲಿ ಸುತ್ತಾಡಿದರು. ಆಡಳಿತ ಪೂರ್ಣವಾಗಿ ಕಾಂಗ್ರೆಸ್-ಸಿಪಿಐ ಕೂಟದ ಬೆಂಬಲಕ್ಕೆ ನಿಂತಿತ್ತು.

ಕುಕೃತ್ಯಗಳಿಂದಾಗಿ ಜನರ ಮನಸ್ಸು ಕಾಂಗ್ರೆಸ್ ವಿರುದ್ಧ ರೋಸಿಹೋಗಿದ್ದರಿಂದ ಕೆಲವು ಕಡೆಗಳಲ್ಲಿ ಕಟ್ಟಾ ಕಾಂಗ್ರೆಸ್ ಮತದಾರರು ಕೂಡ ಮತ ಚಲಾಯಿಸದಂತೆ ಜನರು ತಡೆದದ್ದು ಒಂದು ವಿರೋಧಾಭಾಸವೇ ಸೈ. ಪರಿಸ್ಥಿತಿ ಆ ಮಟ್ಟಕ್ಕೆ ಮುಟ್ಟಿತ್ತು.

ಮತದಾನದ ನಂತರ ಮತಪೆಟ್ಟಿಗೆಗಳನ್ನು ಒಡೆದು ಹಾಕಲಾಯಿತು. ಎಡ ಅಭ್ಯರ್ಥಿಗಳ ಪರವಾಗಿ ಮತ ಚಲಾಯಿಸಿದ್ದರೆ ಅಂಥ ಮತ ಪತ್ರಗಳನ್ನು ಒಂದೋ ಎಸೆಯಲಾಯಿತು ಇಲ್ಲವೇ ಇನ್ನೊಂದು ಮುದ್ರೆ ಒತ್ತಿ ಅದನ್ನು ಅಸಿಂಧುಗೊಳಿಸಲಾಯಿತು. ಅನೇಕ ಮತಗಟ್ಟೆಗಳಲ್ಲಿ ಮತಪತ್ರಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಮತದಾನದ ಹೆಸರಿನಲ್ಲಿ ನಡೆದ ವಿಧ್ವಂಸಕ ಕೃತ್ಯಗಳಿಗೆ ಅವು ಮೂಕ ಸಾಕ್ಷಿಯಾಗಿದ್ದವು.

ಕಾಂಗ್ರೆಸ್ ಪರವಾಗಿ ಮೊದಲೇ ಮುದ್ರೆ ಒತ್ತಲಾದ ಮತಪತ್ರಗಳನ್ನು ಪೆಟ್ಟಿಗೆಗೆ ತುಂಬಿ ಎಣಿಕೆ ಕೇಂದ್ರಗಳಿಗೆ ಒಯ್ಯಲಾದ ಪ್ರಕರಣಗಳೂ ಇವೆ.

ನನ್ನ ಕ್ಷೇತ್ರದಲ್ಲಿ ಕೂಡ ಪ್ರಜಾಪ್ರಭುತ್ವ ವಿರೋಧಿಗಳ ರುದ್ರನರ್ತನ ನಡೆಯಿತು. ಒಟ್ಟು 135 ಬೂತ್ ಪೈಕಿ 100 ಕ್ಕೂ ಹೆಚ್ಚು ಮತಗಟ್ಟೆಗಳಿಂದ ನಮ್ಮ ಚುನಾವಣೆ ಏಜೆಂಟರನ್ನು ಓಡಿಸಲಾಯಿತು. ಅಧಿಕಾರಿಗಳಿಂದ ಮತ ಪೆಟ್ಟಿಗೆಗಳನ್ನು ಕಸಿದುಕೊಂಡು




ಸಿಪಿಐ ಅಭ್ಯರ್ಥಿಯ ಪರವಾಗಿ ಓಟು ಹಾಕಿ ಮತಪತ್ರಗಳನ್ನು ಪೆಟ್ಟಿಗೆಗೆ ತುಂಬಿಸಲಾಯಿತು.

ನನ್ನ ಕ್ಷೇತ್ರವನ್ನು ತಲುಪಿದಾಗ ನೋಡುವುದೇನು? ಬೆಳಿಗ್ಗೆ 11 ಗಂಟೆಗೆ ಮುಂಚೆಯೇ ಮತದಾನ ಮುಗಿದು ಹೋಗಿತ್ತು! ಇಂಥ ಪರಿಸ್ಥಿತಿಯಲ್ಲಿ ಮುಕ್ತ ಮತದಾನ ನಡೆದಿರಲು ಸಾಧ್ಯವೇ ಇಲ್ಲ ಎಂದು ವಿವರಿಸಿ ನಾವು ತಕ್ಷಣವೇ ಚುನಾವಣೆ ಅಧಿಕಾರಿಗೆ ಪತ್ರ ಬರೆದೆ. ಬಾರಾನಗರ ಕ್ಷೇತ್ರದ ಚುನಾವಣೆಯನ್ನು ತಕ್ಷಣವೇ ಮುಂದೂಡಬೇಕೆಂದು ಒತ್ತಾಯಿಸಿದೆ.

ರಾಜ್ಯದೆಲ್ಲೆಡೆ ವ್ಯಾಪಕ ರಿಗ್ಗಿಂಗ್ ನಡೆದಿದ್ದು ನಾನು ಪಕ್ಷದ ಕಚೇರಿಗೆ ಹೋದಾಗ ವರದಿಯಾಯಿತು. ಅಂತೂ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಹೆಸರಿನಲ್ಲಿ ಪ್ರಹಸನ ನಡೆಯಿತು ಎನ್ನುವುದು ಆ ದಿನ ಸಂಜೆ ಹೊತ್ತಿಗೆ ಇಡೀದೇಶದ ಜನಕ್ಕೆ ಗೊತ್ತಾಯಿತು.

ಮತದಾನದ ವೇಳೆಯೇ ಹೀಗೆಂದ ಮೇಲೆ ಇನ್ನು ಮತಗಳ ಎಣಿಕೆ ಪರಿಸ್ಥಿತಿ ಹೇಗಿರಬೇಡ? ಎಣಿಕೆ ಸಮಯದಲ್ಲಿ ಕೂಡ ಇದೇ ರೀತಿಯ ನಾಟಕ ನಡೆಯಲಿದೆ ಎಂಬುದು ನಮಗೆ ಖಾತರಿಯಾಗಿತ್ತು. ನಾವು ಅಂದುಕೊಂಡಂತೆಯೇ ಆಯಿತು.

ಮಾರ್ಚ್ 13 ರಂದು ಫಲಿತಾಂಶ ಪ್ರಕಟವಾಗಲು ಆರಂಭವಾಯಿತು. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಯಾವುದೇ ಅವಕಾಶ ಕೈತಪ್ಪಿಹೋಗುವುದನ್ನು ಬಿಡುವುದಿಲ್ಲ ಎಂಬುದು ನಮಗೆ ಆಗಲೇ ಸ್ಪಷ್ಟವಾಗತೊಡಗಿತು. ಸಾಧ್ಯವಾದ ಎಲ್ಲಾ ಅಪ್ರಾಮಾಣಿಕ ಮಾರ್ಗಗಳನ್ನು ಅನುಸರಿಸಲಾಯಿತು. ಅಧಿಕೃತ ಮುದ್ರೆಗಳಿಲ್ಲದೆ ಮತ ಪೆಟ್ಟಿಗೆಗಳನ್ನು ತೆರೆಯಲಾಯಿತು. ಸಿಂಧುವಾಗಿದ್ದ ಮತಪತ್ರಗಳನ್ನು ಹರಿದು ಹಾಕಲಾಯಿತು. ಅಪರಾಧ ಪೂರ್ಣಗೊಳಿಸಲು ಬೇರೆ ಕ್ಷೇತ್ರಗಳ ಮತ ಪತ್ರಗಳನ್ನು ಕೂಡ ತರಲಾಯಿತು.

ಇಂಥದ್ದಕ್ಕೆಲ್ಲ ಜಗ್ಗಲು ಕೆಲವು ಚುನಾವಣಾಧಿಕಾರಿಗಳು ಒಪ್ಪಲಿಲ್ಲ. ಆದರೆ ಅಂತಿಮವಾಗಿ ಬಂದೂಕಿನ ನಳಿಕೆ ತೋರಿಸಿ ಅವರನ್ನು ಬೆದರಿಸಿ ಪ್ರಜಾಪ್ರಭುತ್ವದ ಕೊಲೆಗಡುಕರು ತಮ್ಮ ಕೆಲಸವನ್ನು ಸಾಧಿಸಿಕೊಂಡರು.

ಕೆಲವು ಪ್ರಕರಣಗಳಲ್ಲಿ, ಎಡಪಕ್ಷಗಳ ಅಭ್ಯರ್ಥಿಗಳ ಪರವಾಗಿ ಮತ ಚಲಾಯಿಸಲಾಗಿದ್ದ ಮತಪತ್ರಗಳ ಕಟ್ಟುಗಳನ್ನು ಕಾಂಗ್ರೆಸ್ ಮತ್ತು ಸಿಪಿಐ ಅಭ್ಯರ್ಥಿಗಳ ಕಟ್ಟುಗಳ ಜತೆ ಇಟ್ಟು ಇದೇ ನಿಜವೆಂದು ಸಾಧಿಸಲು ಯತ್ನಿಸಲಾಯಿತು. ಇನ್ನು ಕೆಲವು ವೇಳೆ, ಎಡ ಅಭ್ಯರ್ಥಿಗಳು ಮುಂದಿದ್ದಾರೆಂದು ಗೊತ್ತಾದಾಗ ಎಣಿಕೆ ಕೆಲಸವನ್ನು ತಕ್ಷಣವೇ ಮುಂದಕ್ಕೆ ಹಾಕಲಾಯಿತು. ಅಧಿಕಾರಿಗಳನ್ನು ಬೆದರಿಸಿದರು. ಎರಡನೇ ಸುತ್ತಿನ ಕೊನೆಯಲ್ಲೇ ಕಾಂಗ್ರೆಸ್ ಅಭ್ಯರ್ಥಿಗಳು ಜಯಶಾಲಿಯಾದರೆಂದು ಘೋಷಿಸಿದರು. ಮತಎಣಿಕೆ ಮುಕ್ತಾಯದ ನಂತರ ಎಡಪಕ್ಷಗಳ ಹುರಿಯಾಳುಗಳು ಗೆದ್ದರೂ ಅಂತಿಮವಾಗಿ ಫಲಿತಾಂಶ ಪ್ರಕಟಿಸಿದಾಗ ಅದು ತಿರುವು ಮರುವಾಗಿ ಇರುತ್ತಿತ್ತು. ಎಸ್.ಎಸ್. ರಾಯ್ ನೇತೃತ್ವದಲ್ಲಿ ನಡೆದ ಚುನಾವಣೆ ಎಂಬ ಪ್ರಹಸನದ ಪರಿ ಈ ರೀತಿ ಇತ್ತು.

ಮತ ಎಣಿಕೆ ಕೇಂದ್ರಗಳಿಗೆ ನಮ್ಮ ಚುನಾವಣೆ ಏಜೆಂಟರನ್ನು ಕಳುಹಿಸುವುದರಲ್ಲಿ ಅರ್ಥವಿಲ್ಲ ಎಂದು ಮಾರ್ಚ್ 13ರ ಸಂಜೆ ನಾವು ನಿರ್ಧರಿಸಿದೆವು. ನಮ್ಮ ಮಿತ್ರರು ಕೂಡ ಅದೇ ನಿಲುವನ್ನು ತಳೆದರು.

**ಪಿತೂರಿ ಬಿಚ್ಚಿಟ್ಟ ಕಾಂಗ್ರೆಸ್ ಕಾರ್ಯಕರ್ತನ ಪಾತ್ರ**

ಈ ಸಂದರ್ಭದಲ್ಲಿ ಒಂದು ಪತ್ರವನ್ನು ನಾನು ಇಲ್ಲಿ ಉಲ್ಲೇಖಿಸಲೇ ಬೇಕು. ಸೀಲ್ದಾದ ಒಬ್ಬ ನಿವಾಸಿ ಅದನ್ನು ಬರೆದಿದ್ದರು.

"ನಾನು ಕಾಂಗ್ರೆಸ್ ಪಕ್ಷಕ್ಕೆ ಕೆಲಸ ಮಾಡಿದರೂ ನಿಮಗೆ ನಾನು ಈ ಪತ್ರ ಬರೆಯುತ್ತಿದ್ದೇನೆ. ಯಾಕೆಂದರೆ ನಾನು ನಿಮ್ಮನ್ನು ಗೌರವಿಸುತ್ತೇನೆ. ನಮ್ಮ ಚಟುವಟಿಕೆಗಳಿಗಾಗಿ ನಮಗೆ ಬಹಳಷ್ಟು ಹಣ ಕೊಡಲಾಯಿತು ಎನ್ನುವುದು ವಾಸ್ತವ ಸಂಗತಿ. ಆದರೆ ಅದು ನಿಮ್ಮ ವಿರುದ್ಧವಾಗಿ ಕೆಲಸ ಮಾಡುತ್ತದೆ ಎನ್ನುವ ಒಂದಿಷ್ಟು ಸುಳಿವು ನಮಗೆ ಇರಲಿಲ್ಲ. ಅವರು ನನ್ನನ್ನು ಕುಡಿಯುವಂತೆ ಬಲವಂತ ಮಾಡಿದರು. ಅಲ್ಲದೆ ನೂರಾರು ಗೂಂಡಾಗಳನ್ನು ಬಳಸಿದರು. ಸಿಪಿಐ(ಎಂ) ಬೆಂಬಲಿಗರು ಮತಚಲಾಯಿಸುವುದನ್ನು ತಡೆಯುವಂತೆ ನಮಗೆ ಆದೇಶ ನೀಡಲಾಗಿತ್ತು. ಮತದಾನದ ಹಿಂದಿನ ದಿನದ ರಾತ್ರಿಯೇ ಶೇ. 70ರಷ್ಟು ಮತದಾನ ಮುಗಿದಿರಬೇಕೆಂದೂ ಆದೇಶಿಸಲಾಗಿತ್ತು. ಸಿಆರ್‌ಪಿಎಫ್ ನಮ್ಮ ಬೆಂಬಲಕ್ಕಿರುವುದರಿಂದ ಯಾರೂ ಹೆದರಬೇಕಾಗಿಲ್ಲ ಎಂದು ನಮಗೆ ಹೇಳಲಾಯಿತು. ಯಾವುದೇ ಸಮಸ್ಯೆ ಬಂದರೆ ಅವರು ನಮ್ಮ ಪರವಾಗಿ ಇರುತ್ತಾರೆ ಎಂದೂ ತಿಳಿಸಲಾಯಿತು. ಎಂದು ಆತ ಪತ್ರದಲ್ಲಿ ವಿವರಿಸಿದ್ದ.

ಅಸೆಂಬ್ಲಿಯನ್ನೇ ಬಹಿಷ್ಕರಿಸಲು ಮಾರ್ಚ್ 18 ರಂದು ನಮ್ಮ ರಂಗ ನಿರ್ಧರಿಸಿತು. ಈ ಸಂಬಂಧ ಒಂದು ಸಂಯುಕ್ತ ಹೇಳಿಕೆಯನ್ನು ಹೊರಡಿಸಲಾಯಿತು. ಸಿಪಿಐ(ಎಂ) ಪರವಾಗಿ ನಾನು ಸಹಿ ಹಾಕಿದೆ. ಮಖನ್ ಪಾಲ್ ಮತ್ತು ಜತಿನ್ ಚಕ್ರವರ್ತಿ (ಆರ್.ಎಸ್.ಪಿ) ಅಶೋಕ ಘೋಷ್ (ಫಾರ್ವರ್ಡ್ ಬ್ಲಾಕ್) ಸುದಿನ್ ಕುಮಾರ್ (ಆರ್.ಸಿ.ಪಿ.ಐ), ನಿಹಾರ ಮುಖರ್ಜಿ (ಎಸ್.ಯು.ಸಿ.ಐ), ಜ್ಯೋತಿ ಭಟ್ಟಾಚಾರ್ಯ (ವರ್ಕರ್ಸ್ ಪಾರ್ಟಿ), ಸುಹ್ರಿದ್ ಮಲಿಕ್ ಚೌಧರಿ (ಫಾರ್ವರ್ಡ್ ಬ್ಲಾಕ್ - ಮಾರ್ಕ್ಸಿಸ್ಟ್) ಮತ್ತು ನಿರ್ಮಲೇಂದು ಮುಖರ್ಜಿ (ವಿಪ್ಲವಿ ಬಾಂಗ್ಲಾ ಕಾಂಗ್ರೆಸ್) ಹೇಳಿಕೆಗೆ ಸಹಿಹಾಕಿದ ಇತರರು.

"ಈ ಚುನಾವಣೆಯ ಬಗ್ಗೆ ನಮ್ಮ ನಿಲುವನ್ನು ಈಗಾಗಲೇ ನಾವು ಸ್ಪಷ್ಟಪಡಿಸಿದ್ದೇವೆ. ಇದು ಚುನಾವಣೆಯ ಅಣಕವಷ್ಟೇ ಆಗಿದೆ. ಪೊಲೀಸರು, ಆಡಳಿತ ಮತ್ತು ಕಾಂಗ್ರೆಸ್ ನಡುವೆ ಅಕ್ರಮ ಸಂಬಂಧ ಇರುವುದಕ್ಕೆ ನಮ್ಮ ಬಳಿ ನಿರ್ದಿಷ್ಟ ಪುರಾವೆಯಿದೆ.

ಇಂಥ ಯಾವ ಮಾರ್ಗಗಳಿಂದ ವಿಧಾನಸಭೆಯನ್ನು ರಚಿಸುವುದಕ್ಕಷ್ಟೆ ನಿಲ್ಲದೆ ಆಡಳಿತಗಾರರು ಈಗ ವಿದ್ಯಾರ್ಥಿ ಸಮುದಾಯ ಮತ್ತು ಕಾರ್ಮಿಕರ ಮೇಲೆ ಅಕ್ರಮಣಕ್ಕೆ ಮುಂದಾಗಿದೆ. ಅವರನ್ನು ಅವರ ಕೆಲಸದ ಸ್ಥಳಗಳು ಮತ್ತು ಮನೆಗಳಿಂದ ಹೊಡೆದೋಡಿಸುತ್ತಿದೆ. ಪ್ರತಿಭಟನೆಯ ಯಾವುದೇ ಕುರುಹನ್ನು ದಮನಮಾಡಲು ಭಾರಿ ಯೋಜನೆ ರೂಪಿತವಾಗಿದೆ.

ಇಂಥ ಪರಿಸ್ಥಿತಿಯಲ್ಲಿ ಅಸೆಂಬ್ಲಿಯಲ್ಲಿ ಬಹಿಷ್ಕರಿಸದೆ ಬೇರೆ ಮಾರ್ಗ ನಮಗಿರಲಿಲ್ಲ. ಪರಿಸ್ಥಿತಿಯ ಗಂಭೀರತೆಯನ್ನು ಅರಿಯುವಂತೆ ಹಾಗೂ ಪ್ರತಿಭಟನೆಗೆ ಮುಂದಾಗುವಂತೆ ನಾವು ಜನರಿಗೆ ಮನವಿ ಮಾಡುತ್ತೇವೆ" ಎಂದು ಸಂಯುಕ್ತ ಹೇಳಿಕೆ ತಿಳಿಸಿತು.

(ಮುಂದುವರಿಯುವುದು)

## ಅಶ್ಲೀಲ ಭಿತ್ತಿಪತ್ರಗಳನ್ನು ಹರಿದು ಹಾಕಿದ ಮಹಿಳಾ ಪ್ರತಿಭಟನಾಕಾರರು

ಮಾರ್ಚ್ 8, ರಂದು ವಿಜಾಪುರದ ಗಾಂಧಿ ಚೌಕದಲ್ಲಿ ಹಾಕಿದ್ದ ಅಶ್ಲೀಲ ಚಲನಚಿತ್ರಗಳ ದೊಡ್ಡದೊಡ್ಡ ಬಿತ್ತಿಪತ್ರಗಳನ್ನು ನೋಡ ನೋಡುತ್ತಿದ್ದಂತೆ ಹಲವಾರು ಮಹಿಳೆಯರು ಹರದು ಚಿಂದಿ ಮಾಡಿದರು. ಅಶ್ಲೀಲ ಚಿತ್ರ ಪದರ್ಶನ ಕೂಡಲೇ ನಿಲ್ಲಿಸಬೇಕೆಂಬ ಘೋಷಣೆಗಳನ್ನು ಕೂಗಿದರು. ಸಾರ್ವಜನಿಕರು ಇದನ್ನೆಲ್ಲ ದಿಗ್ಭ್ರಮೆಯಿಂದ ನೋಡುತ್ತಾ ನಿಂತಿದ್ದರು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಈ ದಾಳಿಯನ್ನು ನಡೆಸಿದರು.


ಅಂದು ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿರುವ ಆಫೀಸ್‌ನಿಂದ ಹೊರಟ ಜನವಾದಿ ಮಹಿಳಾ ಸಂಘಟನೆಯ ರ್‍ಯಾಲಿಯು ಸಿದ್ದೇಶ್ವರ ಗುಡಿಯ ಹತ್ತಿರ ಬೇರೆಲ್ಲ ಮಹಿಳಾ ಸಂಘಟನೆಯ ಸದಸ್ಯರೊಂದಿಗೆ

→



# ತೊಲಗಲಿ ತೊಲಗಲಿ ವಾಜಪೇಯಿ ಸರ್ಕಾರ

ದೇಶವನ್ನೇ ತಲ್ಲಣಗೊಳಿಸಿರುವ ಮಹಾ ಭ್ರಷ್ಟತೆಯ ರಕ್ಷಣಾ ಹಗರಣದಲ್ಲಿ ಭಾಗಿಯಾಗಿರುವ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ರಾಜೀನಾಮೆ ನೀಡಲೇಬೇಕೆಂದು ಆಗ್ರಹಿಸಿ, ಕರ್ನಾಟಕ ರಾಜ್ಯಾದ್ಯಂತ ಮಾರ್ಚ್ 16 ರಿಂದ 23 ರ ವರೆಗೆ ವ್ಯಾಪಕ ಜನಜಾಗೃತಿ ಆಂದೋಲನ ನಡೆಸಲು ನಿರ್ಧರಿಸಲಾಗಿದೆ. 16 ರಂದು ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ವಾಜಪೇಯಿ ರಾಜೀನಾಮೆಗೆ ಒತ್ತಾಯಿಸಿ ಮತಪ್ರದರ್ಶನ, ಮೆರವಣಿಗೆ, ಭೂತದಹನ ನಡೆಸುವುದರ ಮೂಲಕ ಆರಂಭಗೊಳ್ಳುತ್ತಿದ್ದು, 23 ರವರೆಗೆ ಬಹಿರಂಗಸಭೆಗಳು ನಡೆಯಲಿದ್ದು, 19 ರಂದು ಮೈಸೂರು, 20 ರಂದು ಗುಲ್ಬರ್ಗಾ, 22 ರಂದು ಬೆಂಗಳೂರಿನಲ್ಲಿ ಬೃಹತ್ ಬಹಿರಂಗ ಸಭೆಗಳು ಜರುಗುವುದು. ಇದರಲ್ಲಿ ಸಿಪಿಐ(ಎಂ), ಸಿಪಿಐ, ಜನತಾದಳ(ಎಸ್) ಹಲವೆಡೆ ಜನತಾದಳ(ಯು), ಕ.ರಾ.ರೈತ ಸಂಘ(ಪುಟ್ಟಣ್ಣಯ್ಯ)ನವರು ಜಂಟಿಯಾಗಿ ಭಾಗವಹಿಸಲಿದ್ದಾರೆ. ಅದೇ ರೀತಿ ದೇಶದಾದ್ಯಂತ ಆಂದೋಲನ ನಡೆಯುತ್ತಿದ್ದು ಭ್ರಷ್ಟಾಚಾರದ ಹಗರಣ ಬೆಳಕಿಗೆ ಬಂದ ಕೂಡಲೇ ನಡೆದ ಪ್ರತಿಭಟನೆಯ ವರದಿಗಳು ಇಲ್ಲಿವೆ.



ಬೆಂಗಳೂರಿನಲ್ಲಿ ಪ್ರತಿಭಟನೆ

**ಬೆಂಗಳೂರು:** ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಮಾರ್ಚ್ 15 ರಂದು ಸಂಜೆ ಜನನಿಬಿಡ ಮೈಸೂರು ಬ್ಯಾಂಕ್ ಚೌಕದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ಭ್ರಷ್ಟ ವಾಜಪೇಯಿ ಸರ್ಕಾರ ಈ ಕೂಡಲೇ ರಾಜೀನಾಮೆ ನೀಡೇಕೆಂದು ಚಳುವಳಿಕಾರರು ಒತ್ತಾಯಿಸಿದರು. ಧರಣಿಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಎಸ್.ವೈ.ಗುರುಶಾಂತ್, ವಿ.ಜೆ.ಕೆ.ನಾಯರ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ್, ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಮಾತನಾಡಿ ವಾಜಪೇಯಿ ಸರಕಾರ ರಾಜೀನಾಮೆ ನೀಡುವರೆಗೂ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಿ ಜನರನ್ನು ಜಾಗೃತಿಗೊಳಿಸಲು ಕರೆ ನೀಡಿದರು.

ಮಾರ್ಚ್ 16 ರಂದು, ಗುಲ್ಬರ್ಗ, ಬಳ್ಳಾರಿ, ತುಮಕೂರು, ಭಟ್ಕಳ, ಮೈಸೂರು, ಮಳವಳ್ಳಿ, ಕೋಲಾರ, ಬಾಗೇಪಲ್ಲಿ, ಗೌರಿಬಿದನೂರು, ಶ್ರೀನಿವಾಸಪುರ, ಕೆ.ಜಿ.ಎಫ್. ಪಲ್ಲಿ ಪ್ರತಿಭಟನೆ ನಡೆದ ವರದಿಗಳು ಬಂದಿದ್ದು 17 ರಂದು ಚಿಂತಾಮಣಿಯಲ್ಲಿ ಪ್ರತಿಭಟನೆ ನಡೆಸಿ ವಾಜಪೇಯಿ ಸರ್ಕಾರದ ರಾಜೀನಾಮೆಗೆ ಒತ್ತಾಯಿಸಲಾಗಿದೆ. ಮಾಜಿ ಶಾಸಕ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿ ಕೋಲಾರದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಗುಲ್ಬರ್ಗಾದಲ್ಲಿ ನಡೆದ 300 ಕ್ಕೂ ಹೆಚ್ಚು ಜನರ ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಮಾಜಿ ಸಚಿವ ಜೆಡಿ(ಯು) ನ ಎಸ್.ಕೆ.ಕಾಂತ, ಜೆಡಿ(ಎಸ್), ಸಿಪಿಐ ಮುಖಂಡರು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ. ನೀಲಾ ನೇತೃತ್ವ ವಹಿಸಿದ್ದರು.

**'ಹಲ್ಕಾಗಳನ್ನು ಬಯಲಿಗೆಳೆದ ತೆಹೆಲ್ಕಾ'**
ವರದಿಗಳು - 6, 7, 8, 9,10 .....

# ಭಿನ್ನ ಭೇದವ ಮಾಡಬೇಡಿರೋ ಇಲ್ಲಿಯ ಉನ್ನತ ತನವನು ನೋಡಿರೋ..

## ಹೀಗೊಂದು ವಿಶಿಷ್ಟ ಮದುವೆ




ಭಿನ್ನ ಬೇಧವ ಮಾಡಬೇಡಿರೋ
ಇಲ್ಲಿನ ಉನ್ನತ ತನವನು ಕಾಣಿರೋ
........

ಹಸಿದವನು ಹೊಲೆಯ, ಸುಸ್ತಾದವನು ಚಾಂಡಾಲ ಎಂಬ ಶರಣರ ಗೀತೆಗೆ ಸಾಕ್ಷಿ ಪ್ರಜ್ಞೆಯಾಗಿದ್ದು ಬೆಂಗಳೂರು ನಗರದ ಕುಮಾರ ಪಾರ್ಕ್‌ನ ಗಾಂಧಿಭವನ.

ಹೌದು, ಮಾರ್ಚ್ 10, 2001 ಶನಿವಾರದ ಸುಂದರ ಸಂಜೆಯಲ್ಲಿ ಜಾತಿ, ಭಾಷೆ, ಅಂತಸ್ತುಗಳ ಗಡಿಗಳನ್ನು ಮೀರಿದ ಭಾರತ ವಿದ್ಯಾರ್ಥಿ ಫೆಡರೇಷನ್(SFI) ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್, ಉಪಾಧ್ಯಕ್ಷೆ ಬೆಂಗಳೂರು ವಿ.ವಿ.ಯ ಸೆನೆಟ್ ಸದಸ್ಯೆ ಕೆ.ಎಸ್.ಲಕ್ಷ್ಮಿಯವರ ಜಾತಿ ರಹಿತ ವಿವಾಹವು ವಿನೂತನವಾಗಿ ಅತ್ಯಂತ ವಿಶಿಷ್ಟವಾಗಿ 'ಅಂತರಜಾತಿಯ ವಿವಾಹ ಮತ್ತು ಭಾರತದ ಪ್ರಸ್ತುತ ಸಮಾಜ' ಎಂ ರಾಜ್ಯಮಟ್ಟದ ವಿಚಾರಸಂಕಿರಣ ನಡೆಯುವುದರ ಮೂಲಕ ನೆರವೇರಿತು.

> "ವಿವಾಹವೆಂದರೆ ಲೈಂಗಿಕತೆಗೆ ಒಂದು ಶಿಸ್ತು ನೀಡಿ ವಂಶಾಭಿವೃದ್ಧಿ ಎಂಬ ನಿಸರ್ಗದ ಲಯಕ್ಕೆ ಪೂರಕವಾಗುವ ಒಂದು ವ್ಯವಸ್ಥೆ ಮಾತ್ರ. ಆದರೆ ಇಂದು 'ಮದುವೆ' ಅಂದರೆ ಭ್ರಷ್ಟಾಚಾರ, ಪ್ರತಿಷ್ಠೆ, ಆಡಂಬರ, ವಧುದಹನ, ಕೊಲೆ ಎಂಬ ಹಂತ ನಾವು ತಲುಪಿದ್ದೇವೆ. ಒಂದು ಸಾಂಸ್ಕೃತಿಕ ಕ್ರಾಂತಿಗಾಗಿ ನಮ್ಮ ಯುವ ಜನಾಂಗ ತಯಾರಾಗಬೇಕಾಗಿದೆ."
>
> **ಕೆ.ಎಸ್. ಪುಟ್ಟಣ್ಣಯ್ಯ**

ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಹತ್ತಾರು ಪ್ರಜಾಸತ್ತಾತ್ಮಕ ಚಳುವಳಿಯ ಮುಖಂಡರು, ವಿವಿಧ ಕ್ಷೇತ್ರಗಳ ನೂರಾರು ಗಣ್ಯರು, ಬುದ್ಧಿಜೀವಿಗಳ ಸಮ್ಮುಖದಲ್ಲಿ ನಡೆದ ವಿನೂತನ ವಿವಾಹದಲ್ಲಿ ತಾಳಿ, ಮಂತ್ರಘೋಷಗಳಿಲ್ಲದೆ, ಓಲಗ, ಭಾಜಭಜಂತ್ರಿಗಳಿಲ್ಲದೆ ಸರಳವಾಗಿ ನಡೆಯಿತು. ನಡು ನಡುವೆ ಕೆಂಪು ಗುಲಾಬಿಗಳಿರುವ ಮಲ್ಲಿಗೆ ಮೊಗ್ಗಿನ ಹಾರಗಳ ಪರಸ್ಪರ ವಿನಿಮಯವೇ ಮದುವೆ. ಮದುವೆ ಹಿನ್ನೆಲೆಯಲ್ಲಿ ವಿಚಾರ ಸಂಕಿರಣ.

ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು ಖ್ಯಾತ ವಿಚಾರವಾದಿಗಳು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಆದ ಡಾ. ಎಚ್.ನರಸಿಂಹಯ್ಯ ನೆರವೇರಿಸಿ ಅಂತರ ಜಾತೀಯ ವಿವಾಹವು ಒಂದು ಜಾತಿಯ ಸಂಖ್ಯೆಯನ್ನು ಕಡಿಮೆ ಮಾಡಿ ಇನ್ನೊಂದು ಜಾತಿಯ ಸಂಖ್ಯೆಯನ್ನು ಹೆಚ್ಚಿಸುವ ವಿವಾಹ ಆಗಿರುವುದರಿಂದ ಇದನ್ನು ಜಾತಿರಹಿತ ವಿವಾಹವೆಂದು ಕರೆಯಬೇಕು, ಇಂತಹ ವಿವಾಹಗಳಿಗೆ ಮಾಧ್ಯಮಗಳು ಹೆಚ್ಚಿನ ಪ್ರಚಾರ ಕೊಡಬೇಕು. ಜಾತಿ ಒಂದು ದೊಡ್ಡ ದುರಂತ ಇಂದಿನ ಎಲ್ಲಾ ಸಮಸ್ಯೆಗಳ ಹಿಂದೆ ಜಾತಿ ಸಮಸ್ಯೆ ಹೊಸೆದುಕೊಂಡಿದೆ. ಆದ್ದರಿಂದ ನಮ್ಮ ಧರ್ಮ ಮನುಷ್ಯ ಕೇಂದ್ರಿತ ಧರ್ಮವಾಗಬೇಕು, ದೇವರು ಕೇಂದ್ರಿತ ಧರ್ಮವಲ್ಲ ಎಂದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಜಿ.ಎನ್.ನಾಗರಾಜ್ ಮಹಿಳೆಗೆ ಸಮಾಜದ ಕೆಳಜಾತಿಗೆ ವಿದ್ಯೆ-ಆಸ್ತಿ ವಂಚನೆ ಒಟ್ಟಾರೆ, ಶೇ 90 ಕ್ಕಿಂತ ಹೆಚ್ಚು ಜನರನ್ನು ವಿದ್ಯೆಯಿಂದ ದೂರವಿಟ್ಟದ್ದು ಜಾತಿ ವ್ಯವಸ್ಥೆ. ಇದರ ಫಲವನ್ನು ಈಗ ನೋಡುತ್ತಿದ್ದೇವೆ, ಇಂದು ನಡೆಯುತ್ತಿರುವ ಜಾತಿರಹಿತ ವಿನೂತನ ಮದುವೆ ಸುಮಾರು 800 ವರ್ಷಗಳ ಹಿಂದೆ ಬಸವಣ್ಣನವರು ಪ್ರಾರಂಭಿಸಿದ, ಹರಿಭಕ್ತ, ಹರಿದಾಸರು ಮುಂದುವರೆಸಿದ ಪರಂಪರೆ. ಇದನ್ನು ನಾವೆಲ್ಲರೂ ಭಾರತದ ಪರಂಪರೆಯನ್ನಾಗಿ ಮಾಡೋಣ ಎಂದು ಕರೆ ನೀಡಿದರು.

ರಾಜ್ಯ ರೈತ ಸಂಘದ ಕೆ.ಎಸ್. ಪುಟ್ಟಣ್ಣಯ್ಯನವರು ಮಾತನಾಡಿ ಜಾತಿ ಪದ್ಧತಿಯಿಂದ ದಿನವೂ ಭೂಕಂಪವಾಗುತ್ತಿದೆ. ಈ ದೇಶದಲ್ಲಿರುವ ಹುಚ್ಚಾಸ್ಪತ್ರೆಗಳೆಂದರೆ ಅವು ಮಂದಿರ, ಮಸೀದಿ, ಚರ್ಚುಗಳು, ಆಡಂಬರದ ಅದ್ದೂರಿ ವಿವಾಹಗಳು ಭ್ರಷ್ಟಾಚಾರದ ಪೋಷಣೆಗೆ ಮುಖ್ಯ ಕಾರಣ. ಈ ತುರ್ತು ಸಾಂಸ್ಕೃತಿಕ ಕ್ರಾಂತಿಯಾಗದ ಹೊರತು ಬದಲಾವಣೆ ಅಸಾಧ್ಯ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಸಾಹಿತಿ ಪ್ರೊ। ಚಂದ್ರಶೇಖರ್ ಪಾಟೀಲ ಶುಭ ಹಾರೈಸಿ ಮಾತನಾಡಿದರು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ। ಸೂರ್ಯನಾರಾಯಣರಾವ್ ವಹಿಸಿದ್ದರು. ನೂತನ ದಂಪತಿಗಳಿಗೆ ಶುಭಾಶಯಗಳನ್ನು ಕೋರಿ ಅವರು ಮಾತನಾಡಿದರು. ಜನವಾದಿ ಮಹಿಳಾ

ಪುಟ 11 ಕ್ಕೆ

> 16-19ನೇ ಶತಮಾನದವರೆಗೂ ಜ್ಞಾನ-ತಂತ್ರಜ್ಞಾನದ ನೆಲೆಯಲ್ಲಿ ಇತರ ರಾಷ್ಟ್ರಗಳೊಂದಿಗೆ ಸಮಬಲವಾಗಿಯೇ ಇದ್ದ ಇಂಡಿಯಾ ಅನಂತರ ಹಿಂದುಳಿದು ಬಿಡಲು ಕಾರಣ, ಇಲ್ಲಿಯ ವೈದಿಕಶಾಹಿ ಬಹುಸಂಖ್ಯಾತರಿಗೆ ಅಕ್ಷರದ, ಜ್ಞಾನದ ಅವಕಾಶ ನಿರಾಕರಿಸಿದ್ದು.
>
> **- ಜಿ.ಎನ್. ನಾಗರಾಜ್**

ನಗರದ ವಿವಿಧ ಭಾಗಗಳಲ್ಲಿ ಸಂಚರಿಸಿದರು. ರ್‍ಯಾಲಿಯುದ್ದಕ್ಕೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಜಯವಾಗಲಿ, ಅಶ್ಲೀಲ ಚಿತ್ರ ಪ್ರದರ್ಶನಕ್ಕೆ ಧಿಕ್ಕಾರ, ಮಹಿಳೆಯರ ಮೇಲೆ ದೌರ್ಜನ್ಯಕ್ಕೆ ಧಿಕ್ಕಾರ, ಅನ್ಯಾಯೋ-ಅತ್ಯಾಚಾರಕ್ಕೆ ಧಿಕ್ಕಾರ, ಮಹಿಳೆಯರಿಗೆ ಸಮಾನತೆ ಹಕ್ಕು ಮುಂತಾದ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ರ್‍ಯಾಲಿಯು ಬಸವ ವನಕ್ಕೆ ತೆರಳಿ ಸಭೆಯಾಗಿ ಮಾರ್ಪಟ್ಟಿತ್ತು.

ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತೆ ಜಯಲಕ್ಷ್ಮಿಯರನ್ನಾಳ ಅಶ್ಲೀಲ ಚಿತ್ರಪ್ರದರ್ಶನ ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸಿದರು. ಇಲ್ಲವಾದಲ್ಲಿ ಚಿತ್ರಮಂದಿರಗಳ ದಾಳಿ ಮಾಡಲಾಗುವುದೆಂದು ಎಚ್ಚರಿಸಿದರು. ಅದರಂತೆಯೆ ಮದ್ಯಪಾನ ನಿಷೇಧ ಚಳುವಳಿ ಬಲಪಡಿಸಲು ಕರೆನೀಡಿದರು. ಸಮಾಜದ ಸ್ವಾಸ್ಥದ ದೃಷ್ಟಿಯಿಂದ ಮದ್ಯಪಾನ ನಿಷೇಧ ಅಗತ್ಯವಾಗಿದ್ದು ಈ ದಿಸೆಯಲ್ಲಿಯೂ ಹೋರಾಟ ಅಗತ್ಯ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಸುರೇಖಾ ರಜಪೂತ ಅವರು ಮಹಿಳೆಯರ ಮೇಲಿನ ದೌರ್ಜನ್ಯ, ಶೋಷಣೆಗಳನ್ನು ತಡೆಗಟ್ಟಲು ಜಾಗೃತಿ ವೇದಿಕೆ ರಚನೆಗೆ ಸಲಹೆ ಮಾಡಿದರು. ಸಂಘಟಿತ ಹೋರಾಟಕ್ಕೆ ಯಶಸ್ಸು ಖಂಡಿತ. ಒಗ್ಗಟ್ಟು ಪ್ರದರ್ಶಿಸಬೇಕೆಂದು ಕರೆನೀಡಿದರು.

ಬಸವವನದ ಹಸಿರು ಹುಲ್ಲುಹಾಸಿನ ಮೇಲೆ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜನವಾದಿ ಮಹಿಳಾ ಸಂಘಟನೆ ಪ್ರಮುಖ ಪಾತ್ರವಹಿಸಿ ಒಟ್ಟು 35 ವಿವಿಧ ಮಹಿಳಾ ಸಂಘಟನೆಗಳು ಒಂದೇ ವೇದಿಕೆಯ ಮೇಲೆ ಸಂಘಟಿತರಾಗಿ ಭಾಗವಹಿಸುವಂತೆ ಮಾಡಿತು. ಶಿಕ್ಷಣ, ಜಾಗೃತಿ ಹಾಗೂ ಹೋರಾಟದಿಂದ ಮಾತ್ರ ಮಹಿಳೆಯರ ಶೋಷಣೆಗೆ ಮುಕ್ತಾಯ, ಸರಿಸಮಾನ ಅವಕಾಶ, ಸರಕಾರ ರೂಪಿಸಿದ ಹಲವಾರು ಯೋಜನೆಗಳ ಸರಿಯಾದ ಪ್ರಯೋಜನ ಪಡೆಯಲು ಕಾರ್ಯಕ್ರಮ ಕುರಿತಂತೆ ಹಲವಾರು ವಿಷಯಗಳ ಮೇಲೆ ಸುದೀರ್ಘ ಚರ್ಚೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಪತ್ರಕರ್ತರು ಭಾಗವಹಿಸಿ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಿದರು. ವಿವಿಧ ಮಹಿಳಾ ಸಂಘನೆಗಳೊಂದಿಗೆ ಜನವಾದಿ ಮಹಿಳಾ ಸಂಘಟನೆ ಸಂಯುಕ್ತವಾಗಿ ರೂಪಿಸಿದ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು.

ವರದಿ: ವೀರಣ್ಣ ಹಳ್ಳಿ

# ವಿಕ್ರಾಂತ್ ಟೈರ್ಸ್: ಶರಣಾಗದೆ ಸೆಣಸಿದ ಕಾರ್ಮಿಕರು

ಮೈಸೂರು ನಗರದ ಪ್ರತಿಷ್ಠಿತ ಕಾರ್ಖಾನೆಗಳಲ್ಲೊಂದಾದ ವಿಕ್ರಾಂತ್ ಟೈರ್ಸ್ ಕಾರ್ಖಾನೆಯನ್ನು ಸರ್ಕಾರದ ಆದ್ಯಕ್ಷ ಆಡಳಿತದಿಂದ 1997 ರ ಮೇ ತಿಂಗಳಲ್ಲಿ ಜೆ.ಕೆ.ಟೈರ್ಸ್ ಸಂಸ್ಥೆಯವರೊಡನೆ ಸಹಭಾಗಿತ್ವ ಮಾಡಿ ಕಂಪನಿಯ ಶೇ 51 ರಷ್ಟು ಶೇರುಗಳನ್ನು ಮಾರಿದ ಮೇಲೆ ಸರ್ಕಾರದ ಐಎಎಸ್ ಅಧಿಕಾರಿಗಳ ಬದಲು ಜೆ.ಕೆ.ಟೈರ್ಸ್ ಸಂಸ್ಥೆಯ ಎ.ಕೆ.ಬಜೋರಿಯಾ ಎಂಬುವರು ಅಧ್ಯಕ್ಷರಾದರು, ಆಗ ಕಾರ್ಖಾನೆಯಲ್ಲಿ ಕಾರ್ಮಿಕರು ಮತ್ತು ಅದಿಕಾರಿಗಳು ಸೇರಿ ಸುಮಾರು 3600 ದಷ್ಟು ನೌಕರರಿದ್ದರು. ಈಗ 2400 ನೌಕರರಿದ್ದಾರೆ. ಉಳಿದ 600 ಜನರಲ್ಲಿರುವರು ವಿ.ಆರ್.ಎಸ್.ನಲ್ಲಿ ಕೆಲವರು ನಿವೃತ್ತಿಯಾಗಿದ್ದಾರೆ. ಕಂಪನಿಯ ಆಯುವ್ಯವದಲ್ಲಿ ವೇತನವಾಗಿ ಅದಿಕಾರಿಗಳಿಗೂ ಸೇರಿದಂತೆ ಶೇ. 8 ರಿಂದ 9ರಷ್ಟಿದೆ. ಕಳೆದ 3 ವರ್ಷಗಳಲ್ಲಿ ಕಂಪನಿಯು ಕ್ರಮವಾಗಿ 19 ಕೋಟಿ 17.5 ಕೋಟಿ ಮತ್ತು 14 ಕೋಟಿಯಷ್ಟು ಲಾಭವನ್ನು ಕಳೆದ ಮೂರು ವರ್ಷಗಳಲ್ಲಿ ಕ್ರಮವಾಗಿ 18 ದಿನ, 42 ದಿನ ಮತ್ತು 45 ದಿನಗಳು ಕಾರ್ಮಿಕರಿಗೆ ಕುಂಟು ನೆಪಮಾಡಿ ವೇತನ ಕೊಡದೆ ಗಳಿಸಿರುವ ಲಾಭ.

**ವೇತನಭತ್ಯ ಕಡಿತಕ್ಕೆ ಆಡಳಿತ ವರ್ಗ**


ಸಂಘದ ವೇತನ ಒಪ್ಪಂದವು 30.9.99ಕ್ಕೆ ಕೊನೆಯಾಗಬೇಕಿತ್ತಾದರೂ ಆಡಳಿತ ವರ್ಗವು ಮುಂಚೆಯೇ ವೇತನ ಒಪ್ಪಂದ ಮಾಡಿಕೊಳ್ಳುವುದಾಗಿ ಎಂದರೆ 1.2.99ಕ್ಕೆ ಒಪ್ಪಂದ ಮಾಡಿಕೊಳ್ಳಬೇಕೆಂದು ಸಂಘದಿಂದ ದಿನಾಂಕ 18.12.98ರಲ್ಲಿ ಕಾರ್ಮಿಕ ಸಂಘದ ಬೇಡಿಕೆ ಪಟ್ಟಿಯನ್ನು ಪಡೆಯಿತು. ನಂತರ ಆಡಳಿತ ವರ್ಗವು ಒಂದು ಬೇಡಿಕೆ ಪಟ್ಟಿಯನ್ನು ಸಂಘಕ್ಕೆ ನೀಡಿತು. ಆಡಳಿತ ವರ್ಗ ಮಾಡಿದ ಬೇಡಿಕೆ ಪಟ್ಟಿಯನ್ನು ಎಲ್ಲಾ ಕಾರ್ಮಿಕರಿಗೂ ಸಂಘವು ಹಂಚಿತು. ಆಡಳಿತ ವರ್ಗದ ಬೇಡಿಕೆ ಪಟ್ಟಿಯಲ್ಲಿ ಆಡಳಿತ ವರ್ಗ ತಿಳಿಸಿದ್ದೇನೆಂದರೆ ಒಟ್ಟಾರೆಯಾಗಿ ಕಾರ್ಮಿಕರು ವಿಕ್ರಾಂತ್‌ನಲ್ಲಿ ಮಾಡುತ್ತಿರುವ ಕೆಲಸ ಕಡಿಮೆ ಪಡೆಯುತ್ತಿರುವ ವೇತನ ಮತ್ತು ಭತ್ಯೆಗಳನ್ನು ಕಡಿತ ಮಾಡಲಾಗುತ್ತದೆ ಎಂದು ಮತ್ತು ಎಷ್ಟು ಪರಿಮಾಣಗಳನ್ನು ಕೆಲಸ ಹೆಚ್ಚುಮಾಡಬೇಕೆಂದು ತಿಳಿಸಿದ್ದರು, ಹೀಗಿದ್ದಾಗ್ಯೂ ಕಂಪನಿಯ ಆಡಳಿತವರ್ಗ ಕಾರ್ಮಿಕರ ಬೇಡಿಕೆಗಳ ಬಗ್ಗೆ ಉದ್ದೇಶ ಪೂರ್ವಕವಾಗಿಯೇ ನಿಧಾನಗತಿಯನ್ನು ಅನುಸರಿಸಿಕೊಂಡು ಬಂತು. ಇದರ ಮಧ್ಯೆ ಕಾರ್ಖಾನೆಯ ಕೆಲವು ವಿಭಾಗಗಳಲ್ಲಿ ಕೆಲಸದ ವಿಧಾನಗಳನ್ನು ಬದಲಿಸಿ ಮತ್ತು ಕೆಲವು ಹೊಸ ಯಂತ್ರಗಳನ್ನು ತಂದು ಉತ್ಪಾದನೆಯನ್ನು ಹೆಚ್ಚಿಸಿತು. ಆದಾಗ್ಯೂ ಆಡಳಿತ ವರ್ಗವು ಕಾರ್ಮಿಕರ ಬೇಡಿಕೆಗಳ ಬಗ್ಗೆ ಚಕಾರವೆತ್ತಲಿಲ್ಲ ಬದಲಿಗೆ ಕರಪತ್ರಗಳನ್ನು ಮುದ್ರಿಸಿ ಸಂಘದ ನಾಯಕರು ವೇತನ ಒಪ್ಪಂದದ ಬಗ್ಗೆ ಸರಿಯಾಗಿ ಮಾತನಾಡುತ್ತಿಲ್ಲ. ಉತ್ಪಾದನೆಯ ಬಗ್ಗೆ ಚರ್ಚಿಸುತ್ತಿಲ್ಲ ಎಂದೆಲ್ಲಾ ಅಪಪ್ರಚಾರ ಮಾಡಿಕೊಂಡೇ ಬಂತು. ಇದಕ್ಕೆ ಪ್ರತಿಯಾಗಿ ಸಂಘದ ನಾಯಕರು ಕರಪತ್ರಗಳನ್ನು ಪ್ರಕಟಿಸಿ, ದ್ವಾರ ಸಭೆಗಳನ್ನು ನಡೆಸಿ ಕಾರ್ಮಿಕರನ್ನು ಜಾಗೃತಿಯಲ್ಲಿ ಇಡಲಾಯಿತು. ಹಾಗೆಯೇ 2 ವರ್ಷಗಳು ಕಳೆದರೂ ಸಂಘದ ನಾಯಕತ್ವದ ಚುನಾವಣೆ ನಡೆದರೂ ಸಂಘದ ಜೊತೆ ವೇತನ ಒಪ್ಪಂದವಾಗಲಿಲ್ಲ.

ಕಾರ್ಮಿಕರು ಆಡಳಿತ ವರ್ಗದ ಧೋರಣೆಯ ಬಗ್ಗೆ ಬೇಸತ್ತರು, ಆಡಳಿತ ವರ್ಗ ಎಷ್ಟೆ ಷಡ್ಯಂತ್ರಗಳನ್ನು ಸೃಷ್ಟಿಸಿದರು ಕಾರ್ಮಿಕರು ಆಡಳಿತ ವರ್ಗದ ಆಟ ನಡೆಯದ ಹಾಗೆ ಮಾಡಿ ಜನವರಿ 2 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನಿಸಿಯೇ ಬಿಟ್ಟರು. ಇದನ್ನರಿತ ಆಡಳಿತ ವರ್ಗವು ಕಾರ್ಮಿಕರಲ್ಲಿ ಗೊಂದಲವನ್ನುಂಟು ಮಾಡಲು ಹಾಗೂ ಮುಷ್ಕರವನ್ನು ತಡೆಯಲು ಯತ್ನಿಸಿದರು. ಸಂಘದ ಸಲಹೆಗಾರರಾದ ಸೂರ್ಯ ನಾರಾಯಣರಾವರವರನ್ನು ಭೇಟಿ ಮಾಡಿ ವೇತನ ಒಪ್ಪಂದ ಸಂಬಂಧ ಪಟ್ಟಂತೆ ಆಡಳಿತ ವರ್ಗವು 700 ರೂಪಾಯಿಗಳನ್ನು ಕೊಡಲು ಮುಂದೆ ಬಂದಿದೆ ಎಂದು ತಿಳಿಸಿದರು. ಅದರಂತೆ ಕಾಂ। ಸೂರಿಯವರು ಆಡಳಿತವರ್ಗದ 700 ರೂಗಳ ಬಗ್ಗೆ ಸಂಘದ ಸಭೆಯಲ್ಲಿ ತಿಳಿಸಿದರು. ಇದನ್ನು ತಿಳಿದ ಆಡಳಿತ ವರ್ಗ ಮರುದಿನವೇ ನಾನು ಆ ರೀತಿ ಹೇಳಿಲ್ಲ ಎಂದು ತಿಳಿಸಿತು. ಈ ರೀತಿಯಲ್ಲಿ ಆಡಳಿತ ವರ್ಗ ಕಾರ್ಮಿಕರಲ್ಲಿ ಅಶಾಂತಿ ಉಂಟು ಮಾಡಲು ಮತ್ತು ಐಕ್ಯತೆಯನ್ನು ಒಡೆಯಲು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾದವು. ನಂತರ ಆಡಳಿತ ವರ್ಗ ಉಪಕಾರ್ಮಿಕ ಮತ್ತು ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಸಭೆ ಏರ್ಪಡಿಸಿತು, ಅಲ್ಲಿ ಜಾಯಿಂಟ್ ಲೇಬರ್ ಕಮಿಷನರವರು ಸೂಚಿಸಿದ್ದ 500 ರೂಗಳ ಮಧ್ಯಂತರ ಪರಿಹಾರವನ್ನು ಆಡಳಿತ ವರ್ಗ ಒಂದು ವಾರದ ನಂತರ ತಿಳಿಸುವುದಾಗಿ ಹೇಳಿ ಕೊನೆಗೆ ಸಾಧ್ಯವಿಲ್ಲ ವೆಂದು ಮಾತುಕತೆ ಮುರಿದು ಬಿತ್ತು. ಕೊನೆಗೆ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಪಡೆಯಲು ಜನವರಿ 12 ರಿಂದ ಅನಿರ್ದಿಷ್ಟ ಕಾಲ ಮುಷ್ಕರಕ್ಕೆ ಇಳಿದರು.

ಮುಷ್ಕರ ಪ್ರಾರಂಭವಾದ ಮೇಲೆ ಕಾರ್ಮಿಕರು ಯಾವ ಕಾರಣಕ್ಕೂ ಆಡಳಿತ ವರ್ಗ ಪಟ್ಟು ಹಿಡಿದಿರುವ ಉತ್ಪಾದನಾ ಪರಿಮಾಣವನ್ನು ಕೊಡಲು ಸಾಧ್ಯವಿಲ್ಲವೆಂದು, ಕೆಲಸದ ಹೊರೆಯನ್ನು ಎಷ್ಟು ಹೊರಲು ಸಾಧ್ಯವೋ ಅಷ್ಟು ಮಾತ್ರ ಸಾಧ್ಯ ಎಂದು ಪಟ್ಟು ಹಿಡಿದರು. ಆದರೆ ಆಡಳಿತ ವರ್ಗ ಏಕಪಕ್ಷೀಯವಾಗಿ ಒಂದು ಪಾಳಿಯಲ್ಲಿ 810 ಟೈರುಗಳು ಬೇಕೆ ಬೇಕು ಎಂದು ಪಟ್ಟು ಹಿಡಿದರು. ಕಾರ್ಮಿಕ ಆಯುಕ್ತರು ಸಹ ಆಡಳಿತ ವರ್ಗದ ಧೋರಣೆಯನ್ನು ಒಪ್ಪಲಿಲ್ಲ. ಕೊನೆಗೆ ಮುಷ್ಕರ ಮುಂದುವರೆಯಲು ಆಡಳಿತ ವರ್ಗವೇ ಕಾರಣವಾಯಿತು.

**ವಿಸ್ತರಿಸಿದ ಹೋರಾಟ**

ಮುಷ್ಕರ ನಿರತ ಕಾರ್ಮಿಕರು ಮೈಸೂರಿನ ಜನತೆಗೆ ಮತ್ತು ಜನ ಪ್ರತಿನಿಧಿಗಳಿಗೆ ತಮ್ಮ ಅಹವಾಲನ್ನು ತಿಳಿಸಿದರು. ಮುಷ್ಕರ ನಿರತ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಆಡಳಿತ ವರ್ಗದ ಧೋರಣೆಯನ್ನು ಖಂಡಿಸಿದರು, ಹಾಗೆಯೇ ಕಾರ್ಮಿಕ ಸಂಘವು ಹಮ್ಮಿಕೊಳ್ಳುವ ಹೋರಾಟಕ್ಕೆ ತಮ್ಮ ಬೆಂಬಲವಿದೆಯೆಂದು ತಿಳಿಸಿದರು. ಇದರ ಅಂಗವಾಗಿಯೇ ಸಂಘವು ಮುಷ್ಕರ ಪ್ರಾರಂಭ ವಾಗುವುದಕ್ಕೆ ಮುಂಚೆಯೇ ವಿಕ್ರಾಂತ್ ಟೈರ್, ಕಾರ್ಮಿಕರು ಆಡಳಿತ ವರ್ಗದ ಹೊರಲಾಗದ ಶ್ರಮಬಾರದ ವಿರುದ್ಧ ಹೋರಾಟಕ್ಕೆ ಹೋಗ ಬಹುದು, ಅದಕ್ಕೆ ಮೈಸೂರು ನಗರದ ಸಾರ್ವಜನಿಕರು ಬೆಂಬಲ ನೀಡಬೇಕೆಂದು 10,000 ಕರಪತ್ರಗಳನ್ನು ಪ್ರಕಟಿಸಿ ದಿನಾಂಕ ಜನವರಿ 4 ಮತ್ತು 5 ರಂದು ಎರಡು ದಿನಗಳು ಮೈಸೂರು ನಗರದ ಜನರಿಗೆ ಜೆ.ಕೆ.ಐ ಆಡಳಿತ ವರ್ಗದ ಕಪಿಮುಷ್ಟಿ ಧೋರಣೆಯನ್ನು ವಿವರಿಸಿ ಸಾರ್ವಜನಿಕವಾಗಿ ಬೆಂಬಲ ಪಡೆದಿದ್ದೆವು. ಮುಷ್ಕರ ಪ್ರಾರಂಭವಾದ ಮೇಲೆ ಮತ್ತು ಮೊದಲು ಎಲ್ಲಾ ರಾಜಕೀಯ ಪಕ್ಷಗಳ ಮತ್ತು ಕಾರ್ಮಿಕ ಸಂಘಟನೆಗಳ ಸಭೆ ಕರೆದು ಹೋರಾಟ ನಿರತ ಕಾರ್ಮಿಕರ ಸೌಹಾರ್ದ ಸಮಿತಿಯನ್ನು ರಚಿಸಿದ್ದೆವು. ಒಂದು ಕಡೆ ಆಡಳಿತ ವರ್ಗ ಕಾರ್ಮಿಕ ಆಯುಕ್ತರು ಮತ್ತು ಸಂಘದ ಪ್ರತಿನಿಧಿಗಳೊಡನೆ ಮಾತುಕತೆ ನಡೆಯುತ್ತಿದ್ದರೆ ಮತ್ತೊಂದೆಡೆ ಹೋರಾಟದ ಬಗ್ಗೆ ಚರ್ಚಿಸಿ ಕಾರ್ಮಿಕರನ್ನು ಕಾರ್ಯಕ್ರಮಗಳಿಗೆ ಇಳಿಸಿ ಸಾರ್ವಜನಿಕರ ಸಹಾನುಭೂತಿಯನ್ನು ಪಡೆಯಲಾಗುತ್ತಿತ್ತು. ಹಾಗೆಯೇ ನಗರದ ಎಲ್ಲಾ ಕಾರ್ಮಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ನಾಯಕರನ್ನು ಸೇರಿಸಿಕೊಂಡು ದಿನಾಂಕ ಫೆಬ್ರವರಿ 16 ರಂದು ವಿಧಾನಸೌದ ಚಲೋ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಅಂದು ಎಲ್ಲಾ ಕಾರ್ಮಿಕರು ಮತ್ತು ಬೇರೆ ಸಂಘಗಳ ಹಿತೈಷಿಗಳು ನಗರದ ಕೆಲವು ಕೌನ್ಸಿಲರುಗಳು ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ಬಾಗವಹಿಸಿ ವಿಕ್ರಾಂತ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಹಾಗೆಯೇ ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ಬಾಗವಹಿಸಿದ್ದ 2000 ಕಾರ್ಮಿಕರಿಗೆ ಮದ್ಯಾಹ್ನದ ಲಘು ಉಪಹಾರದ ವ್ಯವಸ್ಥೆಯನ್ನು ಮೈಕೊ ಕಾರ್ಮಿಕ ಸಂಘ ಮಾಡಿ, ಸೌಹಾರ್ಧತೆ ವ್ಯಕ್ತಪಡಿಸಿದರು. ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ಖುದ್ದಾಗಿ ಕಾರ್ಮಿಕ ಮಂತ್ರಿಗಳು ಬಂದು ಮನವಿಯನ್ನು ಸ್ವೀಕರಿಸಿ ಸರ್ಕಾರದೊಡನೆ ಮಾತುಕತೆ ನಿಗದಿಪಡಿಸುವುದಾಗಿ ಭರವಸೆ ನೀಡಿದರು. ಫೆ. 23 ರಂದು ಪುನಃ ವಿಕ್ರಾಂತ್ ಕಾರ್ಮಿಕರ ಬೆಂಬಲಕ್ಕೆ ನಿಂತ ಎಲ್ಲಾ ಕಾರ್ಮಿಕ ಸಂಘಗಳು, ಪ್ರಗತಿಪರ ಸಂಘಗಳು, ಮತ್ತು ರಾಜಕೀಯ ಪಕ್ಷಗಳ ನಾಯಕರ ಸಭೆಯನ್ನು ಸೂರ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಕರೆದು ವಿಕ್ರಾಂತ್ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸದಿದ್ದರೆ ಮಾರ್ಚ್ 12 ರಂದು ಮೈಸೂರು ಬಂದ್ ನಡೆಸಬೇಕೆಂದು ತೀರ್ಮಾನಿಸಲಾಯಿತು. ಹೋರಾಟ ಸಮಿತಿಗೆ ಮುಖಂಡರಾಗಿ ಮೈಸೂರಿನ ಮಾಜಿ ಮೇಯರರಾದ ಶ್ರೀ ನಾರಾಯಣ್ ಅಧ್ಯಕ್ಷರಾಗಿ ಆಯ್ಕೆಯಾದರು.



ಹೋರಾಟಕ್ಕೆ ಹುಮ್ಮಸ್ಸು ತುಂಬಿತ ಸಭೆಗಳು

**ಮುಖ್ಯಮಂತ್ರಿಗೆ ಘೆರಾವೋ**

ಫೆ. 25 ರಂದು ರಾಜ್ಯದ ಮುಖ್ಯಮಂತ್ರಿಗಳು ಮೈಸೂರಿಗೆ ಭೇಟಿ ನೀಡಿ ಆಶ್ರಯಯೋಜನೆ ಕಾರ್ಯಕ್ರಮದಲ್ಲಿ ಪುರಭವನದಲ್ಲಿ ಬಾಗವಹಿಸಿದ್ದ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗಿಂತಲೂ ಹೆಚ್ಚು ವಿಕ್ರಾಂತ್ ಕಾರ್ಮಿಕರು ಬೇರೆ ನಿಂತು ಘೋಷಣೆ ಕೂಗಿ ಮುಖ್ಯಮಂತ್ರಿಗಳು ವಿಕ್ರಾಂತ್ ಟೈರ್ಸ್ ಕಾರ್ಮಿಕರ ಬಗ್ಗೆ ಮಾತನ್ನಾಡಬೇಕೆಂದು ಒತ್ತಾಯಿಸಲಾಯಿತು. ದಿನಾಂಕ 27-28 ಫೆಬ್ರವರಿ 2001 ರಂದು ವಿಧಾನಸೌಧದಲ್ಲಿ ಕಾರ್ಮಿಕ ಸಚಿವರು ಮತ್ತು ಕೈಗಾರಿಕಾ ಸಚಿವರೊಡನೆ ನಡೆದ ಮಾತುಕತೆ ಕಾರ್ಮಿಕ ಸಂಘಕ್ಕೆ ಭರವಸೆಯನ್ನು ಮೂಡಿಸಿತ್ತು. ಆದರೂ ಸಂಘವು ದಿನಾಂಕ 3.3. 2001 ರಂದು ನಿಗದಿಪಡಿಸಿದಂತೆ ಕಾರ್ಮಿಕರು ಮತ್ತು ಕಾರ್ಮಿಕ ಕುಟುಂಬದವರ ಮೆರವಣಿಗೆಯನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಒಯ್ದು ಜಿಲ್ಲಾಧಿಕಾರಿಗಳ ಕಛೇರಿ ಬಳಿ ಸಭೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

**ಮೈಸೂರು ಬಂದ್ ಯಶಸ್ವಿ**

ದಿನಾಂಕ ಮಾರ್ಚ್ 5 ರಿಂದ 8 ರವರೆಗೆ ಪುನಃ ಬೆಂಗಳೂರಿನ ವಿಧಾನಸೌಧದಲ್ಲಿ ಕೈಗಾರಿಕಾ ಮಂತ್ರಿ ಆರ್.ವಿ. ದೇಶಪಾಂಡೆ ಯವರೊಡನೆ ಮತ್ತು ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಯಾವುದೇ ಪ್ರಗತಿ ಕಾಣದೆ ಇದ್ದುದರಿಂದ ದಿನಾಂಕ ಮಾರ್ಚ್ 12 ರ ಬಂದ್ ಅನಿವಾರ್ಯವಾಗಿತ್ತು. ಈ ಜವಾಬ್ದಾರಿಯನ್ನು ಎಲ್ಲಾ ಕಾರ್ಮಿಕ ಸಂಗಾತಿಗಳು ತೀರ್ಮಾನದಂತೆ ಎಲ್ಲಾ ರಾಜಕಾರಣಿಗಳು ಸಂಘ ಸಂಸ್ಥೆಗಳನ್ನು ಭೇಟಿ ಮಾಡಿ ಸುಮಾರು 10,ಸಾವಿರ ಕರಪತ್ರಗಳನ್ನು ಮಾಡಿಸಿ ಸಾರ್ವಜನಿಕರನ್ನು ಮುಷ್ಕರನಿರತ ವಿಕ್ರಾಂತ್ ಕಾರ್ಮಿಕರ ಹೋರಾಟಕ್ಕೆ ಬೆಂಬಲಿಸಿ ಬಂದ್ ಆಚರಿಸಬೇಕೆಂದು ಮನವಿ ಮಾಡಿಕೊಳ್ಳಲಾಯಿತು. 2000 ಪೋಸ್ಟರ್‌ಗಳನ್ನು ಅಂಟಿಸಿ ಜನರ ಗಮನವನ್ನು ಬಂದ್‌ಕಡೆಗೆ ಸೆಳೆಯಲಾಯಿತು. ಬಂದ್ ನಡೆಸುವುದಕ್ಕೆ ಮೂರು ದಿವಸ ಮೊದಲೇ ನಾಲ್ಕು ಆಟೋಗಳಲ್ಲಿ ಬೆಳಗ್ಗಿನಿಂದ ಮುಷ್ಕರನಿರತ ವಿಕ್ರಾಂತ್ ಕಾರ್ಮಿಕರ ಹೋರಾಟಕ್ಕೆ ಬೆಂಬಲಿಸಬೇಕು, ಹಠಮಾರಿ ಜೆಕೆ ಆಡಳಿತ ವರ್ಗಕ್ಕೆ ದಿಕ್ಕಾರವಿರಲಿ ಎಂದು ಪ್ರಚಾರ ಪಡಿಸಲಾಗಿತ್ತು. ಹಾಗೆಯೇ ಬಂದ್ ಯಶಸ್ವಿಮಾಡಲು ಹೋರಾಟ ಸಮಿತಿಯ ಅಧ್ಯಕ್ಷರಾದ ಮಾಜಿ ಮೇಯರ್ ಶ್ರೀ ನಾರಾಯಣ್‌ರವರೊಡಗೂಡಿ ಎಲ್ಲಾ ಸಂಘ ಸಂಸ್ಥೆಗಳನ್ನು ಭೇಟಿ ಮಾಡಿ ವಿನಂತಿಸಲಾಗಿತ್ತು. ದಿನಾಂಕ 10.3.2001ರ ಶನಿವಾರದಂದು ಕಾರ್ಮಿಕರು ಗುಂಪುಗೂಡಿ ನಾಲ್ಕು ಭಾಗವಾಗಿ ತೆರಳಿ ಅಂಗಡಿ ಮಾಲೀಕರು ಮತ್ತು ಸಾರ್ವಜನಿಕರನ್ನು ಬಂದ್‌ಗೆ ಬೆಂಬಲಿಸಬೇಕೆಂದು ಕೇಳಿಕೊಳ್ಳಲಾಯಿತು. ಇಷ್ಟೆಲ್ಲದರ ಪರಿಣಾಮವಾಗಿ ದಿನಾಂಕ 12.3.2001 ರಂದು ಮೈಸೂರಿನ ಇತಿಹಾಸದಲ್ಲಿ ಕಂಡರಿಯದಂತಹ ಬಂದ್. ಕಾರ್ಮಿಕ ವರ್ಗಕ್ಕೆ ಸಿಕ್ಕ ಜಯವಾಗಿತ್ತು. ಅಂದು ಕಾರ್ಮಿಕರು ತಾವು ವಾಸಿಸುವ ಪ್ರದೇಶದಿಂದಲೇ ಬೆಳಗ್ಗೆ 6.00 ಗಂಟೆಯಿಂದ ಬಂದ್ ಮಾಡಿಸಿಕೊಂಡು ನಗರದ ಕೇಂದ್ರ ಸ್ಥಾನವಾದ ಕೆ.ಆರ್. ವೃತ್ತಕ್ಕೆ ಬರುವ ಸಮಯಕ್ಕೆ ಇಡೀ ನಗರ ಬಂದ್ ಆಚರಿಸಿ ಹಠಮಾರಿ ಜೆ.ಕೆ. ಸಿಂಘಾನಿಯಾನಿಗೆ ದಿಕ್ಕಾರ ಹೇಳಿ ಕಾರ್ಮಿಕರ ಹೋರಾಟಕ್ಕೆ ಜಯವಾಗಲಿ ಎಂಬ ಘೋಷಣೆಗಳು ಮೊಳಗುತ್ತಿದ್ದವು. ಅಂದು ಕಾಂ। ಸೂರಿ ಮತ್ತು ಬಂದ್ ಬೆಂಬಲಿಸಿದ ರಾಜಕೀಯ ನಾಯಕರೊಡಗೂಡಿ ಬೃಹತ್ ಮೆರವಣಿಗೆಯನ್ನು ಮಾಡಿ ಕೆ.ಆರ್. ವೃತ್ತದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿ ಜೆ.ಕೆ. ಆಡಳಿತ ವರ್ಗವನ್ನು ಖಂಡಿಸಿ ಸರ್ಕಾರದ ಧೋರಣೆಯನ್ನು ಟೀಕಿಸಿ ಸರ್ಕಾರ ವಿಕ್ರಾಂತ್ ಸಮಸ್ಯೆಯನ್ನು ಶೀಘ್ರವಾಗಿ ಬಗೆ ಹರಿಸದಿದ್ದರೆ ಮುಂದೆ ತೀವ್ರವಾಗಿ ಹೋರಾಟ ನಡೆಸುವುದಾಗಿ ಜನತಾದಳ, ಸಿಪಿಐ(ಎಂ) ಸಿ.ಪಿ.ಐ. ಎಚ್ಚರಿಕೆ ನೀಡಿದವು. ಬಿ.ಜೆ.ಪಿಯೂ ಸಹ ಇದರಲ್ಲಿ ಸೇರಿಕೊಂಡಿತು.



**ಒಂದು ಹಂತದ ಜಯ**

ಕರ್ನಾಟಕ ಸರ್ಕಾರವು ಕಾರ್ಮಿಕರ ಬೇಡಿಕೆಯನ್ನು ಮೈಸೂರಿನ ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಿ, ಮುಷ್ಕರ ನಿಷೇಧಿಸಿದೆ. ಕಾರ್ಮಿಕರು ಕೆಲಸಕ್ಕೆ ಹಾಜರಾಗುವಂತೆ ಆದೇಶ ನೀಡಿದೆ. ಕೈಗಾರಿಕಾ ಕಾಯ್ದೆ 10(ಬಿ) ಪ್ರಕಾರ ಆಡಳಿತ ವರ್ಗ ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳು ರೂ. 700 ಮದ್ಯಂತರ ಪರಿಹಾರ ಕೊಡಬೇಕೆಂದು ಆದೇಶಿಸದೆ ಇದು ಮಹತ್ವದ ತೀರ್ಪುಸಹ. ಇದರಿಂದ ಉತ್ಪಾದನೆಗೆ ಸಂಬಂಧಿಸಿದ ತೀರ್ಮಾನಕ್ಕೆ ಒತ್ತಾಯಿಸುತ್ತಿದ್ದ ಆಡಳಿತ ವರ್ಗದ ಬೇಡಿಕೆ ಸದ್ಯ ಇಲ್ಲವಾಗಿದೆ. ಈ ಹಿನ್ನೆಲೆಯಲ್ಲಿ ಸರ್ವಸದಸ್ಯರ ಸಭೆನಡೆದು ಕೆಲಸಕ್ಕೆ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದಾರೆ. ಇದು ಕಾರ್ಮಿಕರ ಹೋರಾಟಕ್ಕೆ ಸಿಕ್ಕ ಒಂದು ಹಂತದ ಜಯ.

- ಜಯರಾಂ, ಮೈಸೂರು

# ತೃತೀಯ ರಂಗ ಅಸ್ತಿತ್ವಕ್ಕೆ

ಭಾರತದ ಎಲ್ಲಾ ಎಡಪಕ್ಷಗಳ ಹಾಗೂ ಪ್ರಮುಖ ಕಾಂಗ್ರೆಸ್ಸೇತರ ಮತ್ತು ಬಿ.ಜೆ.ಪಿ. ಯೇತರ ಪಕ್ಷಗಳ ನಾಯಕರು 'ಜನಮೋರ್ಚಾ' ಸ್ಥಾಪನೆಯನ್ನು ಘೋಷಿಸುವುದರೊಂದಿಗೆ ದೇಶದ ಜನತೆಯ ಬಹುದಿನಗಳ ನಿರೀಕ್ಷೆ ಕೈಗೂಡಿದಂತಾಗಿದೆ. ಭಾರತದ ಜನತೆ ಕಾಂಗ್ರೆಸ್ಸಿನ 44-45 ವರ್ಷಗಳ ದುರಾಡಳಿತವನ್ನು ಕಂಡಿದೆ, ಅನುಭವಿಸಿದೆ. ಕಾಂಗ್ರೆಸ್ ನೀತಿಗಳಿಂದ ಜನತೆಗೆ ನಿರಾಶೆಯಾಗಿದೆ. ಅವರು ಭ್ರಮನಿರಸನಗೊಂಡಿದ್ದಾರೆ. ಎಡಪಕ್ಷಗಳಿಗೆ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ, ಒಂದು ಬದಲಿಯನ್ನು ಒದಗಿಸಲು ಸಾಧ್ಯವಾಗದೆ, ಹೋದದ್ದು ವಿಷಾದದ ಸಂಗತಿಯಾಗಿದೆ.

ಕಾಂಗ್ರೆಸ್ಸಿನ ವಿಫಲತೆಯ ಲಾಭವನ್ನು ಪಡೆಯುವಲ್ಲಿ ಕೋಮುವಾದಿ, ಪ್ರತಿಗಾಮಿ ಶಕ್ತಿಗಳು ಯಶಸ್ವಿಯಾಗಿರುವುದು ಇನ್ನಷ್ಟು ವಿಷಾದದ ಸಂಗತಿ. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶದ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಅಧಿಕಾರವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಸಲುವಾಗಿ, ದೇಶದ ಸ್ವಾತಂತ್ರ್ಯವನ್ನು ಸಾರ್ವಭೌಮತೆಯನ್ನು ಕಬಳಿಸಲು ಹೊಂಚು ಹಾಕುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಕೈ ಜೋಡಿಸುತ್ತಿದೆ. ಅಧಿಕಾರದಲ್ಲಿ ಮುಂದುವರೆಯುವುದಕ್ಕಾಗಿ ಕೋಮು ದ್ವೇಷವನ್ನು ಹರಡಿ ಜನತೆಯ ಐಕ್ಯತೆಯನ್ನು ಕೊಚ್ಚಿಹಾಕುತ್ತಿದೆ. ಅಧಿಕಾರ ಕೈತಪ್ಪಿ ಹೋಗದಿರುವಂತೆ ನೋಡಿಕೊಳ್ಳಲು ಗುತ್ತೇದಾರಿ ಬಂಡವಾಳಿಗರಿಗೆ, ಕಾಳಸಂತೆಯ ವರ್ತಕರಿಗೆ ಅನುಕೂಲವಾಗುವ ಆರ್ಥಿಕ ನೀತಿಯನ್ನು ಅನುಸರಿಸುತ್ತಿದೆ. ರೈತರನ್ನು ಆತ್ಮಹತ್ಯೆಗೆ ನೂಕುತ್ತಿದೆ. ಕಾರ್ಮಿಕರನ್ನು ಮಾಲೀಕರ ಚಾಟಿ ಏಟಿಗೆ ಬಲಿಕೊಡಲು ಹೊರಟಿದೆ. ಯುವಜನರನ್ನು ನಿರುದ್ಯೋಗದ ಪ್ರಪಾತಕ್ಕೆ ತಳ್ಳುತ್ತಿದೆ. ಇವರ ಕೈಯಲ್ಲಿ ದೇಶದ ಸುರಕ್ಷೆಗೆ ಸಹ ಭಾರೀ ಗಂಡಾಂತರ ಒದಗಿದೆ. ಹರಿಶ್ಚಂದ್ರನ ವಂಶಸ್ಥರು ನಾವು ಎನ್ನುತ್ತಿದ್ದವರು ಜುಜುಬಿ ಮೊತ್ತಕ್ಕಾಗಿ ದೇಶವನ್ನು ಮಾತ್ರವಲ್ಲ ತಮ್ಮನ್ನು ತಮ್ಮ ಕುಟುಂಬವನ್ನು ಸಹ ಮಾರಲು ಸಿದ್ಧರಿದ್ದಾರೆ ಎನ್ನುವುದು ಈಗ ಸಾಬೀತಾಗಿದೆ.

ದೇಶದ ಜನತೆಯ ಸಹನೆಯ ಕಟ್ಟೆ ಒಡೆದಿದೆ. ಇನ್ನು ಅವರನ್ನು ತಡೆಯುವುದು ಸಾಧ್ಯವಿಲ್ಲ. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಜನತೆಯ ಹೋರಾಟವನ್ನು ಪರಿಣಾಮಕಾರಿಯಾಗಿ ಮುಂದುವರೆಸಲು ಎಡ ಹಾಗೂ ಜಾತ್ಯಾತೀತ ಪ್ರಜಾಸತ್ತಾತ್ಮಕ ರಾಜಕೀಯ ಪಕ್ಷಗಳು ತೃತೀಯ ರಂಗವನ್ನು ಅಸ್ತಿತ್ವಕ್ಕೆ ತಂದಿವೆ. ಇದು ಈ ಸಮಯದ ಅಗತ್ಯ ಅದಕ್ಕೆಂದೇ ಜನ ಮೋರ್ಚಾ ಸ್ಥಾಪನೆಯಾಗಿದೆ. ಇದು ಜನತೆಯ ಆಶೋತ್ತರಗಳ ಪ್ರತೀಕವಾಗಲಿದೆ. ಜನರಿಗಾಗಿ ಶ್ರಮಿಸುತ್ತಿರುವವರು, ಜನತೆಗಾಗಿ ತ್ಯಾಗಗಳನ್ನು ಮಾಡಿರುವವರು, ಬಡವರ, ಅಲ್ಪಸಂಖ್ಯಾತರ, ರೈತರ ಮತ್ತು ಕಾರ್ಮಿಕರ ಕಷ್ಟಗಳನ್ನು ಅರಿತಿರುವವರು ಮುಂದೆ ಬಂದು ದೇಶವನ್ನು ನಡೆಸಬೇಕು ಎನ್ನುವುದು ಜನತೆಯ ಆಸೆ.

ಕಳೆದ ಎರಡು ಮೂರು ತಿಂಗಳುಗಳಿಂದ ತೃತೀಯ ರಂಗವನ್ನು ಅಸ್ತಿತ್ವಕ್ಕೆ ತರುವ ಪ್ರಯತ್ನ ನಡೆದಿತ್ತು. ರಾಜಧಾನಿಯಲ್ಲಿ ಉಂಟಾದ ಕ್ಷಿಪ್ರ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ತೃತೀಯ ರಂಗವನ್ನು ಜನತೆಯ ಮುಂದೆ ಇಡಲು



ಸಾಧ್ಯವಾಗಿದೆ. ಕಾಮ್ರೆಡ್ ಜ್ಯೋತಿ ಬಸು ರಂಗದ ಅಧ್ಯಕ್ಷರಾಗಿರುತ್ತಾರೆ. ಶ್ರೀ ಮುಲಾಯಂ ಸಿಂಗ್ ಯಾದವ್ ಅದರ ಸಂಚಾಲಕರು.

ತೃತೀಯ ರಂಗವು ಆರ್ಥಿಕ ಉದಾರೀಕರಣವನ್ನು ಮತ್ತು WTO ಗುಲಾಮಗಿರಿಯನ್ನು ವಿರೋಧಿಸುವುದು.

ಎನ್.ಡಿ.ಎ. ಸರ್ಕಾರದ ಮುಂದುವರಿಕೆ ರಾಷ್ಟ್ರದ ರಕ್ಷಣೆಗೆ ಗಂಡಾಂತರಕಾರಿಯಾಗಿದೆ ಎಂದು ಜನ ಮೋರ್ಚಾ ಅಭಿಪ್ರಾಯ ಪಟ್ಟಿದೆ. ರಾಷ್ಟ್ರದ ಗಡಿಗಳು ಸುರಕ್ಷಿತವಾಗಿಲ್ಲ. ರಾಷ್ಟ್ರದ ಒಳಗೂ ಜನರ ಜೀವ, ಆಸ್ತಿಪಾಸ್ತಿಗಳು ಸುರಕ್ಷಿತವಾಗಿಲ್ಲ. ತೃತೀಯ ರಂಗವು ದೇಶದ ರಕ್ಷಣೆ ಹಾಗೂ ಐಕ್ಯತೆಯನ್ನು ಕಾಪಾಡಲು ರಾಜಿಇಲ್ಲದ ಹೋರಾಟ ನಡೆಸುವುದು.

ಮಾರ್ಚ್ 15 ರಂದು ದೆಹಲಿಯಲ್ಲಿ ನಡೆಸಲಾದ ಒಂದು ಪತ್ರಿಕಾ ಗೋಷ್ಠಿಯಲ್ಲಿ ತೃತೀಯ ರಂಗದ ಸ್ಥಾಪನೆಯನ್ನು ಪ್ರಕಟಿಸಲಾಯಿತು. ಹಾಜರಿದ್ದವರಲ್ಲಿ ಹರ್‌ಕಿಷನ್ ಸಿಂಗ್ ಸುರ್ಜಿತ್, ಜ್ಯೋತಿ ಬಸು, ಎ.ಬಿ. ಬರ್ಧನ್, (ಸಿಪಿಐ) ಅಬಾನಿರೋ (ಆರ್.ಎಸ್.ಪಿ) ವಿ.ಪಿ. ಸಿಂಗ್, ದೇವೇಗೌಡ, (ಜೆಡಿ-ಎಸ್) ಮುಲಾಯಂ ಸಿಂಗ್ ಯಾದವ್ (ಎಸ್.ಪಿ) ಹಾಜರಿದ್ದರು. ಲಾಲು ಪ್ರಸಾದ್ ಯಾದವ್ (ಆರ್.ಜೆ.ಡಿ) ಮತ್ತು ದೇಬಬ್ರತ ಬಿಸ್ವಾಸ್ (ಎಫ್.ಬಿ) ಅವರಿಬ್ಬರಿಗೆ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಆದರೆ ಅವರಿಬ್ಬರೂ ಜನ ಮೋರ್ಚಾ ಸ್ಥಾಪನೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ.

ನಿತ್ಯಾನಂದ ಸ್ವಾಮಿ

# ಬಾಲ್ಕೋ: ದುಗ್ಗಾಣಿಗೆ ನವರತ್ನದ ಮಾರಾಟ

ರಕ್ಷಣಾಇಲಾಖೆಯ ಹಗರಣದಲ್ಲಿ ಸಿಲುಕಿ ವಿಲವಿಲ ಒದ್ದಾಡುತ್ತಿರುವ ವಾಜಪೇಯಿ ಸರಕಾರವು ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳನ್ನು ಏಕೆ ಮಾರಾಟ ಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಕಷ್ಟವೇನಲ್ಲ. ಕಾರ್ಮಿಕ ಸಂಘಟನೆಗಳು, ದೇಶದ ಸ್ವಾವಲಂಬನೆಯಲ್ಲಿ ಆಸಕ್ತಿ ಉಳಿದ ಸಾರ್ವಜನಿಕರು, ಗುಡ್ಡಗಾಡು ಜನರೇ ಅಧಿಕವಾಗಿರುವ ಚತ್ತೀಸ್‌ಗಢ ರಾಜ್ಯದ ಮುಖ್ಯಮಂತ್ರಿಯೂ ಸೇರಿದಂತೆ, ಸಮಸ್ತ ಜನತೆಯ ತೀವ್ರ ವಿರೋಧದ ನಡುವೆಯೂ 551.5 ಕೋಟಿ ರೂಪಾಯಿಯ ಚೆಕ್ಕನ್ನು ಪಡೆದು ಬಾಲ್ಕೊ ಕಾರ್ಖಾನೆಯನ್ನು ಬಿಕರಿ ಮಾಡಿತು ಬಿಜೆಪಿ ಸರ್ಕಾರ. ಸಾರ್ವಜನಿಕ ಉದ್ದಿಮೆಗಳ 'ನವರತ್ನ'ಗಳಲ್ಲಿ ಒಂದು ಎಂದು ಬಾಲ್ಕೊವನ್ನು ಪರಿಗಣಿಸಲಾಗಿದೆ. ಭಾರತ ಅಲ್ಯೂಮಿನಿಯಂ ಕಂಪನಿ (Balco) ಕೇವಲ ಪಾತ್ರೆ ಪಗಡೆಗಳಿಗೆ ಬೇಕಾಗುವ ಅಲ್ಯೂಮಿನಿಯಂ ತಯಾರಿಸುವ ಕಂಪನಿ ಮಾತ್ರವಲ್ಲ. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಬೇಕಾಗುವ ಪಂಪು, ಪೈಪುಗಳವರೆಗೂ ತಯಾರಿಕೆಗೆ ಬೇಕಾದ ಅಲ್ಯೂಮಿನಿಯಂನ್ನು ಭಾಲ್ಕೋ ತಯಾರಿಸುತ್ತದೆ.

ಈ ಕಂಪನಿ ಸತತವಾಗಿ ಸಾಧಾರಣಾ ವರ್ಷಕ್ಕೆ 100 ಕೋಟಿ ರೂ. ಲಾಭ ಮಾಡುತ್ತಿದ್ದು ಮೀಸಲು ನಿಧಿ (Reserve Fund) ಯಲ್ಲಿ 460 ಕೋಟಿ ರೂಗಳಿಗೂ ಹೆಚ್ಚು ಹಣ ಇದೆ. ಕನಿಷ್ಟ ಅಂದಾಜಿನ ಪ್ರಕಾರ, 2000 ಕೋಟಿ ರೂ.ಗಳಿಗೂ ಹೆಚ್ಚು ಬೆಲೆ ಬಾಳುವ ಈ ಕಂಪನಿಯಲ್ಲಿ 7000 ಖಾಯಂ ನೌಕರರಿದ್ದಾರೆ. 250 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿರುವ ಎರಡು ಸ್ಥಾವರಗಳಿವೆ.

ಕಲೆದ ವರ್ಷವೊಂದರಲ್ಲೇ ಬಾಲ್ಕೊ ಕಂಪನಿಯ ನಿವ್ವಳ ಲಾಭ 55.89 ಕೋಟಿ ರೂ. ತೆರಿಗೆ ಮತ್ತು ಸುಂಕಗಳ ರೂಪದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ 291.57 ಕೋಟಿ ರೂ. ನೀಡಿದೆ. ಇಂತಹ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಒಂದು ಹೊತ್ತಿನ ಊಟಕ್ಕೆ ಬಲಿಕೊಡುವುದು ಯೋಗ್ಯವೇ? ಜನತೆ ಆಲೋಚಿಸಬೇಕಾಗಿದೆ.

***ದೇಹಲಿ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ರಾಜೆಂದರ್ ಸಾಚಾರ್ ಹಿಂದೂ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಪ್ರಮುಖ ಅಂಶಗಳನ್ನು ಎತ್ತಿದ್ದು ದೇಶದ ಅಭಿವೃದ್ಧಿಯಲ್ಲಿ ಕಾಳಜಿ ಇರುವ ಎಲ್ಲರೂ ಗಮನಿಸಬೇಕಾದ ಅಂಶ.***

1. ಪ್ರಮುಖ ಸಾರ್ವಜನಿಕ ಉದ್ದಿಮೆಯನ್ನು ಮಾರಾಟ ಮಾಡುವುದು ದೇಶದ ಸಂವಿಧಾನದ ತತ್ವಕ್ಕೆ ವಿರುದ್ಧವಾದುದು. ದೇಶದ ಆರ್ಥಿಕತೆಯು ಕೇವಲ ಕೆಲವೇ ವ್ಯಕ್ತಿಗಳ ಹಿಡಿತದಲ್ಲಿರುವುದನ್ನು ಸಂವಿಧಾನವು ತಿರಸ್ಕರಿಸಿದ್ದು, ಜನತೆಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಒದಗಿಸಲು ಸಂವಿಧಾನವು ಬದ್ಧವಾಗಿದೆ. ಬಾಲ್ಕೊ ಕಾರ್ಖಾನೆಯನ್ನು ಖರೀದಿಸಿದ ಅನಿಲ್ ಅಗರ್‌ವಾಲ್ ಹಿಂದೆ ಮದ್ರಾಸಿನ ಅಲ್ಯೂಮಿನಿಯಂ ಕಂಪನಿಯನ್ನು ಖರೀದಿಸಿದ್ದು ಇವೆರೆಡು ಕಂಪನಿಗಳ ಒಟ್ಟು ವ್ಯವಹಾರ, ದೇಶದ ಒಟ್ಟು ಅಲ್ಯೂಮಿನಿಯಂ ಉತ್ಪಾದನೆಯ ಶೇ 20 ಕ್ಕಿಂತಲೂ ಹೆಚ್ಚು ಪಾಲನ್ನು ಅನಿಲ್ ಅಗರ್‌ವಾಲ್ ಅವರ 'ಸರ್ ಲೈಟ್' ಕಂಪನಿಯ ಹಿಡಿತಕ್ಕೆ ಬರುತ್ತಧೆ. ಇದರಿಂದ ಮಾರುಕಟ್ಟೆಯಲ್ಲಿ ಸ್ಪರ್ಧೆಯ ಅವಕಾಶ ಕಡಿಮೆ ಆಗಿ ಏಕಸ್ವಾಮ್ಯಾಧಿಪತ್ಯದ ಹಿಡಿತಕ್ಕೆ ಒಳಗಾಗುತ್ತದೆ.

ಅಮೆರಿಕದಂತಹ ಸಾಮ್ರಾಜ್ಯಶಾಹಿ ದೇಶಗಳಲ್ಲೂ ಕೂಡಾ ಯಾವುದೇ ಒಂದು ಕಂಪನಿ ಇಷ್ಟೊಂದು ದೊಡ್ಡ ಮೊತ್ತದ ಮಾರುಕಟ್ಟೆಯ ಪಾಲನ್ನು ಹೊಂದಲು ಅವಕಾಶ ನೀಡಿಲ್ಲ.


2. ಛತ್ತೀಸ್ ಗಢ ರಾಜ್ಯದ ಗುಡ್ಡಗಾಡು ಜನರು ವಾಸ ಮಾಡುವ ಪ್ರದೇಶ. ಬಿಜೆಪಿ ಸರ್ಕಾರವೇ ಹೇಳಿಕೊಂಡ ಪ್ರಕಾರ ಗುಡ್ಡಗಾಡು ಜನರ ಅಭಿವೃದ್ಧಿಗಾಗಿ, ತೀವ್ರ ವಿರೋಧದ ನಡುವೆಯೂ ಚತ್ತೀಸ್ ಗಢ ರಾಜ್ಯವನ್ನು ರಚಿಸಲಾಯಿತು. ಈಗಲ್ಲಿನ ಸರಕಾರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಲಾಗುತ್ತಿದೆ. ಶೇಕಡ 51 ಪಾಲನ್ನು ಹೊಂದಿರುವ ಸರ್‌ಲೈಟ್ ಕಂಪನಿ ಅಥವಾ ಅದರ ಮಾಲಿಕ ಅನಿಲ್ ಅಗರ್‌ವಾಲ್ ಉಳಿದ ಶೇ 49 ಪಾಲು ಹೊಂದಿರುವ ಸರಕಾರದ ಮಾತನ್ನು ಕೇಳಬೇಕಾಗಿಲ್ಲ. ಅಂದರೆ ಗುಡ್ಡಗಾಡು ಜನರಿಗೆ ಸೇರಿದ ಭೂಮಿಯನ್ನು 'ಸ್ವಾಹ' ಮಾಡಬಹುದು. ಇದು ಸಂವಿಧಾನ ವಿರೋಧಿ.

3. ಕೇಂದ್ರ-ರಾಜ್ಯದ ಸಂಬಂಧಕ್ಕೆ ಅಡ್ಡಿ: ಛತ್ತೀಸ್ ಗಢ ರಾಜ್ಯದ ಮುಖ್ಯಮಂತ್ರಿ ಅಜಿತ್ ಜೋಗಿ ಬಾಲ್ಕೊ ಮಾರಾಟವನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಜನರಿಂದ ಚುನಾಯಿತರಾದ ಅಲ್ಲಿನ ಬಹುಸಂಖ್ಯಾತ ಶಾಸಕರು ಮಾರಾಟವನ್ನು ವಿರೋಧಿಸಿ ಶಾಸನ ಸಭೆಯಲ್ಲಿ ಗೊತ್ತುವಳಿಯನ್ನು ಅಂಗೀಕರಿಸಿದ್ದಾರೆ. ಅಲ್ಲದೆ ಅಷ್ಟೊಂದು ಪ್ರಮುಖವಾದ ಕಂಪನಿಯನ್ನು ಮಾರಾಟ ಮಾಡುವಾಗ ಸೌಜನ್ಯಕ್ಕಾದರೂ ರಾಜ್ಯ ಸರ್ಕಾರದೊಂದಿಗೆ ಆತ್ಮೀಯವಾದ ಸಂಪರ್ಕ ನಡೆಸಿಲ್ಲ.

ಹಾಗಾದರೆ, ಲಂಡನ್‌ನಲ್ಲಿರುವ ಅನಿಲ್ ಅಗರವಾಲರ ಸ್ಟರ್‌ಲೈಟ್ ಕಂಪನಿಗೆ ಅಗ್ಗದ ಬೆಲೆಯಲ್ಲಿ ಬಾಲ್ಕೊವನ್ನು ಮಾರಾಟ ಮಾಡಿರುವ ಬಿಜೆಪಿ ಸರ್ಕಾರದ ಉದ್ದೇಶವಾದರೂ ಏನು? ಜನತೆಗೆ ತಿಳಿದುಕೊಳ್ಳುವ ಎಲ್ಲಾ ಹಕ್ಕೂ ಇದೆ.

ಅಂತೆಯೇ ದೇಶದ ಆರ್ಥಿಕ ಸ್ವಾವಲಂಬನೆಗಾಗಿ, ಸಾರ್ವಜನಿಕ ಕ್ಷೇತ್ರವನ್ನು ಉಳಿಸಿಕೊಳ್ಳುವುದಕ್ಕಾಗಿ ನಿರಂತರವಾದ ಹೋರಾಟ ಅಗತ್ಯ. ಅದರ ಭಾಗವಾಗಿ ಬಿಜೆಪಿ ಸರ್ಕಾರದ ವಿರುದ್ಧ ಜನತೆಯನ್ನು ಎಚ್ಚರಿಸಬೇಕಾದುದು ಅಷ್ಟೇ ಅಗತ್ಯ.

- ಬಾಲಕೃಷ್ಣ ಶೆಟ್ಟಿ
ಹೆಚ್.ಎಸ್.ಕೃಷ್ಣಮೂರ್ತಿ



# ಪ್ರಧಾನಿ-ರಕ್ಷಣಾ ಮಂತ್ರಿಗಳಿಂದ ದೇ

## ದೇಶದ ಕ್ಷೇಮಕ್ಕಾಗಿ ವಾಜಪೇಯಿ ಈಗಲೇ ತೊಲಗಲಿ

ವಾಜಪೇಯಿ ಸರ್ಕಾರ ಮುಳುಗುತ್ತಿದೆ. ಪಾತಾಳಕ್ಕೆ ಮುಗ್ಗರಿಸುತ್ತಿದೆ. ಈ ಸರ್ಕಾರ ತೊಲಗುವುದರೊಂದಿಗೆ ಮಾತ್ರ ನಮ್ಮ ದೇಶ ಉಳಿಯಲು ಸಾಧ್ಯ.


ತೆಹಾಲ್ಕಾ ಡಾಟ್ ಕಾಂ ಬಯಲಿಗೆಳೆದಿರುವ ಪ್ರಕರಣ ಅಂತಿಂತಹ ಹಗರಣವಲ್ಲ. ಬೋಫೋರ್ಸ್ ಹಗರಣ ಬಯಲಿಗೆ ಬಂದಾಗ ದೇಶದ ರಕ್ಷಣಾ ವ್ಯವಸ್ಥೆಯ ಬಗ್ಗೆ ದೇಶವೇ ಆತಂಕಕ್ಕೆ ಒಳಗಾಗಿತ್ತು. ರಕ್ಷಣಾ ಇಲಾಖೆಯನ್ನು ಮಾತ್ರವಲ್ಲ ಪ್ರಧಾನ ಮಂತ್ರಿಗಳ ಕಛೇರಿಯನ್ನೇ ಸುತ್ತು ಹಾಕಿಕೊಂಡಿರುವ ಲಂಚದ ಈ ಹಗರಣದ ಮುಂದೆ ಬೋಫೋರ್ಸ್ ಹಗರಣ ಏನೂ ಅಲ್ಲ ಎನ್ನುವಂತಾಗಿದೆ. ಕೇವಲ ಅಧಿಕಾರ ದಾಹದಿಂದ ಒಂದುಗೂಡಿರುವ ಎನ್.ಡಿ.ಎ. ಭಯ ಈಗ ನಿಜವಾಗಿದೆ. ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರವು ಎನ್.ಡಿ.ಎ. ಆಡಳಿತದಲ್ಲಿ ಒಂದು ಸಂಸ್ಥೆಯಾಗಿ ಬೆಳೆದು ಇಡೀ ಸರ್ಕಾರವನ್ನೇ ಆವರಿಸಿರುವುದು ಒಂದು ದೊಡ್ಡ ದುರಂತವಾಗಿದೆ.

ರಾಜಕೀಯ ಪಕ್ಷಗಳ ಪ್ರಮುಖರನ್ನು, ಸೈನ್ಯಾಧಿಕಾರಿಗಳನ್ನು, ರಕ್ಷಣಾ ಇಲಾಖೆಯ ಅಧಿಕಾರಿಗಳನ್ನು ಮೋಸದಿಂದ ಲಂಚ ಸ್ವೀಕರಿಸುವಂತೆ ಮಾಡಲಾಗಿದೆ. ಅದರಲ್ಲಿ ಅವರ ತಪ್ಪೇನಿಲ್ಲ ಎಂದು ವಾದಿಸಲಾಗುತ್ತಿದೆ. ಸಾರ್ವಜನಿಕ ಸೇವೆಯಲ್ಲಿರುವವರನ್ನು ಲಂಚದ ಬಲೆ ಬೀಸಿ ಹಿಡಿಯುವುದು ಕಾನೂನು ಬದ್ಧ ಕ್ರಮವಾಗಿದೆ. ಭ್ರಷ್ಟಾಚಾರ ವಿರೋಧಿ ದಳಗಳು ಹೀಗೆ ಅಲ್ಲವೆ ಲಂಚಕೋರರನ್ನು ಹಿಡಿಯುವುದು?

ಹಣ ನೀಡಲು ಬಂದವರ ಬಗ್ಗೆ ಅನುಮಾನವೇ ಬರದಿರುವುದು ಅವರು ಲಂಚಕ್ಕಾಗಿ ಎಷ್ಟೊಂದು ಸುಲಭವಾಗಿ ಕೈಯೊಡ್ಡುತ್ತಾರೆ. ಎಂಬುದನ್ನು ಸ್ಪಷ್ಟಪಡಿಸಿದೆ. ಟೇಪುಗಳಲ್ಲಿ ದಾಖಲಾದ ಅವರ ಸಂಭಾಷಣೆಯನ್ನು ಗಮನಿಸಿದರೆ ಭ್ರಷ್ಟಚಾರ ಎಂಬ ವ್ಯಾಧಿ ಪ್ರಧಾನ ಮಂತ್ರಿಯವರ ಕಚೇರಿಯಲ್ಲಿರುವವರೆಲ್ಲರಿಗೂ ವ್ಯಾಪಿಸಿದೆ ಎಂಬುದು ದೃಡಪಟ್ಟಿದೆ. ಉದಾರೀಕರಣದ ಅಬ್ಬರ ಭ್ರಷ್ಟಾಚಾರ ಎಂಬ ಈ ಕ್ಯಾನ್ಸರ್ ಆಡಳಿತದ ಉನ್ನತ ವಲಯಗಳಲ್ಲಿ ಹರಡಲು ಅನುಕೂಲ ವಾತಾವರಣವನ್ನು ಒದಗಿಸಿದೆ. ಇನ್ನೂ ಹೆಚ್ಚಿನ ವಿವರಗಳು ಹೊರ ಬೀಳಲಿವೆ ಎನ್ನಲಾಗಿದೆ. ಸರ್ಕಾರಕ್ಕೆ ಇನ್ನೂ ಹೆಚ್ಚಿನ ಮುಖಭಂಗ ಕಾದಿದೆ. ಜನತೆ ಆಘಾತದಿಂದ ತತ್ತರಿಸಿದೆ. ಬೇಲಿಯೇ ಎದ್ದು ಹೊಲ ಮೇಯುತ್ತಿರುವುದನ್ನು ಕಂಡು ಅವರು ಬೆರಗಾಗಿದ್ದಾರೆ. ಕಾಯುವ ಕೆಲಸಕ್ಕೆ ಕಳ್ಳನನ್ನು ನೇಮಿಸಿದಂತಾಯಿತಲ್ಲಾ ಎಂಬ ಪಶ್ಚಾತ್ತಾಪ ಅವರನ್ನು ಕಾಡುತ್ತಿದೆ. ಜನತೆಯ ಆಕ್ರೋಶ ಉಗ್ರರೂಪತಾಳಿ ಇವರನ್ನು ಬೆನ್ನು ಹತ್ತಿ ಬರುವುದರೊಳಗಾಗಿ ವಾಜಪೇಯಿ ಸರ್ಕಾರ ಕುರ್ಚಿಬಿಟ್ಟು ಇಳಿದರೆ ಅವರಿಗೂ ಕ್ಷೇಮ, ದೇಶಕ್ಕೂ ಕ್ಷೇಮ.


ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ನಂತರವೂ ಬಿ.ಜೆ.ಪಿ. ಅಧ್ಯಕ್ಷ ಜಯಾ ಜೈಟ್ಲೆ ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಟ್ಟ ನಂತರವೂ ಎನ್.ಡಿ.ಎ. ಸರ್ಕಾರದ ವಕ್ತಾರರೂ ಕೂಡ ಸರ್ಕಾದಲ್ಲಿರುವವರು ಏನೂ ತಪ್ಪು ಮಾಡಿಲ್ಲ ಎಂದೂ, ಸರ್ಕಾರವು ಯಾವುದೇ ರೀತಿಯ ವಿಚಾರಣೆಗೆ ಸಿದ್ದವಾಗಿದೆ. ಎಂದೂ ಸರ್ಕಾರಕ್ಕೆ ಮುಚ್ಚಿಡಲು ಏನೂ ಇಲ್ಲವೆಂದು ಹೇಳಿಕೆ ನೀಡುತ್ತಿದ್ದಾರೆ. ವಾಜಪೇಯಿ ಸರ್ಕಾರವು ಹೊಸ ಸಹಸ್ರಮಾನದಲ್ಲಿ ಮಾಡಿರುವ ಈ ಹೊಸ ದಾಖಲೆಯ ಉದ್ದ, ಅಗಲ ಹಾಗೂ ಆಳವನ್ನು ಪತ್ತೆಹಚ್ಚಲು ವಿವರವಾದ ವಿಚಾರಣೆ ನಡೆಯಬೇಕೆಂಬುದು ದೇಶದ ಜನತೆಯ ಒಕ್ಕೊರಲಿನ ಒತ್ತಾಯ ವಾಗಿದೆ. ಆದರೆ ವಿಚಾರಣೆಗೆ ಒಳಪಡಬೇಕಾದವರೇ ವಿಚಾರಣೆಯನ್ನು ನಡೆಸಲು ಸಾಧ್ಯವಿಲ್ಲ ಎಂಬುದು ಇವರಿಗೆ ಗೊತ್ತಿಲ್ಲವೆ ? ಬೊಫೋರ್ಸ್ ಹಗರಣದ ಸಂದರ್ಭದಲ್ಲಿ ರಾಜೀವ್ ಗಾಂಧಿ ಸರ್ಕಾರ ರಾಜಿನಾಮೆ ನೀಡಬೇಕೆಂದು ಇವರು ಮೇಜು ಗುದ್ದಿ ಒತ್ತಾಯಿಸಿದನ್ನು ಮರೆತು ಬಿಟ್ಟಿದ್ದಾರೆಯೇ ಸರ್ಕಾರಕ್ಕೆ ಮುಚ್ಚಿಡಲು ಏನೂ ಇಲ್ಲ ಎನ್ನುವವರು ಅಧಿಕಾರದಿಂದ ನಿರ್ಗಮಿಸಿ ಸಮಗ್ರ ತನಿಖೆಗೆ ಏಕೆ ಮುಕ್ತ ಅವಕಾಶ ಮಾಡಿ ಕೊಡಬಾರದು? ಇಡೀ ದೇಶವೇ ತಲೆತಗ್ಗಿಸುವಂತೆ ಮಾಡಿರುವ ಈ ಹಗರಣದ ಎಲ್ಲಾ ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಅವರನ್ನು ಕಾನೂನು ಕ್ರಮಕ್ಕೆ ಒಳಪಡಿಸುವ ಬಗ್ಗೆ ವಾಜಪೇಯಿ ಸರ್ಕಾರಕ್ಕೆ ನಿಜವಾಗಿಯೂ ಆಸಕ್ತಿ ಇದ್ದರೆ, ಸರ್ಕಾರ ಒಂದು ಕ್ಷಣವೂ ವಿಳಂಬ ಮಾಡದೇ ರಾಜಿನಾಮೆ ನೀಡಬೇಕು. ಎನ್.ಡಿ.ಎ ಸದಸ್ಯ ಪಕ್ಷಗಳ ಒತ್ತಾಯಕ್ಕೆ ಮಣಿದು ರಕ್ಷಣಾ ಮಂತ್ರಿ ರಾಜಿನಾಮೆ ಕೊಟ್ಟಿರಬಹುದು. ಪ್ರಧಾನ ಮಂತ್ರಿಯವರ ಕಛೇರಿಯಲ್ಲಿನ ಹಿರಿಯ ಅಧಿಕಾರಿಗಳಾದ ಬ್ರಿಜೆಷ್ ಮಿಶ್ರಾ ಮತ್ತು ಎನ್.ಕೆ.ಸಿಂಗ್ ಅವರ ರಾಜಿನಾಮೆಗೆ ಒತ್ತಡ ತೀವ್ರಗೊಳ್ಳಬಹುದು. ಆದರೆ ಕೇವಲ ಕೆಲವು ವ್ಯಕ್ತಿಗಳನ್ನು ಬಲಿಪಶುಗಳಾಗಿ ಮಾಡುವುದರಿಂದ ವಾಜಪೇಯಿ ಸರ್ಕಾರ ತನ್ನ ಜವಾಬ್ದಾರಿಯಿಂದ ಪಲಾಯನಗೈಯಲು ಸಾಧ್ಯವಿಲ್ಲ. ಹಗರಣದ ವಿಚಾರಣೆಗೆ ಒಂದು ಆಯೋಗ ನೇಮಿಸುವ ನಾಟಕದಿಂದ ಜನತೆಯ ಆತಂಕ ದೂರವಾಗದು. ರಾಷ್ಟ್ರ ಭಕ್ತಿ, ರಾಷ್ಟ್ರಾಭಿಮಾನ, ಸ್ವಚ್ಛ ಆಡಳಿತ ಇತ್ಯಾದಿ ಘೋಷಣೆಗಳಿಂದ ಜನರನ್ನು ಮರಳು ಗೊಳಿಸುತ್ತಿದ್ದ ಬಿ.ಜೆ.ಪಿ.ಯು ಇಂದು ಇಷ್ಟೊಂದು ಕೆಳಮಟ್ಟಕ್ಕೆ ಇಳಿದುದನ್ನು ಜನತೆ ಸಹಿಸಲಾರದು. ದೇಶದ ಉಳಿವಿಗಾಗಿ , ಜನತೆಯ ಕ್ಷೇಮಕ್ಕಾಗಿ ವಾಜಪೇಯಿ ಸರ್ಕಾರ ಈ ಕೊಳಕು ಹಗರಣದ ನೈತಿಕ ಹೊಣೆ ಹೊತ್ತು, ಅಧಿಕಾರದಿಂದ ತೊಲಗಲೇಬೇಕು.

– ನಿತ್ಯಾನಂದ ಸ್ವಾಮಿ



ಬ್ರಿಜೇಶ್ ಮಿಶ್ರಾ

ಬಂಗಾರು ಲಕ್ಷ್ಮಣ



ರಂಜನ್ ಭಟ್ಟಾಚಾರ್ಯ



ಆರ್.ಕೆ.ಗುಪ್ತ

# ಈ ಪಾತಕಿಗಳನ್ನು ಜನ ಕ್ಷಮಿಸುವುದಿಲ್ಲ

1999ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಕೂಟದ ಸರಕಾರ 1999ರಲ್ಲಿ ಲೋಕಸಭೆಯ ವಿಶ್ವಾಸ ಕಳೆದುಕೊಂಡು ಕೇವಲ ಉಸ್ತುವಾರಿ ಸರ್ಕಾರವಾಗಿ ಮುಂದುವರೆದಾಗ ಇನ್ನೂ ಮತ್ತೆ ಈ ಕೂಟ ಗೆಲ್ಲುವುದಿಲ್ಲ ಎಂಬ ಭಾವನೆ ಸಾರ್ವತ್ರಿಕವಾಗಿತ್ತು. ವಿಷ್ಣುಭಾಗವತ್ ವಜಾ ಹಗರಣ, ಬಿಜೆಪಿ ಸರ್ಕಾರಕ್ಕೆ ಆರ್ಥಿಕ ಸಲಹೆಗಾರರಾಗಿದ್ದ ಮೋಹನ್ ಗುರುಸ್ವಾಮಿಯವರ ರಾಜಿನಾಮೆ, ಅರ್ಥ ಸಚಿವ ಯಶವಂತ ಸಿನ್ಹಾರವರು ಪ್ರಧಾನ ಕಛೇರಿ ಹಾಗೂ ಪ್ರಧಾನಿಯ ಅಳಿಯನ ಮೇಲೆ ಮಾಡಿದ ಭ್ರಷ್ಟಾಚಾರದ ಅಪಾದನೆಗಳು, ಹತ್ತಾರು ಸಾವಿರಕೋಟಿ ರೂ.ಗಳ ಟೆಲಿಕಾಂ ಬಾಕಿ ವಸೂಲಿಯನ್ನು ವಜಮಾಡಿದ ಹಗರಣದಲ್ಲಿ ಜಗಮೋಹನ್ ಖಾತೆ ಬದಲಾವಣೆ ಮೊದಲಾದ ಹಗರಣಗಳ ಸರಮಾಲೆಯಲ್ಲಿ ಮುಖಕ್ಕೆಲ್ಲಾ ಮಸಿಮೆತ್ತಿಕೊಂಡದ್ದು ಒಂದು ಕಡೆ, ಬೆಲೆಏರಿಕೆ ಇತ್ಯಾದಿಗಳಿಂದ ಜನ ಅನುಭವಿಸಿದ ಸಂಕಟ. ಮತ್ತೊಂದುಕಡೆ ಜನರಲ್ಲಿ ಬಿಜೆಪಿಯ ಬಗೆಗಿದ್ದ ಭಾವನೆ ಭ್ರಮೆಗಳನ್ನೆಲ್ಲಾ ತಿಂದುಹಾಕಿತ್ತು. ಆದರೆ ಕಾರ್ಗಿಲ್‌ನಲ್ಲಿ ನಡೆದ ಅಕ್ರಮಣದ ಸಂದರ್ಭದಲ್ಲಿ ಜನರಲ್ಲಿ ಉಕ್ಕಿಹರಿದ ದೇಶಪ್ರೇಮ ಬಿಜೆಪಿಕೂಟದ ಈ ದ್ರೋಹಗಳನ್ನೆಲ್ಲಾ ಮರೆಸಿತು. ಕರ್ನಾಟಕವೂ ಸೇರಿ ಹಲವಾರು ಪ್ರಮುಖ ರಾಜ್ಯಗಳಲ್ಲಿ ಬಿಜೆಪಿಯ ಎಂಪಿಗಳು ಪುಡಿತರಗೆಲೆಗಳಂತೆ ಹಾರಿ ಹೋದರೂ ಕೂಡ ಇತರ ಪಕ್ಷಗಳ ಸಾಧನೆಯ ಮೇಲೆ ಅಧಿಕಾರಕ್ಕೆ ಬರಲು ಸಾಧ್ಯವಾಯಿತು.




ಸೀಸ್ ಫೈರ್.. ಸೀಸ್ ಫೈರ್...

ಕಾರ್ಗಿಲ್‌ನಲ್ಲಿ ಪ್ರಾಣತೆತ್ತ ನೂರಾರು ಸೈನಿಕರು ಸಾಮಾನ್ಯ ರೈತ-ಕೂಲಿಕಾರರ ಮಕ್ಕಳು-ನವ ಜವ್ವನದ ಯುವಕರು ಅವರ ಪ್ರಾಣ ಬಲಿದಾನದ ಆಧಾರದ ಮೇಲೆ ಅಧಿಕಾರಕ್ಕೆ ಬಂದ ಬಿಜೆಪಿ ಕೂಟ ಈ ಸೈನಿಕ ಸಮಾಧಿಯ ಹಸಿ ಆರುವ ಮೊದಲೇ ಇಂದು ದೇಶದ ರಕ್ಷಣೆಗೇ ಮಹಾ ದ್ರೋಹವೆಸಗಿದೆ.

ದೇಶದ ರಕ್ಷಣೆ ಸುಭದ್ರತೆಯ ಹೊಣೆ ಹೊತ್ತ ಪ್ರಧಾನಮಂತ್ರಿ, ರಕ್ಷಣಾ ಮಂತ್ರಿಗಳೂ ಸೇರಿದಂತೆ ಅವರ ಸಚಿವಾಲಯ ಮತ್ತು ಸೇನೆಯ ಉನ್ನತ ಆಡಳಿತ ವರ್ಗದ ಸಂದಿಗೊಂದಿಗಳಲ್ಲೆಲ್ಲಾ ಭ್ರಷ್ಟಾಚಾರ ತೂರಿಕೊಂಡಿರುವುದು ದೇಶವನ್ನು ತಲ್ಲಣಗೊಳಿಸಿದೆ. ಜನಕ್ಕೆ ಇದನ್ನು ಅರಗಿಸಿ ಕೊಳ್ಳುವುದಕ್ಕೆ ಕಷ್ಟವಾಗಿದೆ. ದೇಶದ ರಕ್ಷಣೆಯ ವಿಷಯ ಮೇಲೆದ್ದಾಗಲೆಲ್ಲಾ ಆ ಸವಾಲುಗಳಿಗೆ ಭಾರತದ ಇಡೀ ಜನತೆ ಒಂದೇ ಮೈ ಮನಸ್ಸೆಂಬಂತೆ ಮೇಲೆದ್ದು ಉತ್ತರ ನೀಡಿದ್ದಾರೆ.

1971 ರ ಬಂಗ್ಲಾ ವಿಮೋಚನೆಯಿರಬಹುದು, 1984 ರಲ್ಲಿ ಸಿಖ್ ಉಗ್ರಗಾಮಿಗಳಿಂದ ಇಂದಿರಾ ಹತ್ಯೆ, 1991 ರಲ್ಲಿ ತಮಿಳು ಉಗ್ರಗಾಮಿಗಳಿಂದ ರಾಜೀವ್ ಹತ್ಯೆಯ ಸಂದರ್ಭದಲ್ಲಿರಬಹುದು ಕಾರ್ಗಿಲ್ ಯುದ್ಧದ ಸಮಯದಲ್ಲಿರಬಹುದು ಇದು ಎದ್ದು ಕಂಡಿದೆ. ಅದೇ ರೀತಿ ಭಾರತದ ರಕ್ಷಣೆಗೆ ದ್ರೋಹ ಬಗೆದವರನ್ನು ಶಿಕ್ಷಿಸುವ ವಿಷಯದಲ್ಲಿಯೂ ಇದು ಸ್ಪಷ್ಟ ಭೋಫೋರ್ಸ್ ಪ್ರಕರಣದ ನಂತರ ರಾಜೀವ್ ಗಾಂಧಿಯವರ ಪಕ್ಷ ಅಪ್ಪಿದ ಸೋಲು ಇದಕ್ಕೆ ನಿದರ್ಶನ.

ಇಂತಹ ಸಂದರ್ಭದಲ್ಲಿ 1999 ರಲ್ಲಿ ಮತ್ತೆ ಅಧಿಕಾರದ ಗದ್ದುಗೆ ಹಿಡಿದ ಮೇಲೆ ದೇಶದ ಜನತೆಯ ಜೀವನದ ರಕ್ಷಣೆ ಮಾಡುವ ಹೊಣೆಯನ್ನು ಮರೆತು ವಿದೇಶಿ ವಸ್ತುಗಳು, ಕೃಷಿ ಉತ್ಪನ್ನಗಳ ಧಾಳಿಗೆ ರೈತರನ್ನು ಕಾರ್ಮಿಕರನ್ನು ಸಣ್ಣ ಕೈಗಾರಿಕೆಗಳ ಮಾಲೀಕರನ್ನು ಈಡು ಮಾಡಿರುವ ಬಿಜೆಪಿ ಕೂಟದ ಮೇಲೆ ಜನರ ಸಿಟ್ಟು ಭುಗಿಲೇಳುತ್ತಿರುವಾಗಲೇ ಎರಗಿದ ಈ ಆಘಾತ-ದೇಶದ ರಕ್ಷಣೆ ಹಾಗೂ ಸೈನ್ಯಕ್ಕೆ ಒದಗಿದ ಸಂಚಕಾರವನ್ನು ಜನ ಕ್ಷಮಿಸುವುದಿಲ್ಲ.

ರಕ್ಷಣಾ ಸಚಿವರು, ಕೆಲ ಸೈನ್ಯಾಧಿಕಾರಿಗಳ ಮೇಲೆ ಗೂಬೆ ಕೂಡಿಸಿ, ನ್ಯಾಯಾಂಗ ತನಿಖೆಯ ನಾಟಕವಾಡಿ ತಮ್ಮ ಕುರ್ಚಿಯನ್ನುಳಿಸಿಕೊಳ್ಳಲು ಪ್ರಯತ್ನಿಸುತ್ತಿರುವ ವಾಜಪೇಯಿಯವರ ದೇಶದ್ರೋಹವನ್ನು ಜನ ಕ್ಷಮಿಸುವುದಿಲ್ಲ.

ಇಂದು ಬಹಿರಂಗವಾಗಿರುವ ಎಲ್ಲ ಸಂಗತಿಗಳು ಸ್ಪಷ್ಟವಾಗಿ ನೇರವಾಗಿ ಪ್ರಧಾನ ಮಂತ್ರಿಗಳು ಹಾಗೂ ರಕ್ಷಣಾ ಮಂತ್ರಿಗಳೇ ಈ ಎಲ್ಲಾ ಜಾಲದ ಮೂಲವೆಂಬುದನ್ನು ಸಾರಿ ಸಾರಿ ಹೇಳುತ್ತಿವೆ. ಆದಕ್ಕಾಗಿಯೇ ವಾಜಪೇಯಿಯವರು ಜಾರ್ಜ್ ಫರ್ನಾಂಡಿಸರ ರಕ್ಷಣೆಗೆ ಮುಂದಾಗಿರುವುದು ಹಾಗೂ ಜಾರ್ಜ್ ಫರ್ನಾಂಡೀಸ್‌ರು ತಮ್ಮದೇ ಪಕ್ಷದ ಎಂ.ಪಿ.ಗಳು ಪ್ರಧಾನಮಂತ್ರಿಗಳ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಬ್ರಿಜೇಶ್ ಮಿಶ್ರಾ ಹಾಗೂ ಅವರ ಅಳಿಯ ರಂಜನ್ ಭಟ್ಟಾಚಾರ್ಯರಮೇಲೆ ಕ್ರಮಕ್ಕಾಗಿ ಕಾತರಿಸುತ್ತಿರುವಾಗ ಅವರನ್ನು ಅಲ್ಲಗಳೆದು ಪ್ರಧಾನಮಂತ್ರಿಗಳನ್ನು ರಕ್ಷಿಸಲು ಮುಂದಾಗಿರುವುದು. ಈ ಮಹಾದ್ರೋಹದಲ್ಲಿ ಪ್ರಧಾನ ಮಂತ್ರಿ, ರಕ್ಷಣಾ [illegible] ಅವರ ಪಕ್ಷ ಮತ್ತು ಇವರ ಪಕ್ಷ ಮತ್ತು ಇವರೆಲ್ಲರಿಗೂ ಮೇಲಿನ ಆರೆಸ್ಸೆಸ್ ಎಂಬ ಖಳ ಸಾಮ್ರಾಟರೆಲ್ಲರೂ ತಮ್ಮ ಅಸಹ್ಯಕರ, ಘೋರ ರೂಪವನ್ನು ತೋರಿದ್ದಾರೆ.

ಈ ಪಾತಕಿಗಳು ಒಂದು ಕ್ಷಣವೂ ಅಧಿಕಾರದಲ್ಲುಳಿಯಲು ಯೋಗ್ಯರಲ್ಲ.

ನಾಚಿಕೆ, ಮಾನ, ಮರ್ಯಾದೆಗಳನ್ನು ಗಾಳಿಗೆ ತೂರಿ ಅಧಿಕಾರದಲ್ಲಿ ಮುಂದುವರೆಯು ತ್ತಿರುವ ಇವರನ್ನು ದೇಶದ ಜನತೆ ಅಧಿಕಾರದಿಂದ ಕೆಳಕ್ಕೆ, ಇತಿಹಾಸದ ಕಸದ ಬುಟ್ಟಿಗೆ ಎಸೆಯಬೇಕು.

– ಜಿ.ಎನ್.ನಾಗರಾಜ್

# ದ ರಕ್ಷಣೆ ಭಕ್ಷಣೆ







ಸೈನಾಧಿಕಾರಿಗಳು



ಜಯಾ ಜೇಟ್ಲಿ



ಆರ್.ಕೆ. ಜೈನ್

## ಮೀಸೆ ಹಿಡಿದು ಮಿಕಗಳನ್ನು ಹೊರಗೆಳೆದಿದ್ದು ಹೀಗೆ

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್)ದಲ್ಲಿ ಈ ಕಥೆ ವ್ಯಾಪಕವಾಗಿ ಪ್ರಚಲಿತವಿದೆ. ರಾಮಕೃಷ್ಣ ಪರಮ ಹಂಸರ ಬದುಕಿನ ಕುರಿತಾದ್ದು ಅದು. ಒಮ್ಮೆ ಅವರು ತಮ್ಮ ಆಶ್ರಮದಲ್ಲಿ ನೆಲದಲ್ಲಿ ಹಾಸಿದ್ದ ನೆಲಹಾಸಿನ ಮೇಲೆ ಕುಳಿತುಕೊಳ್ಳಲು ಹೋದರಂತೆ. ನಿಗಿನಿಗಿ ಬೆಂಕಿ ಕೆಂಡದ ಮೇಲೆ ಕುಳಿತಂತಾಗಿ ಚಂಗನೆ ನೆಗೆದು ನಿಂತು ಬಿಟ್ಟರಂತೆ. ಏನಾಗಿದೆ ಎಂದು ನೋಡಿದರೆ ಯಾರೋ ರಾಮಕೃಷ್ಣರ ತಾತ್ವಿಕ ಬದ್ಧತೆ, ಪರಿಶುದ್ಧತೆಗಳನ್ನು ಪರೀಕ್ಷಿಸುವ ಸಲುವಾಗಿ ನೆಲಹಾಸಿನ ಕೆಳಗೆ ನಾಣ್ಯವೊಂದನ್ನು ಹಾಕಿದ್ದರಂತೆ!!


ಈ ಘಟನೆಯ ಸತ್ಯಾಸತ್ಯತೆಯ ವಿಚಾರ ಏನೇ ಇರಲಿ, ಈ ಕತೆಯಂತೂ ಆರೆಸ್ಸೆಸ್ ಬಿಜೆಪಿಗಳ ಬಾಯಲ್ಲಿ ತುಂಬಾ ಕೇಳಿಬರುತ್ತದೆ. ಇಂಥ ಕತೆಗಳನ್ನು ಶಿವಾಜಿ ಸಾವರ್ಕರ್ ಮುಂತಾದವರ ಕುರಿತ ಕಟ್ಟು ಕತೆ. ಹೇಳಿಯೇ ಅರೆಸ್ಸೆಸ್ ಎಳೆಯರನ್ನು ಯುವಜನರನ್ನು ಆಕರ್ಷಿಸಿ ಜನ ಸಾಮಾನ್ಯರನ್ನು ಮರುಳು ಮಾಡುತ್ತಿದೆ.

ಈ ಸಂಘ ಪರಿವಾರದ ರಾಜಕೀಯ ಅಂಗವಾಗಿರುವ ಭಾರತೀಯ ಜನತಾ ಪಕ್ಷದ (ಬಿಜೆಪಿ) ರಾಷ್ಟ್ರಾಧ್ಯಕ್ಷನ ಭೇಟಿಗೆ ಅವಕಾಶ ಸಿಗಬೇಕಿದ್ದರೆ ಆತನ ಕಾರ್ಯದರ್ಶಿಗೆ ಒಂದು ಚಿನ್ನದ ಸರ ಕೊಡಬೇಕು. ಸ್ವತಃ ಬಿಜೆಪಿ ರಾಷ್ಟ್ರಾದ್ಯಕ್ಷರಿಗೆ ರಕ್ಷಣಾ ಸಾಧನಗಳ ಖರೀದಿ ಒಪ್ಪಂದ ಕುದುರಿಸಲು ಕಮೀಷನ್ ಹಣದ ಅಡ್ವಾನ್ಸ್ ಆಗಿ ಲಕ್ಷ ರೂ ಕಾಣಿಕೆ ಸಲ್ಲಿಕೆ ಆಗಿದೆ. ಹೆಜ್ಜೆ ಹೆಜ್ಜೆಗೆ ಲಂಚ ಲಂಚ ಲಂಚ.

ಇದು ಭಾರತದ ರಕ್ಷಣಾ ಇಲಾಖೆಯನ್ನು ದೇಶವನ್ನು ಆವರಿಸಿರುವ ಹೊಲಸು ವಿಕೃತ ಭ್ರಷ್ಟಾಚಾರದ ವಿರಾಟ್ ಸ್ವರೂಪದ ಒಂದು ಸಣ್ಣ ತುದಿ ಮಾತ್ರ. ಭ್ರಷ್ಟಾಚಾರದ ಕಮಟುವಾಸನೆಯ ಜಾಡನ್ನು ಹಿಡಿದು ಹೊರಟರೆ ಎನ್.ಡಿ.ಎ. ಅಂಗ ಪಕ್ಷಗಳ ರಾಷ್ಟ್ರಾಧ್ಯಕ್ಷರುಗಳು ರಕ್ಷಣಾ ಮಂತ್ರಿಗಳು, ರಕ್ಷಣಾ ಇಲಾಖೆಯ ಅತ್ಯುನ್ನತ ಅಧಿಕಾರಿಗಳು ಸೇನಾ

ಪುಟ 11 ಕ್ಕೆ




## "ಈ ಹಗರಣದಿಂದ ದೇಶವೇ ತಲೆತಗ್ಗಿಸುವಂತಾಗಿದೆ"



ತೆಹಲ್ಕಾ ಡಾಟ್ ಕಾಂ ಬಯಲಿಗೆಳೆದ ರಕ್ಷಣಾ ಹಗರಣಕ್ಕೆ ಸರಿಸಾಟಿಯಾಗುವ ಇನ್ನೊಂದು ಉದಾಹರಣೆಯು ಭಾರತದ ರಾಜಕೀಯ ಚರಿತ್ರೆಯಲ್ಲೇ ಇಲ್ಲ" ಎಂದು ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಹರ್‌ಕಿಷನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.ತೆಹಲ್ಕಾದ ಜೂನಿ ಎಂ. ಎಲ್. ಅವರಿಗೆ ನೀಡಲಾದ ಸಂದರ್ಶನದಲ್ಲಿ ಈ ಹಗರಣವು ಬೀರಬಹುದಾದ ರಾಜಕೀಯ ಪರಿಣಾಮಗಳ ಕುರಿತು ಕಾಮ್ರೇಡ್ ಸುರ್ಜಿತ್ ಹೀಗೆ ಹೇಳುತ್ತಾರೆ.

***ನಿಮ್ಮ ಪ್ರಕಾರ ಈ ಹಗರಣದ ಬಯಲುಗೊಳ್ಳುವಿಕೆಯಿಂದ ಏನು ಪ್ರಯೋಜನವಾಗಬಹುದು?***

**ಸುರ್ಜಿತ್** : ತೆಹಲ್ಕಾ ಡಾಟ್ ಕಾಂ ಬಿಡುಗಡೆ ಮಾಡಿರುವ ಟೇಪುಗಳು ಮತ್ತು ಮಾಹಿತಿಗಳು ಸರ್ಕಾರದೊಳಗಿನ ಭ್ರಷ್ಟಾಚಾರದ ಇಡೀ ವ್ಯವಸ್ಥೆಯನ್ನು, ಭ್ರಷ್ಟಾಚಾರವನ್ನು ಖಾಯಂಗೊಳಿಸಲು ನೆರವಾಗುವ ವ್ಯವಸ್ಥೆಯೊಳಗಿನ ಜೋಡಣೆಗಳನ್ನು ಬಯಲಿಗೆಳೆದಿವೆ. ಭಾರತದ ರಾಜಕೀಯ ಚರಿತ್ರೆಯಲ್ಲೇ ಪ್ರಥಮ ಸಲ ಸರ್ಕಾರದೊಳಗಿನ ಪ್ರಮುಖ ರಾಜಕೀಯ ಪಕ್ಷಗಳು ಇಷ್ಟೊಂದು ಪ್ರಮಾಣದ ಹಗರಣದಲ್ಲಿ ಭಾಗಿಯಾಗಿವೆ.

ಎರಡು ರಾಜಕೀಯ ಪಕ್ಷಗಳ ಅಧ್ಯಕ್ಷರುಗಳು ಲಂಚ ಸ್ವೀಕರಿಸುತ್ತಿರುವಾಗ ಸಿಕ್ಕಿಬಿದ್ದಿರುವುದು ಈ ಹಗರಣದ ಗಂಭೀರತೆಯನ್ನು ಹೆಚ್ಚಿಸುತ್ತದೆ. ಬಿ.ಜೆ.ಪಿ. ಅಧ್ಯಕ್ಷ ಬಂಗಾರು ಲಕ್ಷ್ಮಣ್ ಮತ್ತು ಸಮತಾ ಪಕ್ಷದ ಅಧ್ಯಕ್ಷೆ ಜಯ ಜೈಟ್ಲಿ ಇವರಿಬ್ಬರೂ ಒಬ್ಬ ನಕಲಿ ಶಸ್ತ್ರಾಸ್ತ್ರ ಪೂರೈಕೆದಾರನಿಂದ ಲಂಚ ಸ್ವೀಕರಿಸಿದ್ದಾರೆ. ಬಯಲಾದ ಈ ಹಗರಣವು ನಮ್ಮ ಆಡಳಿತ ವ್ಯವಸ್ಥೆಯೊಳಗೆ ಯಾವ ಯಾವ ಮಟ್ಟದಲ್ಲಿ ಲಂಚಗುಳಿತನ ಮನೆ ಮಾಡಿಕೊಂಡಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಇಂತಹ ವ್ಯವಸ್ಥೆಯಿಂದ ರಕ್ಷಣೆ ಹೇಗೆ ಸಾಧ್ಯ?

**ಇಡೀ ಸರ್ಕಾರವೇ ಈ ಹಗರಣದ ಭಾಗವಾಗಿದೆ. ಈಗ ಜನ ಕೇಳುತ್ತಾರೆ, "ಎಲ್ಲಿದೆ ಸರ್ಕಾರ?" ಜನಗಳಿಗೆ ಅವರು ಏನು ಉತ್ತರ ಕೊಡುತ್ತಾರೆ? ಇಂತಹ ಭ್ರಷ್ಟ ಸರ್ಕಾರವನ್ನು ಅಧಿಕಾರದಲ್ಲಿಟ್ಟುಕೊಂಡು ಈ ದೇಶ ಮುನ್ನಡೆಯುವುದು ಹೇಗೆ?**

ಇನ್ನೂ ಹೆಚ್ಚಿನ ಮಾಹಿತಿ ಹೊರಬೀಳಲಿದೆ ಎನ್ನಲಾಗಿದೆ. ಈ ದಾಖಲೆಗಳು ಪ್ರಕರಣದ ಬಹುತೇಕ ಕೊಂಡಿಗಳನ್ನು ಹೊರಗೆಡವಲಿದ್ದು ಅದರಿಂದ ಸರ್ಕಾರವನ್ನು ಭಾರಿ ಇಕ್ಕಟ್ಟಿಗೆ ನೂಕುವುದು.

***ಈ ಹಗರಣವು ಭಾರತದ ಜನತೆಯ ಮೇಲೆ ಯಾವ ಪರಿಣಾಮ ಬೀರಬಹುದು?***

**ಸುರ್ಜಿತ್** : ಈ ಹಗರಣದಿಂಧ ದೇಶ ತಲೆತಗ್ಗಿಸುವಂತಾಗಿದೆ ಎಂದು ನನಗನಿಸುತ್ತದೆ. ಈ ಹಿಂದೆಯೂ ಹಗರಣಗಳು, ಭ್ರಷ್ಟಾಚಾರದ ಪ್ರಕರಣಗಳು ಸಂಭವಿಸಿವೆ. ಆದರೆ, ನಾನು ಈ ಮೊದಲು ಹೇಳಿದಂತೆ, ಇಡೀ ಸರ್ಕಾರವೇ ಈ ಹಗರಣದ ಭಾಗವಾಗಿದೆ. ಈಗ ಜನ ಕೇಳುತ್ತಾರೆ, "ಎಲ್ಲಿದೆ ಸರ್ಕಾರ?" ಜನಗಳಿಗೆ ಅವರು ಏನು ಉತ್ತರ ಕೊಡುತ್ತಾರೆ? ಇಂತಹ ಭ್ರಷ್ಟ ಸರ್ಕಾರವನ್ನು ಅಧಿಕಾರದಲ್ಲಿಟ್ಟುಕೊಂಡು ಈ ದೇಶ ಮುನ್ನಡೆಯುವುದು ಹೇಗೆ?

***ಈ ಹಿಂದೆಯೂ ಆಳುವ ಪಕ್ಷಗಳು ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡಿರಲಿಲ್ಲವೆ?***

**ಸುರ್ಜಿತ್** ; ನಾನು ಈಗಾಗಲೇ ಹೇಳಿದ್ದೇನೆ. ಅವು ಆಗೊಮ್ಮೆ ಈಗೊಮ್ಮೆ ನಡೆದ ಪ್ರತ್ಯೇಕ ಭ್ರಷ್ಟಾಚಾರದ ಪ್ರಕರಣಗಳು. ಅವುಗಳಲ್ಲಿ ಒಬ್ಬಿಬ್ಬ ವ್ಯಕ್ತಿಗಳು ಭಾಗಿಯಾಗಿರಬಹುದು ಮತ್ತು ಅವರನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಲು ನಮ್ಮ ವ್ಯವಸ್ಥೆ ಸಮರ್ಥವಾಗಿತ್ತು. ಒಬ್ಬಿಬ್ಬರು ಭ್ರಷ್ಟಾಚಾರದಲ್ಲಿ ಭಾಗಿಯಾಗುವುದೆಂದರೆ ಅದು ಅವರ ವೈಯುಕ್ತಿಕ ದುರಾಸೆ ಹಾಗೂ ದುರ್ನಡತೆ ಆಗಿರುತ್ತದೆ. ಇಲ್ಲಿ ಆಳುವ ಮೈತ್ರಿಕೂಟದ ಬಹುತೇಕ ಪಕ್ಷಗಳು ಭಾಗಿಯಾಗಿವೆ. ಜಯ ಜೈಟ್ಲಿ ಅವರನ್ನು ಸಮತಾ ಪಕ್ಷದಿಂದಾಗಲಿ, ಸಮತಾ ಪಕ್ಷವನ್ನು ಜಾರ್ಜ್ ಫರ್ನಾಂಡಿಸ್ ಅವರಿಂದಾಗಲಿ ಪ್ರತ್ಯೇಕಿಸುವುದು ಹೇಗೆ ಸಾಧ್ಯ? ಅದರಂತೆಯೇ ಬಿಜೆಪಿಯನ್ನು ಬಂಗಾರು ಲಕ್ಷ್ಮಣ್‌ನಿಂದ ಭಿನ್ನವಾಗಿ ಕಾಣಲು ಹೇಗೆ ಸಾಧ್ಯ? ಇದು ಇಡಿಯಾಗಿ ಒಂದು ಭಿನ್ನವಾದ ಪರಿಸ್ಥಿತಿ.

ಈ ನಕಲಿ ಶಸ್ತ್ರಾಸ್ತ್ರ ಪ್ರಕರಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಸಹ ಭಾಗಿಯಾಗಿದೆ. ಬಿಜೆಪಿಯು ಆರ್.ಎಸ್.ಎಸ್. ನಿಂದ ನೈತಿಕ ಬೋಧನೆಯನ್ನು ಹಾಗೂ ಮಾರ್ಗದರ್ಶನವನ್ನು ಪಡೆಯುತ್ತಿರುತ್ತದೆ. ಈಗ ಅದರ ಭ್ರಷ್ಟ ವಿಭಾಗಕ್ಕೆ ಮಾರ್ಗದರ್ಶನ ನೀಡಲು ಆರ್.ಎಸ್.ಎಸ್. ಗೆ ಯಾವ ನೈತಿಕ ಹಕ್ಕಿದೆ? ಸರ್ಕಾರಕ್ಕೆ ನೇತೃತ್ವ ನೀಡುವ ಪಕ್ಷವಾದ ಬಿಜೆಪಿ ಇಡೀ ದೇಶವನ್ನೇ ತಲೆತಗ್ಗಿಸುವಂತೆ ಮಾಡಿದೆ.

***ಈ ಸರ್ಕಾರ ಪತನ ವಾದರೆ, ದೇಶವನ್ನು ನಡೆಸುವ 'ನೈತಿಕ ಹಕ್ಕು'ಳ್ಳ ಬದಲಿ ರಾಜಕೀಯ ಹೊಂದಾಣಿಕೆ ಸಾಧ್ಯವೆ?***

**ಸುರ್ಜಿತ್** : ಅಂತಹ ಪರಿಸ್ಥಿತಿ ಉದ್ಭವವಾದರೆ, ಜನತೆಗೆ ಸೂಕ್ತವಾದ ರಾಜಕೀಯ ಹೊಂದಾಣಿಕೆ ದೊರೆಯುವುದು. ಈ ಹಂತದಲ್ಲಿ ನಾವು ಬದಲಿ ಸರ್ಕಾರವನ್ನು ರಚಿಸುವುದರಲ್ಲಿ ತೊಡಗಿಕೊಂಡಿಲ್ಲ. ಸರ್ಕಾರದ ತಪ್ಪುಗಳ ವಿರುದ್ಧ ಚಳುವಳಿ ನಡೆಸುವುದೇ ಈಗ ಮುಖ್ಯ. ಜನ ತಮ್ಮ ಪ್ರತಿಭಟನೆ ಮತ್ತು ಮುಷ್ಕರಗಳ ಮೂಲಕ ಸರ್ಕಾರದ ವಿರುದ್ಧ ಹೇಗೆ ಪ್ರತಿಕ್ರಿಯಿಸುತ್ತಾರೆ, ನೋಡೋಣ.

***ಈ ಪ್ರಕರಣದಲ್ಲಿ ನ್ಯಾಯಾಂಗದ ಮಧ್ಯಪ್ರವೇಶ ಅವಶ್ಯವಿದೆಯಾ?***

**ಸುರ್ಜಿತ್** : ತೆಹಲ್ಕಾ ಟೇಪುಗಳಲ್ಲಿ ಎಲ್ಲವನ್ನೂ ಸ್ಪಷ್ಟವಾಗಿ ಕೊಟ್ಟಿರುವಾಗ ಇನ್ನಾವ ನ್ಯಾಯಾಂಗ ಮಧ್ಯಪ್ರವೇಶ? ಈ ಹಂತದಲ್ಲಿ ನ್ಯಾಯಾಂಗ ಮಧ್ಯಪ್ರವೇಶ ಕೇವಲ ಒಂದು ನಾಟಕವಾಗುವುದು.

***ತೆಹಲ್ಕಾ ಪ್ರಕರಣದಿಂದ ನೀವು ಸಕಾರಾತ್ಮಕ ಫಲಿತಾಂಶವನ್ನು ನಿರೀಕ್ಷಿಸುತ್ತೀರಾ?***

**ಸುರ್ಜಿತ್**: ಇದು ನಮ್ಮ ರಾಷ್ಟ್ರದ ರಕ್ಷಣೆಗೆ ಸಂಭಂದಿಸಿರುವುದರಿಂದ ಸುಖ್‌ರಾಂ ಪ್ರಕರಣದ ರೀತಿಯಲ್ಲಿ ಇದು ಕೊನೆಗೊಳ್ಳಲಾರದು. ಸರ್ಕಾರವು ಇಡಿಯಾಗಿ ಹೇಗೆ ಭ್ರಷ್ಟಾಚಾರದಲ್ಲಿ ಭಾಗಿಯಾಗುತ್ತದೆ ಎಂಬುದನ್ನು ಜನ ಈ ಮೊದಲು ನೋಡಿರಲಿಲ್ಲ. ಸುಖ್‌ರಾಂ ಅಂತವರನ್ನು ಸೇರಿಸಿಕೊಳ್ಳುವ ಮೂಲಕ ಬಿ.ಜೆ.ಪಿ. ಒಂದು ಭ್ರಷ್ಟ ಪಕ್ಷ ಎಂದು ಸಾಬೀತು ಪಡಿಸಿಕೊಂಡಿದೆ. ಈಗ ಮತ್ತೊಮ್ಮೆ ತೆಹಲ್ಕಾ ಟೇಪುಗಳ ಮೂಲಕ, ಬಿಜೆಪಿ ತನ್ನ ಅಂತರಾಳದವರೆಗೂ ಹೇಗೆ ಭ್ರಷ್ಟವಾಗಿದೆ ಎಂಬುದನ್ನು ಜನ ನೋಡುವಂತಾಗಿದೆ. ಆದ್ದರಿಂದ ಇದು ಖಚಿತವಾಗಿ ನಮ್ಮ ವ್ಯವಸ್ಥೆಯೊಳಗೆ ಸಕಾರಾತ್ಮಕ ಬದಲಾವಣೆಗಳನ್ನು ತರಲಿದೆ.

***ಆದರೆ, ನೀವು ಅನುಮಾನಾಸ್ಪದ ಚರಿತ್ರೆಯುಳ್ಳ ಪಕ್ಷಗಳೊಂದಿಗೆ ವೇದಿಕೆಯನ್ನು ಹಂಚಿಕೊಳ್ಳುವುದು ಹೇಗೆ?***

**ಸುರ್ಜಿತ್** : ಅವರ ಭ್ರಷ್ಟಾಚಾರವನ್ನು ಇಡೀ ಒಂದು ಸರ್ಕಾರದ ಭ್ರಷ್ಟಾಚಾರವನ್ನು ಹೋಲಿಸಲಾಗದು. ರಕ್ಷಣಾ ಇಲಾಖೆಯ ಹಗರಣ ತೀರಾ ಭಿನ್ನವಾದದ್ದು. ಅದು ಸ್ವಚ್ಛ ಆಡಳಿತದ ಎಲ್ಲ ಗಡಿಗಳನ್ನು ಉಲ್ಲಂಘಿಸಿದೆ.

# ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

**ತೆಹಲ್ಕಾ ಡಾಟ್ ಕಾಮ್ ಕ್ಯಾಸೆಟ್‌ನಲ್ಲಿ ದಾಖಲಿಸಿಕೊಂಡದ್ದು ನೂರು ತಾಸುಗಳ ಹಗರಣ. ಅದು ಹತ್ತು ತಾಸು, ನಾಲ್ಕುವರೆ ತಾಸು ಕೊನೆಗೆ ಎರಡೂವರೆ ತಾಸುಗಳಿಗೆ ಸಂಕ್ಷಿಪ್ತಗೊಳಿಸಿ ಬಿಡುಗಡೆಗೊಂಡಿದೆ. ಅದರಲ್ಲಿನ ಕೆಲವು ಸಂಭಾಷಣೆಗಳ ತುಣುಕುಗಳು ಇಲ್ಲಿವೆ. 'ಚೋರಿ ಚೋರಿ ಚುಪ್ಕೆ ಚುಪ್ಕೆ' ಚಿತ್ರದ ನಿರ್ಮಾಪಕ ಮೊಬೈಲ್ ಸಂಭಾಷಣೆಯಲ್ಲಿ ಮಾತನಾಡಿದ್ದನ್ನೇ ರೆಕಾರ್ಡ್ ಮಾಡಿ ಅದನ್ನು ಬಳಸಿ ಜೈಲಿಗೆ ತಳ್ಳಿರುವಾಗ ಸ್ಪಷ್ಟವಾದ ಧ್ವನಿ ಮತ್ತು ಚಿತ್ರಗಳ ಘಟನಾವಳಿಗಳನ್ನು ಯಾಕೆ ಬಳಸಬಾರದು? ತೆಹಲ್ಕಾವನ್ನು ಹಳಿಯುವವರು ಇದನ್ನೇಕೆ ಹೇಳುತ್ತಿಲ್ಲ?**

## ತೆಹಲ್ಕಾ ಬಿಚ್ಚಿಟ್ಟಿರುವ ಹಗರಣಗಳ ಹೂರಣ

### "ಮೊದಲು ನನಗೆ ಹತ್ತು ಲಕ್ಷ ಕೊಡಿ"

***ಈ 'ವ್ಯವಹಾರ'(ತನಿಖೆ) ಆರಂಭವಾದದ್ದು ರಕ್ಷಣಾ ಇಲಾಖೆಯ ಸೀನಿಯರ್ ಸೆಕ್ಷನ್ ಆಫೀಸರ್ ಶಶಿ ಮೆನ್ ಭೇಟಿಯಿಂದ. ನಂತರ ಬ್ರಿಗೇಡಿಯರ್ ಅನಿ ಸೆಹಗಲ್, ಅವರಿಂದ ಪೂರೈಕೆಯ ಮಹಾನಿರ್ದೇಶಕ(DGOS) ಮೇಜರ್ ಜನರಲ್ ಅಹ್ಲುವಾಲಿಯ, ಗುಣಮಟ್ಟದ ಭರವಸೆ ವಿಭಾಗದ ಅಡಿಶನಲ್ ಮಹಾನಿರ್ದೇಶಕ ಮೇಜರ್ ಜನರಲ್ ಮುರ್ಗೈ ಹಾಗೂ ಶಸ್ತ್ರಾಸ್ತ್ರ ಮತ್ತು ಸಲಕರಣೆಗಳ ವಿಭಾಗದ ಅಡಿಶನಲ್ ಮಹಾನಿರ್ದೇಶಕ ಮೇಜರ್ ಜನರಲ್ ಪಿ.ಎಸ್.ಕೆ.ಚೌಧುರಿವರಿಗೆ ಸಂಪರ್ಕ. ತನಿಖೆಯ ಆರಂಭಿಕ ಕೆಲವು ಸಂಭಾಷಣೆಗಳು***

ಬ್ರಿ. ಸೆಹಗಲ್: (ರಕ್ಷಣಾ) ಸಚಿವಾಲಯದಲ್ಲಿ ಕೆಲಸಗಳನ್ನು ಕೆಟ್ಟ ರೀತಿಯಲ್ಲಿ ತಮಗೆ ಬೇಕಾದಂತೆ ತಿರುಚಿಕೊಳ್ಳುತ್ತಾರೆ. ಈ ಬಗ್ಗೆ ಖಡಾಖಂಡಿತವಾಗಿ ಹೇಳಬಲ್ಲೆ.... ಇಂತಹ ಹಲವು ವಿಷಯಗಳು ಇಲ್ಲಿ ಬರುತ್ತವೆ. ಉದಾಹರಣೆಗೆ ನಿಮ್ಮ ಬಿಡಿ ಭಾಗಗಳಿವೆ. ಯಾವ ಬಿಡಿ ಭಾಗಗಳು ನಮಗೆ ಬೇಕಾಗಿವೆ ಎಂದು ನಾನು ಹೇಳಬಲ್ಲೆ. ಈಹಿಂದೆ ಯಾವ ಬೆಲೆಗೆ ಕೊಂಡುಕೊಳ್ಳಲಾಗಿದೆ ಎಂದು ಹೇಳಬಲ್ಲೆ. ಸಾಮಾನ್ಯವಾಗಿ ಏನಾಗುತ್ತದೆಯೆಂದರೆ ಕೊನೆಯ ನಿಮಿಷದವರೆಗೂ ಅವರಿಗೆ ತಿಳಿದಿರುವುದಿಲ್ಲ - ಯಾವ ರೇಟ್ ಎಂದು. ನಾನು ಅದನ್ನು ಲೆಕ್ಕ ಮಾಡಿ ಹೇಳಬಲ್ಲೆ. ನೀವೂ ಮಾಡಿ. ಪ್ರತಿಯೊಬ್ಬರೂ ಕೇಳ ಬರುತ್ತಾರೆ. ಆದರೆ ನಾನು ಹೇಳುತ್ತೇನೆ ನೋಡಿ, ಮೊದಲು ನನಗೆ 10 ಲಕ್ಷ ಕೊಡಿ, ನಂತರ ಮಾತಾಡೋಣ"

ತೆಹಲ್ಕಾ: ಅವರು ಮಾಹಿತಿ ಕೊಡದಿದ್ದರೆ ಮುಂದೆ ಮಾತಾಡುವ ಪ್ರಶ್ನೆಯೇ ಬರುವುದಿಲ್ಲ. ಭವಿಷ್ಯದ ಬಗ್ಗೆ ಯಾರು ಚರ್ಚೆ ಮಾಡುತ್ತಾರೆ? ಸರ್, ಈ ವಿಷಯದಲ್ಲಿ ನಮ್ಮ ಜನಕ್ಕೆ ಗೊಂದಲವಿಲ್ಲ. ನೀವು ಮುಂದುವರೆಯಿರಿ ಎಂದು ನನಗೆ ಹೇಳಿದ್ದಾರೆ.

ಸೆ: ನಾನು ಹಲವು ವಿಷಯಗಳಲ್ಲಿ ಸಹಾಯ ಮಾಡಬಲ್ಲೆ. ಯಾರನ್ನು ಎಲ್ಲಿ ಭೇಟಿಯಾಗಬೇಕು ಎಂದು ಹೇಳಬಲ್ಲೆ.

ತೆ.: ಅಂದರೆ ನೀವು ಎಲ್ಲವನ್ನೂ ನನಗೆ ಹೇಳುತ್ತೀರಿ.

ಸೆ: ನೋಡಿ, ನಾನು ನಿಮಗೆ ದಾರಿ ತೋರಿಸಬಲ್ಲೆ.

ತೆ.: ಬಿಲ್‌ಕುಲ್.

ಸೆ: ಆದರೆ ನೀವೇ ಸ್ವತಃ ಹೋಗಬೇಕು.

ತೆ.: ಹೌದು, ಒಂದು ಸಲ ನೀವು ದಾರಿ ತೋರಿಸಿದರೆ ನಾವು ಅದನ್ನೇ ಅನುಸರಿಸುತ್ತೇವೆ.

(ಇದರ ಬೆನ್ನ ಹಿಂದೆಯೇ ಬ್ರಿಗೇಡಿಯರ್ ಸೆಹಗಲ್ ಮತ್ತು ಇನ್ನೊಬ್ಬ ಸೇನಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಕರ್ಮಾನೆರಿಂದ ಫೈವ್‌ಸ್ಟಾರ್ ಹೋಟೆಲಿನಲ್ಲಿ ಊಟ ಕೊಡಿಸಬೇಕೆಂದು ಒತ್ತಾಯ ಬರುತ್ತದೆ.

### "ಯಾವ ಪರ್ಸೆಂಟೇಜ್......"

***ಸೇನಾಧಿಕಾರಿಗಳು, ರಕ್ಷಣಾ ಇಲಾಖೆಯ ಅಧಿಕಾರಿಗಳನ್ನು 'ಹಿಡಿದ'ರಷ್ಟೆ ಸಾಲದು. ಹಣಕಾಸು ಅಧಿಕಾರಿಗಳನ್ನೂ ಸಂತುಷ್ಟ ಪಡಿಸಬೇಕು. ಬ್ರಿಗೇಡಿಯರ್ ಸೆಹಗಲ್ ತೆಹಲ್ಕಾ ತಂಡಕ್ಕೆ ರಕ್ಷಣಾ ಇಲಾಖೆಯ ಅಡಿಶನಲ್ ಹಣಕಾಸು ಸಲಹೆಗಾರ ನರೇಂದ್ರ ಸಿಂಗರನ್ನು ಪರಿಚಯಿಸಿದರು. ಅವರೊಡನೆ ಸಂಭಾಷಣೆಯ ಕೆಲವು ಭಾಗಗಳನ್ನು ನೋಡಿ.***

ನರೇಂದ್ರ ಸಿಂಗ್: ಹೀಗೆ.... ಹಲವಾರು ವ್ಯಕ್ತಿಗಳನ್ನು ಸಂಪರ್ಕಿಸಬೇಕು. ಈ ಇಲಾಖೆಯಲ್ಲಿ ಒಬ್ಬರನ್ನೇ ಸಂಪರ್ಕಿಸಿದರೆ ಸಾಲದು.

ತೆಹಲ್ಕಾ: ಹೂಂ.

ನರೇಂದ್ರ: ಒಬ್ಬ ಬೇಡಿಕೆ ಕ್ಲಿಯರ್ ಮಾಡ್ತಾನೆ.

ತೆ: ಹೌದು

ನರೇಂದ್ರ: ಇನ್ನೊಬ್ಬ ವ್ಯಕ್ತಿ ಬೆಲೆ ಮಾತುಕತೆ ಸಮಿತಿಯಲ್ಲಿ ಕೂರುತ್ತಾನೆ.

ತೆ. : ಸರಿ.

ನ.: ಸರಿಯಾ? ಹೀಗೆ ನಾಲ್ಕೈದು ಕೆಲಸದ ಮಟ್ಟಗಳಲ್ಲಿರುತ್ತಾರೆ.

ತೆ. : ಸರಿ.

ನ. : ಆದ್ದರಿಂದ ಕೆಲಸದ ಮಟ್ಟಗಳಲ್ಲಿರುವ ವ್ಯಕ್ತಿಗಳೇ ನನಗೆ ಬೇಕು.

ತೆ: ಹೌದು.

ನ.: ಈಗ ಇದು ನಿಮ್ಮ ಕೆಲಸ. ಸಮಸ್ಯೆಗಳಿದ್ದರೆ ನಾನು ಹೇಳ್ತೇನೆ. ಆ ವ್ಯಕ್ತಿಯನ್ನೋ, ಈ ವ್ಯಕ್ತಿಯನ್ನೋ ನೀವು ಸಂಭಾಳಿಸಬೇಕು.

ತೆ. : ಓ.ಕೆ.

ನ.: ಅದುವರೆಗೆ ದಯವಿಟ್ಟು ಸುಮ್ಮನಿರಿ. ಯಾರನ್ನೂ ಭೇಟಿಯಾಗಬೇಡಿ. ಆ ಹಂತಕ್ಕೆ ಬಂದಾಗ ಮುಂದೆ ಹೇಗೆ ಹೋಗುವುದೆಂದು ತಿಳಿಸುತ್ತೇನೆ.

(ನರೇಂದ್ರ ಸಿಂಗ್ ನಗುತ್ತಾರೆ. ತೆಹಲ್ಕಾ ಕರೆನ್ಸಿ ನೋಟುಗಳ ಒಂದು ಕಂತೆ ಕೊಡುತ್ತಾರೆ. ಸಿಂಗ್ ಅದನ್ನು ಪಡೆದು ಟೇಬಲ್ಲಿನಲ್ಲಿಡುತ್ತಾರೆ)

ತೆ. : ಇದು 10,000. ನನ್ನ ಮನವಿಯೆಂದರೆ ಇಂತಹ ಭೇಟಿಗಳನ್ನು ವ್ಯವಸ್ಥೆ ಮಾಡಿ ಇವರನ್ನು ಪಾರ್ಕ್ ಹೋಟೆಲಿನಲ್ಲೋ, ಎಲ್ಲಿಯಾದರೂ ನಾವು ಭೇಟಿಯಾಗಲು ಸಿದ್ಧ.

ನ.: ನೋಡಿ, ಬೇಡಿಕೆ ಬರಲಿ.

ತೆ.: ಇದು 10,000, 10,000 ಸಣ್ಣ ಮೊತ್ತ...

ತೆ: ಅವರು ಪ್ರಮುಖ ಪಾತ್ರದಾರಿಗಳು

ನ.: ಇವರ ಪ್ರಮುಖ ಪಾತ್ರಧಾರಿಗಳು. ಆದ್ದರಿಂದ....

ತೆ: ಸರ್, ನಿಮಗೆ ಗೊತ್ತಿದೆ, ಯಾವ ಪರ್ಸೆಂಟೇಜ್ ಕೊಡ್ತಾರೆ ಅಂತ...

### ಪ್ರಧಾನ ಮಂತ್ರಿಗಳ ಕಛೇರಿಯಲ್ಲಿ ದೊಡ್ಡ ಮೀನುಗಳ ಪ್ರದೇಶದಲ್ಲಿ

***ಪ್ರಧಾನ ಮಂತ್ರಿಗಳ ಕಛೇರಿಯಲ್ಲಿ(ಪಿಎಂಓ) ವ್ಯವಹಾರ ಹೇಗೆ ನಡೆಯುತ್ತದೆ ಎಂದು ದೀಪಕ್ ಗುಪ್ತಾ ತೆಹಲ್ಕಾಗೆ ತಿಳಿಸುತ್ತಾರೆ. ಕೆಲವು ತುಣುಕುಗಳು)***

ದೀಪಕ್ ಗುಪ್ತಾ: ನಾನು ಹೇಗೆ ಕೆಲಸ ಮಾಡುತ್ತೇನೆ ಎಂದು ವಿವರಿಸುತ್ತೇನೆ. ಇಲ್ಲವಾದರೆ ನಿಮಗೆ ಅರ್ಥವಾಗಲ್ಲ.

ತೆಹಲ್ಕಾ: ಸರಿ.

ದೀ: ನಾನು ಪಿ.ಎಂ.ಓ. ದಿಂದ ಕಾರ್ಯನಿರ್ವಹಿಸುತ್ತೇನೆ.

ತೆ: ಓ.ಕೆ.

ದೀ: ಓಕೆ? ಬ್ರಜೇಶ್ ಮಿಶ್ರಾ ಸೂಚನೆ ಕೊಡುತ್ತಾರೆ....

ತೆ: ಓಕೆ

ದೀ: 'ಇದು ಮಾಡು', 'ಅದು ಮಾಡು' , 'ಇದು ಮಾಡಬೇಕಾಗಿದೆ.....' 'ಆ ಫೈಲ್ ನಿಲ್ಲಿಸಬೇಕಾಗಿದೆ...'

ತೆ: ಹೂಂ.

ದೀ: 'ಈ ಫೈಲ್ ಆರಂಭವಾಗಬೇಕಾಗಿದೆ'

ತೆ: ಹೂಂ.

ದೀ: ಅಂದರೆ ನಾವು ದೊಡ್ಡ ಮೀನುಗಳ ಪ್ರದೇಶದಲ್ಲಿದ್ದೇವೆ. ನಾವು ದೊಡ್ಡ ಮೀನು ಹಿಡಿಯುತ್ತೇವೆ. ಸಣ್ಣ ಮೀನು ನಾವು ಹಿಡಿಯುವುದಿಲ್ಲ.

ತೇ: ಹೂಂ, ಹೂಂ.

ದೀ: ನಾನು ದೊಡ್ಡ ಮೀನು ಹಿಡಿಯುತ್ತೇವೆ. ದೊಡ್ಡ ಮೀನು ಹಿಡಿಯುವುದು 35 ಪರ್ಸೆಂಟ್ ವ್ಯವಹಾರ

ತೆ: ಅದು ನಿಜ.

ದೀ: ಇದು 35 ಪರ್ಸೆಂಟ್ ವ್ಯವಹಾರ

ತೆ: ಹೂಂ.

ದೀ: ನಿಮಗೆ ತಿಳಿಯಿತೇ? ನಾವು ಸಣ್ಣ ಮೀನು ಹಿಡಿಯುವುದಿಲ್ಲ. ಆದರೆ ದೊಡ್ಡ ಮೀನಿಗೆ ಬಲೆ ಹಾಕಿದಾಗ ಬಲೆ ಹಿಡಿದುಕೊಳ್ಳುವವರಿದ್ದಾರೆ. ರಕ್ಷಣಾ ಕಾರ್ಯದರ್ಶಿ ಇದ್ದಾರೆ, ಕೆಲವು ಜಂಟಿ ಕಾರ್ಯದರ್ಶಿಗಳಿದ್ದಾರೆ....

ತೆ: ಹೂಂ,

ದೀ: ಅವರಿಗೆ ಗೊತ್ತು - ಈತ ರಾಜಕೀಯ ಪ್ರದೇಶದಿಂದ ವ್ಯವಹರಿಸುತ್ತಾನೆ, ಇವನೊಂದಿಗೆ ಚೆನ್ನಾಗಿರೋಣ ಎಂದುಕೊಳ್ಳುತ್ತಾರೆ.

ತೆ: ಸರಿ,

ದೀ: ನಾನು ಅವರಿಗೆ ಯಾವಾಗಲೂ ಹೇಳ್ತೇನೆ-ನೀವು ಪುಕ್ಕಟೆ ಗೆಳೆಯರಾಗಬೇಕಾಗಿಲ್ಲ ಎಂದು.

ತೆ: ಹಾಂ.


ದೀ: ನಿಮ್ಮ ಹಣದಿಂದ ಏನೂ ಮಾಡಬೇಕೆಂದು ನಿಮಗೆ ಗೊತ್ತಿದೆ.

ತೆ: ಹೂಂ.

ದೀ: ಹೀಗೆ ನಾವು ಉತ್ತಮ ಸಂಬಂಧಗಳನ್ನು ಇಟ್ಟುಕೊಂಡಿದ್ದೇವೆ. (ಉಪಕರಣಗಳ) ಬಳಕೆಯ ಮಟ್ಟದಲ್ಲಿ - ಸೇನೆಯಲ್ಲಿ, ವಿಮಾನ ಪಡೆಯುವಲ್ಲಿ ಸಣ್ಣ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವ ಜನ ನನ್ನ ಬಳಿಯಿದ್ದಾರೆ. ಕೆಲವೊಮ್ಮೆ ಏಜೆಂಟರು "ನಮ್ಮ ಹಣ ಕ್ಲಿಯರ್ ಮಾಡ್ಸಿ', 'ನಮ್ಮ ಆರ್ಡರ್ ಕ್ಲಿಯರ್ ಮಾಡಿಸಿ' ಎಂದೆಲ್ಲಾ ಅವರಿಂದ ಕೆಲಸ ಮಾಡಿಸಿಕೊಳ್ಳಬಹುದು. ನೋಡಿ, ರಾಜಕೀಯ ಮಧ್ಯಪ್ರವೇಶ ಬೇಕಿದ್ದರೆ ರಾಜಕಾರಣಿಗಳು ನಾಲ್ಕು ಪರ್ಸೆಂಟ್ ತಗೋತಾರೆ. ಅಧಿಕಾರಶಾಹಿ ಎರಡು ಪರ್ಸೆಂಟ್. ಸಂಬಂಧಪಟ್ಟ ಉಪಕರಣಗಳನ್ನು ಬಳಸುವ ಮಟ್ಟದಲ್ಲಿ ಒಂದು ಪರ್ಸೆಂಟ್ ಮಾತ್ರ. ಎಂಟು ಪರ್ಸೆಂಟ್ ಬಹುಶಃ ಒಂದೆರೆಡು ಪರ್ಸೆಂಟ್ ಖರ್ಚಿಗೆ.

ತೆ: ಮತ್ತೆ ಹೇಳಿ, ರಾಜಕಾರಣಿಗಳು ಎಷ್ಟು ತಗೋತಾರೆ?

ದೀ: ನಾಲ್ಕು ಪರ್ಸೆಂಟ್



ಆರ್.ಕೆ.ಗುಪ್ತಾ

ತೆ: ಸರಿ

ದೀ: ಅಧಿಕಾರಶಾಹಿಗಳು ಎರಡು ಪರ್ಸೆಂಟ್ ತಗೋತಾರೆ.

ತೆ: ಓಕೆ

### "ಜಯಾ ಜೇಟ್ಲಿಯೊಂದಿಗೆ ವ್ಯವಸ್ಥೆ ಮಾಡಿಕೊಂಡಿದ್ದೇವೆ"

***ರಾಜಕುಮಾರ್ ಗುಪ್ತಾ ಅಥವಾ ಆರ್.ಕೆ.ಗುಪ್ತಾ ಬಿಜೆಪಿ ಮತ್ತು ಆರ್.ಎಸ್.ಎಸ್.ನ ಉನ್ನತ ಮುಖಂಡರೆಲ್ಲಾ ತನಗೆ ಗೊತ್ತು ಎನ್ನುವಾತ. ದಿಲ್ಲಿಯ ಆರ್.ಎಸ್.ಎಸ್. ಮುಖ್ಯಾಲಯ ಈತನೇ ಕಟ್ಟಿಸಿಕೊಟ್ಟಿದ್ದಂತೆ. ಈತನೊಂದಿಗ ಸಂಭಾಷಣೆಯ ಕೆಲವು ತುಣುಕುಗಳು***

ಗುಪ್ತಾ: ನನಗೆ ರಕ್ಷಣಾ ಕಾರ್ಯದರ್ಶಿಗಳೊಂದಿಗ ನೇರ ಸಂಬಂಧವಿದೆ.

ತೆಹಲ್ಕಾ: ಸರ್, ನರೇಶ್ ನಿಗಮ್ ಯೋಜನೆ ಮಾಡಿದ್ದು, ನನಗೆ ಅವರ ಬಗ್ಗೆ ಸಂದೇಹಗಳಿವೆ.

ಗು: ಆತ ಸಣ್ಣ ರೀತಿಯ ಮನುಷ್ಯ. ಅವರಿಗೆ 10000 ಕೊಡಿ. 4000, ಮುಂಬೈಗೆ ವಿಮಾನ ಟಿಕೆಟ್ ಕೊಡಿಸಿ. ಆತ ಹೇಳಿದ ಹಾಗೆ ಮಾಡೋಣ.

ತೆ: ಓಕೆ

ಗು: ಆದರೇನಂತೆ? ಆಟ ದೊಡ್ಡದಿರುವಾಗ, ನಾನು ಈ ವರ್ಷ... ನನಗೇ 100 ಕೋಟಿ ನಿರೀಕ್ಷಿಸುತ್ತಿರುವಾಗ...

ತೆ: ಓಕೆ.

ಗು: ಆತನ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಬೇಕು. ಎರಡು, ಮೂರು ನಾಲ್ಕು, ಹತ್ತು, ಲಕ್ಷ ಕೊಟ್ಟು ಬಿಡಬಹುದು.

ತೆ: ಹೌದುದು, ಅಷ್ಟೆ.

---

**ಜನವಾಹಿನಿ**
ಶುಕ್ರವಾರ ಮಾರ್ಚ್ 15, 2001

**'ತೇಲಿಸೋ ರಂಗಾ ಇಲ್ಲ ಮುಳುಗಿಸೋ' ಎಂಬ ಅಭೂತಪೂರ್ವ ಒಗ್ಗಟ್ಟು!**

ಕೇಂದ್ರದಲ್ಲಿ ಆಳುವ ಎನ್‌ಡಿಎಯ ಪ್ರಧಾನ ಪಕ್ಷವಾದ ಬಿಜೆಪಿಯ ಅಧ್ಯಕ್ಷರು ರಕ್ಷಣಾ ವ್ಯವಹಾರದಲ್ಲಿ ಪಕ್ಷಕ್ಕಾಗಿ ಚಂದಾ(ಲಂಚ) ಸ್ವೀಕರಿಸಿದ್ದನ್ನು ಗುರಿಯಾಗಿಟ್ಟುಕೊಂಡು ಪ್ರತಿಪಕ್ಷಗಳು ಸರಕಾರದ ರಾಜೀನಾಮೆಗೆ ಪಟ್ಟು ಹಿಡಿದಿರುವಂತೆಯೇ, ಎನ್‌ಡಿಎಯ ಮಿತ್ರ ಪಕ್ಷಗಳು ಈ ಸಂಕಟಕಾಲದಲ್ಲಿ ಪ್ರಧಾನಿಯವರ ಬೆನ್ನ ಹಿಂದೆ ನಿಲ್ಲುವ ಅಭೂತಪೂರ್ವ(?) ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ.

**.... ವಾಜಪೇಯಿಯವರ ಸಮ್ಮಿಶ್ರ ಸರ್ಕಾರದ ಮಿತ್ರಪಕ್ಷಗಳು ವಿಭಿನ್ನ ಕಳಿಯುಮುಗಳಾಗಿದ್ದು, ಅವು ಒಂದಗೂಡಿದ್ದು ಕೇವಲ ಅಧಿಕಾರದ ಆಸೆಯಿಂದಲೇ ಹೊರತು ಯಾವುದೇ ತತ್ವ ಯಾ ಸಿದ್ಧಾಂತಗಳ ನೆಲೆಯಿಂದ ಅಲ್ಲ.** ಹಾಗಾಗಿ ಉಗ್ರ ಕೋಮುವಾದಿ, ತಥಾಕಥಿತ ಜಾತ್ಯಾತೀತವಾದಿ, ಮಾಜಿ ಸಮಾಜವಾದಿ, ತೀವ್ರ ಬಂಡವಾಳವಾದಿ - ಹೀಗೆ ನಾನಾ ಬಣ್ಣಗಳು ಎನ್‌ಡಿಎ ಕ್ಯಾನ್‌ವಾಸಿನಲ್ಲಿ ಸಮ್ಮಿಳಿತಗೊಂಡವು. ತೀವ್ರವಾದ ಅಭಿಪ್ರಾಯ ಬೇಧಗಳು, ಆಸಕ್ತಿ ಬೇಧಗಳು ಇದ್ದರೂ ಇವುಗಳನ್ನೆಲ್ಲ ಭದ್ರವಾಗಿ ಬೆಸೆದಿರುವ ಸಿಮೆಂಟಿನ ಗಾರೆ ಅಧಿಕಾರದ ಮೋಹವೊಂದೇ.

.... ಈಗ ದೇಶದ ರಕ್ಷಣಾ ವ್ಯವಸ್ಥೆಯೇ ಬಿಜೆಪಿ-ಸಮತಾ ನಾಯಕರ ದೆಸೆಯಿಂದ ಅಪಾಯಕ್ಕೀಡಾಗಿ, ವಿರೋಧ ಪಕ್ಷಗಳ ಟೀಕೆಗೆ ಗುರಿಯಾಗಿರುವಾಗ ಕರುಣಾನಿಧಿಯವರು ಪ್ರಧಾನಿ ಮತ್ತು ಗೃಹಸಚಿವರ ಮೇಲಿನ ವಿಶ್ವಾಸವನ್ನು ಏರು ಸ್ವರದಿಂದ ಪುನರುಚ್ಚರಿಸಿದ್ದಾರೆ.

***..... ಹೀಗಾಗಿ, 'ತೇಲಿಸೋ ರಂಗ, ಇಲ್ಲ ಮುಳುಗಿಸೋ'ಎಂಬುದು ಎನ್‌ಡಿಎ ಮಿತ್ರಪಕ್ಷಗಳ ಇಂದಿನ ವೃಂದಗಾನವಾಗಿದೆ.***

ಗು: ನನಗೆ ಪರಿವೆಯಿಲ್ಲ.
ತೆ: ಓಕೆ. ಓಕೆ.
ಗು: ಆತನೊಬ್ಬ ಸಣ್ಣ ವ್ಯವಹಾರಸ್ಥ
ಗು: ರಕ್ಷಣಾ ಕಾರ್ಯದರ್ಶಿಗೆ ಹಣ ಬೇಕಾದಾಗ ನಾನೇ ನನ್ನ ಕೈಯಿಂದಲೇ ಕೊಡ್ತೇನೆ...
ತೆ: ಓಕೆ
ಗು: ಹೂಂ.
ತೆ: ಅಷ್ಟೇ
ಗು: ಮತ್ತು ಈ ಪಾರ್ಟಿ ಜನ... ಅವರಿಗೆ ಎರಡು ಪರ್ಸೆಂಟ್ ಎಂದು ಲೆಕ್ಕ.
ತೆ: ಹಾಂ.
ಗು: 40 ಕೋಟಿಯ ಆರ್ಡರಿನಲ್ಲಿ ವರ್ಷಕ್ಕೆ ಒಂದು ಕೋಟಿ ಎಂದಿಟ್ಟುಕೊಳ್ಳಿ.
ತೆ: ಹೂಂ.
ಗು: ಒಂದೆರೆಡು ಕೋಟಿಗೆ.
ತೆ: ಅದೂ..... ಅದೂ ಮಂಜೂರು. ಒಂದು ಕೋಟಿ?
ಗು: ಅಲ್ಲ, ಅಲ್ಲ. ಕೇಳಿ. ಆರ್ಡರ್ ನಮ್ಮ ಬಳಿ ಇದ್ದಾಗ, ಎಲ್.ಸಿ. ಇದ್ದಾಗ. ನಮಗೆ ತೆತ್ತಂತೆಯೇ. 30 ಪರ್ಸೆಂಟ್ ಪಾವತಿ ಮಾಡ್ತಾರೆ. ಇಲ್ಲವೇ? 20 ಪರ್ಸೆಂಟ್. ನಿಮ್ಮ ಹಣ ಬಂದಾಗ ಅವರಿಗೆ ಪಾವತಿ. ಯಾವ ಅಕೌಂಟ್ ಅವರು ಹೇಳ್ತಾರೆ. ಕಳಿಸಿಬಿಟ್ಟರೆ ಮುಗೀತು.
ತೆ: ಅಷ್ಟೇ.
'........
ತೆ: ಸರ್, ರಕ್ಷಣಾ ಮಂತ್ರಿ, ಅವರು ಹಣ ತಗೊಳ್ಳಲ್ವೇ?
ಗು: ಯಾರು?
ತೆ: ರಕ್ಷಣಾ ಮಂತ್ರಿ
ಗು: ಆಗಲೇ ಜಯಾ ಜೇಟ್ಲಿಯೊಂದಿಗೆ ವ್ಯವಸ್ಥೆ ಮಾಡಿಕೊಂಡಿದ್ದೇವೆ.
ತೆ: ವ್ಯವಸ್ಥೆ?
ಗು; ಸಮತಾ ಪಾರ್ಟಿ ಪ್ರಧಾನ ಕಾರ್ಯದರ್ಶಿಯೊಂದಿಗೆ.



ಬಂಗಾರು ಲಕ್ಷ್ಮಣ್

ತೆ: ಓಕೆ
ಗು: ರಕ್ಷಣಾ ಮಂತ್ರಿ ಒಂದೋ, ಎರಡೋ ಪರ್ಸೆಂಟ್. ಜಯಾ ಜೇಟ್ಲಿಯೊಂದಿಗೆ ಇತ್ಯರ್ಥ ಮಾಡಿಕೊಳ್ಳುತ್ತೇವೆ. ಆತನಿಗೆ(ರಕ್ಷಣಾ ಮಂತ್ರಿ) ಕೊಡುವುದು, ಕೊಡದಿರುವುದು ಅವರಿಗೆ ಬಿಟ್ಟದ್ದು. ನಮ್ ಫೈಲಿಗೆ ಸಹಿ ಬೀಳುತ್ತದೆ. ಆಕೆ ಹಣ ಪಡೆಯುತ್ತಾಳೆ.
ತೆ: ಅಷ್ಟೆ.

## "ನೀವು ಡಾಲರುಗಳಲ್ಲಿ ಕೊಡಬಹುದು"

***ಬಿಜೆಪಿ ಅಧ್ಯಕ್ಷ ಬಂಗಾರು ಲಕ್ಷ್ಮಣ ಕಂಪನಿಗಳಿಂದ ಕಿಕ್‌ಬ್ಯಾಕ್ (ಅಂದರೆ ಲಂಚ)ಗಳನ್ನು ಗಿಟ್ಟಿಸುವ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡಿದ್ದಾರೆ ಎಂದು ತಿಳಿದ ತೆಹಲ್ಕಾ ತಂಡ ಅವರನ್ನು ಭೇಟಿ ಮಾಡುವ ಅಗ್ಗದ ವಿಧಾನ ಹುಡುಕುತ್ತಿದ್ದರು. ತಾನು ಆರ್.ಎಸ್.ಎಸ್. ಟ್ರಸ್ಟಿ ಎನ್ನುವ ಆರ್.ಕೆ.ಗುಪ್ತಾ ಈ ಭೇಟಿ ಮಾಡಿಸಲು 25 ಲಕ್ಷ ರೂ. ಕೇಳಿದರೆ, ಸಾಹ್ನಿ ಎಂಬ ಮಧ್ಯವರ್ತಿ 10 ಲಕ್ಷ ರೂ. ಕೇಳಿದ. ಕೊನೆಗೆ ಪಂತ್ ಎಂಬಾತ ಇವರನ್ನು ಬಿಜೆಪಿ ಸಂಸತ್ ಸದಸ್ಯ, ಹಿಂದೆ ದಿಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಾಹಿಬ್ ಸಿಂಗ್ ವರ್ಮಾ ಮೂಲಕ ಒಂದು ಲಕ್ಷ ರೂ. ಗೆ ಭೇಟಿ ಮಾಡಿಸಲು ಒಪ್ಪಿದ. ಆ ಸಂದರ್ಭದಲ್ಲಿನ ಸಂಭಾಷಣೆಗಳ ಒಂದು*** ತುಣುಕು:

ತೆಹೆಲ್ಕಾ: ನಮ್ಮದು ಇನ್ನೂ ಹಲವು ಇವೆ. ವಿದ್ಯುತ್ ಪ್ರಾಜೆಕ್ಟ್‌ಗಳು, ಒಮ್ಮೆ ಬೈನಾಕುಲರ್‌ಗಳಿಂದ ಆರಂಭಿಸಿದೆವು ಎಂದರೆ. ಆತ ಹಲವು ಬಾರಿ ಕೇಳಿದ - ನಾನು ಬಂಗಾರು ಲಕ್ಷ್ಮಣರಿಗೆ ಪರಿಚಯಿಸುತ್ತೇನೆ ಎಂದು. ನಾನೆಂದೆ 'ನಾನು ಒಬ್ಬ ಭಾರತೀಯ, ನನಗೆ ಹಿಂದಿ ಸರಿಯಾಗಿ ಬರುವುದಿಲ್ಲ'....... 'ನಾನು ನೇರವಾಗಿ ಅವರನ್ನು ಭೇಟಿ ಮಾಡಬಲ್ಲೆ. ನನಗೆ ಕಂಪನಿಯ ಕ್ರೆಡಿಬಿಲಿಟಿ(ವಿಶ್ವಾಸಾರ್ಹತೆ) ಇದೆ. ನಮ್ಮ ಕಂಪನಿ ದೊಡ್ಡದು.... ಟಾಟಾಕ್ಕಿಂತಲೂ. ನೋಡಪ್ಪ, ನಾನು ನೇರವಾಗಿ ಬಂಗಾರು ಲಕ್ಷ್ಮಣರನ್ನು ಭೇಟಿ ಮಾಡಬಲ್ಲೆ ಎಂದೆ.
ಬಂಗಾರು ಲಕ್ಷ್ಮಣ್: ಹೌದಾ?
ತೆ: ಅಲ್ಲವೇ? ನನಗೆ ನಿಮ್ಮಿಂದ ಯಾವುದಾದರೂ ಕಮಿಂಟ್‌ಮೆಂಟ್ ಬೇಕೇ?
ಬಂ: ಸರಿಯಪ್ಪಾ, ಭೇಟಿ ಏರ್ಪಟ್ಟಿತು. ನಾನು ನಿಮ್ಮ....
ತೆ: ಸರಿ.... ಸತ್ಯಮೂರ್ತಿ....
ಬಂ.: ನೇರವಾಗಿ ನನ್ನನ್ನು ಸಂಪರ್ಕಿಸಿ
ತೆ: ಹೂಂ.
ಬಂ: ನೇರವಾಗಿ ಮಾತಾಡಿ
ಬಂ: ಮೊದಲು ಆತ(ಸತ್ಯಮೂರ್ತಿ-ಬಂಗಾರು ಲಕ್ಷ್ಮಣರ ಆಪ್ತ ಕಾರ್ಯದರ್ಶಿ) ಅಪಾಯಿಂಟ್‌ಮೆಂಟ್ ನಿಗದಿ ಮಾಡುತ್ತಾರೆ.
ತೆ: ಆಯ್ತು.
ತೆ: ಸರ್ ನಾನು ನಿಮಗೆ ಒಂದು ಲಕ್ಷ ರೂಪಾಯಿ ಕೊಡಲೇ.... ಸಾಂಕೇತಿಕವಾಗಿ... ನನ್ನ....
ತೆ: ಸರ್ ನನ್ನ ಬಾಸ್ ಇಲ್ಲಿದ್ದಾರೆ. ಒಬೆರಾಯ್(ಹೋಟೆಲ್) ಎಕ್ಸಿಕ್ಯುಟಿವ್ ಕೋಣೆಯಲ್ಲಿ.
ಬಂ: ಹೌದಾ.
ತೆ: ಅವರೂ ನಿಮ್ಮನ್ನು ಭೇಟಿ ಮಾಡಬಯಸುತ್ತಾರೆ.
ಬಂ: ಹೌದಾ.
ತೆ: ಹಾಗಿದ್ದರೆ ನಾಳೆ ಅಪಾಯಿಂಟ್‌ಮೆಂಟ್ ವ್ಯವಸ್ಥೆ ಮಾಡುತ್ತೀರಾ?
ಬಂ; ನಾಳೆ?
ತೆ: ಹೌದು, ನಾಳೆ..... ನಿಮ್ಮನ್ನು ಭೇಟಿ ಮಾಡುತ್ತಾರೆ... ಈ ವಿಷಯದಲ್ಲಿ ನಾನು ಶ್ರೀಯುತ ಸತ್ಯರ ಬಳಿ ನಾನು ಹೇಳಿದ್ದನ್ನು ಮಾಡುತ್ತಾರೆ.
ಬಂ: ಹೂಂ.
ತೆ: ಪಕ್ಷದ ನಿಧಿಗೆ
ತೆ: ನನ್ನ ಬಳಿ ಐದು ಲಕ್ಷ ರೂಪಾಯಿಗಳಿವೆ.
ಬಂ: ಹೂಂ.
ತೆ: ಇವತ್ತು ನಾನು ಒಂದು ಲಕ್ಷ ರೂಪಾಯಿ ಕೊಡ್ತೇನೆ. ಕೇವಲ ಆರಂಭಕ್ಕಷ್ಟೆ. ಹೊಸ ವರ್ಷದ ಕೊಡುಗೆ.
ಬಂ: ಹೂಂ ಹೂಂ....
ತೆ: ಓಕೆ? ಆದರೆ... ಆದರೆ... ಆದರೆ.... ನಿಜವಾಗಿಹೇಳಿ. ಶ್ರೀಯುತ ಆರ್.ಕೆ.ಗುಪ್ತಾ ಈ ಭೇಟಿ ಏರ್ಪಡಿಸಿದೆ ಎಂದು ನನಗೆ ಹೇಳಿದರು. ಹೊರಗೆ....
ಬಂ: ನಿಮ್ಮಿಬ್ಬರ ನಡುವೆ ಏನು ನಡೆದಿದೆಯೋ ನನಗೆ ಗೊತ್ತಿಲ್ಲ. ಅವರು ಕೇವಲ... ಅವರು ಪ್ರಸ್ತಾಪಿಸಿದ್ದರು...
ತೆ: ಓ.ಕೆ.
ತೆ: ಸರ್ ಇದೊಂದು ಸಣ್ಣ ಕೊಡುಗೆ... ಸಣ್ಣ ಕೊಡುಗೆ.


ಆರ್.ಕೆ.ಜೈನ್

ಬಂ: ಓಹ್.... ಇಲ್ಲ... ಇಲ್ಲ
ತೆ: ಹೊಸ ವರ್ಷದಪಾರ್ಟಿಗೆ ಒಂದು ಸಣ್ಣ ಕೊಡುಗೆ, ಸರಿಯೇ?
(ಬಂಗಾರು ಲಕ್ಷ್ಮಣ್ ತಮ್ಮ ಮೇಜಿನ ಡ್ರಾವರನ್ನು ತೆರೆಯುತ್ತಾರೆ. ತೆಹಲ್ಕಾ ಕೊಟ್ಟ ಹಣವನ್ನು ಅದರಲ್ಲಿಟ್ಟು ಬಿಡುತ್ತಾರೆ)
ತೆ: ಹೊಸ ವರ್ಷದ ಪಾರ್ಟಿ ಫಂಡ್, ಹಾಂ? ಒಂದು ಲಕ್ಷ ರೂಪಾಯಿ,ಹಾಂ?
ತೆ: ಮತ್ತು ಇನ್ನೂ... ರೂಪಾಯಿ
ಬಂ: ಯಾವಾಗ ನೀವು....?
ತೆ: ನಾಳೆ. ರೂಪಾಯಿಯಲ್ಲೋ, ಡಾಲರಿನಲ್ಲೋ?
ಬಂ: ಡಾಲರುಗಳಲ್ಲಿ. ನೀವು ಡಾಲರುಗಳಲ್ಲಿ ಕೊಡಬಹುದು.
ತೆ: ಓ.ಕೆ. ನಿಮಗೆ ಡಾಲರುಗಳಲ್ಲಿ ಕೊಡಬಹುದು. ಸರ್,ನಿಮ್ಮ ಆಶೀರ್ವಾದ ನಮಗೆ ಬೇಕು.

## "ಸಮತಾಗೆ ಒಂದು ಕೋಟಿ ಕೊಟ್ಟರು"

***ಆರ್.ಕೆ.ಜೈನ್ ಮಿಲಿಟರಿ ವ್ಯವಹಾರಗಳ ಮಧ್ಯವರ್ತಿ. ಸಮತಾ ಪಾರ್ಟಿಯ ಖಜಾಂಚಿ ಕೂಡಾ. ಈತ ಜಾರ್ಜ್ ಫರ್ನಾಂಡೀಸ್‌ರ 'ಬ್ರೀಫ್ ಕೇಸ್ ಮನುಷ್ಯ' ಎನಿಸಿ ಕೊಂಡಿದ್ದಾನೆಂದು ತಿಳಿದ ತೆಹಲ್ಕಾ ತಂಡ ನೇರವಾಗಿ ಆತನನ್ನು ಕಾಣಲು ನಿರ್ಧರಿಸಿತು. ಆತನೊಡನೆ ಸಂಭಾಷಣೆಯ ಕೆಲವು ತುಣುಕುಗಳು***

ಆರ್.ಕೆ.ಜೈನ್: ನಾನು ರಾಷ್ಟ್ರೀಯ ಖಜಾಂಚಿ. ಕಾರ್ಡ್ ಕೊಟ್ಟಿದ್ದೇನಲ್ಲ. ಖಜಾಂಚಿ ಬಾಸ್‌ಗೆ ಹತ್ತಿರದವ. ಏಕೆಂದರೆ ಹಣದ ವಿಷಯದಲ್ಲಿ ಆತನೊಟ್ಟಿಗೆ ಮಾತನಾಡಲೇ ಬೇಕಲ್ಲ. ಹತ್ತು ಮಂದಿ ಇತರರೊಂದಿಗೆ ಮಾತನಾಡಿದರೂ, ಖಜಾಂಚಿಯೊಂದಿಗೆ ಮಾತಾಡಲೇಬೇಕಲ್ಲ.
ತೆಹಲ್ಕಾ: ಬಿಲ್‌ಕುಲ್, ಸಹಜವಾಗಿ.



ಜೈ: ಪಕ್ಷಕ್ಕೆ ಹಣ ಬರುತ್ತಿದೆ ಎಂದು ಖಜಾಂಚಿಯಿಂದ ಮರೆಮಾಚಿಲ್ಲ ಎಂಬುದನ್ನು ಗಮನಿಸಿ. ನಾನು ಚೆಕ್ ಪಾಸ್ ಮಾಡಿ ಸಹಿ ಮಾಡಿದಾಗಲೇ ಹಣ ಪಡೆಯಲು ಸಾಧ್ಯ. ನಾನೇಕೆ ಸುಳ್ಳು ಹೇಳಲಿ? ನಾನು ನಿಮಗೆ ಕೆಲಸ ಮಾಡಿಕೊಟ್ಟದ್ದಕ್ಕೇ ಹಣ ಪಡೆಯುತ್ತೇನೆ.
(ಜೈನ್ 'ಪಕ್ಷಕ್ಕೆ ಹಣಬೇಕಿತ್ತು. ನಾವು ಆಗಷ್ಟೇ ಅಧಿಕಾರಕ್ಕೆ ಬಂದಿದ್ದೆವು. ಹಣ ಇರಲಿಲ್ಲ" ಎಂದು ಪುನರುಚ್ಚರಿಸುತ್ತಾ ಹಲವು ರಕ್ಷಣಾ ವ್ಯವಹಾರಗಳಲ್ಲಿ ತನ್ನ ಪಾತ್ರವನ್ನು ಹೇಳಿಕೊಳ್ಳುತ್ತಾನೆ. 250 ಆರ್ಮರ್ಡ್ ರಿಕವರಿ ವೆಹಿಕಲ್ ಅಂದರೆ ಸಶಸ್ತ್ರ ವಾಹನಗಳನ್ನು ಸ್ಲೋವಿಕಿಯಾದ ಕಂಪನಿಗೆ ಕೊಡಿಸಿದ ರೀತಿ, ಅದಕ್ಕಾಗಿ ತಮ್ಮ ಕೊಟೇಶನ್ ಕೊಟ್ಟಿದ್ದ ಇನ್ನೊಂದು ಕಂಪನಿಯ ಕೊಟೇಶನನ್ನು ಅನರ್ಹಗೊಳಿಸಿದ್ದು, ಇದರಲ್ಲಿ ಸಮತಾಪಾರ್ಟಿಗೆ ಒಂದು ಕೋಟಿ ಸಿಕ್ಕದ್ದು ಇತ್ಯಾದಿಗಳ ಬಗ್ಗೆ, ಏರ್‌ಜೆಟ್ ಟ್ರೈನರ್ ವ್ಯವಹಾರದ ಬಗ್ಗೆ ಹೇಳಿ ಕೊಳ್ಳುತ್ತಾನೆ. ನಂತರದ ಸಂಭಾಷಣೆಗಳು...)
ತೆ: ನೀವು ಸಾಮಾನ್ಯವಾಗಿ ಜ್ಯುರಿಚ್‌ನಲ್ಲಿ ಹಣ ಪಡೆಯುತ್ತೀರೋ ಅಥವಾ ಬೇರೆ ಯಾವುದೇ ಸ್ಥಳದಿಂದಲೋ?
ಜೈ: ಇಲ್ಲ... ಸಾಮಾನ್ಯವಾಗಿ ಇಂತಹ

ಮುಂದಿನ ಪುಟಕ್ಕೆ

### ಇಂಡಿಯನ್ ಎಕ್ಸ್‌ಪ್ರಸ್

ಜಗತ್ತಿನಲ್ಲಿ ಭೂಸೈನ್ಯದಲ್ಲಿ 5ನೇ ಸ್ಥಾನ ಹೊಂದಿರುವ, ವಾಯು ಸೈನ್ಯದಲ್ಲಿ 4ನೇ ಸ್ಥಾನ ಹೊಂದಿರುವ, ಜನ ಸೈನ್ಯದಲ್ಲೂ ಪ್ರಮುಖ ಸ್ಥಾನ ಹೊಂದಿರುವ ಭಾರತದ ರಕ್ಷಣಾ ವ್ಯವಸ್ಥೆಯ ಮಾಹಿತಿ 2 ಲಕ್ಷ ರೂಪಾಯಿಗಳಿಗೆ ಬಿಕರಿಯೇ? 70,000 ಕೋಟಿ ರೂ. ರಕ್ಷಣಾ ಬಜೆಟ್ ಹೊಂದಿರುವ ಭಾರತ ದೇಶದ ರಕ್ಷಣಾ ಮಂತ್ರಿಯ ಮನೆಗೆ ಅಸ್ತಿತ್ವದಲ್ಲೇ ಇರದ ಮಿಲಿಟರಿ ಕಂಪನಿಯ ದಲ್ಲಾಳಿಗಳಿಗೆ ಪ್ರವೇಶವೆಂದರೆ.....

### ಟೈಂಸ್ ಆಫ್ ಇಂಡಿಯಾ

ರಕ್ಷಣಾ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರವು ಇಡೀ ರಾಜಕೀಯ ಭ್ರಷ್ಟಾಚಾರ ಸಂಸ್ಕೃತಿಯ ಭಾಗವಾಗಿದೆ.

### ಡೆಕ್ಕನ್ ಹೆರಾಲ್ಡ್

ಇಸ್ರೇಲಿನಿಂದ ಕ್ಷಿಪಣಿ ಖರೀದಿಸುವ ವಿಚಾರದಲ್ಲಿ ರಕ್ಷಣಾ ಸಚಿವಾಲಯದ ವೈಜ್ಞಾನಿಕ ಸಲಹೆಗಾರರಾದ ಎ.ಪಿ.ಜೆ.ಅಬ್ದುಲ್ ಕಲಂ ಅವರ ಸಲಹೆಯನ್ನು ರಕ್ಷಣಾ ಮಂತ್ರಿ ಜಾರ್ಜ್‌ಫರ್ನಾಂಡಿಸ್ ತಳ್ಳಿ ಹಾಕಿದ್ದಾರೆ... ಖರೀದಿಸಿದ್ದಾರೆ.
ಬಿಜೆಪಿ ಅಧ್ಯಕ್ಷರಾಗಿದ್ದ ಬಂಗಾರು ಲಕ್ಷ್ಮಣ್ ಪಕ್ಷದ ನಿಧಿಗಾಗಿ ಹಣ ಪಡೆದೆ ಎಂದು ಹೇಳುತ್ತಾರೆ. ರಕ್ಷಣಾ ಖಾತೆಯ ಮಾಲುಗಳ ಖರೀದಿಗಾಗಿ ನಿಧಿ (ಲಂಚ) ಪಡೆಯುವ ಹಕ್ಕು ಪಕ್ಷಕ್ಕೆ ಇಲ್ಲ.

### ದಿ ಹಿಂದು

ಈ ಅವಮಾನದ ಭಾರವನ್ನು ಹೊತ್ತು ಹೆಚ್ಚುಕಾಲ ಬದುಕಲು ಎನ್‌ಡಿಎ ಸರ್ಕಾರಕ್ಕೆ ಸಾಧ್ಯವಿಲ್ಲ.

## ಇಗೋ! ಆರೋಪ ಒಪ್ಪಿಕೊಂಡ ಆರ್.ಎಸ್.ಎಸ್. ನಿರಾಕರಿಸುತ್ತಿರುವ ಬಿಜೆಪಿ

'ಆರೋಪದಲ್ಲಿ ಸತ್ಯಾಂಶ ವಿದ್ದಂತಿದೆ' ಎಂದವರು ಬೇರಾರೂ ಅಲ್ಲ. ಸ್ವತಃ ಆರ್.ಎಸ್.ಎಸ್. ತೆಹಲ್ಕಾ ಡಾಟ್ ಕಾಂ ಬಹಿರಂಗ ಪಡಿಸಿರುವುದರಲ್ಲಿ ಮೇಲ್ನೋಟಕ್ಕೆ ಸತ್ಯವಿರುವಂತೆ ಕಾಣುತ್ತಿದೆ ಎನ್ನುತ್ತಾರೆ ರಾಷ್ಟ್ರೀಯ ಮಹಾಮಂಡಳಿ ಸಭೆ ಮುಗಿಸಿ ಹೊರಬಂದ ವಕ್ತಾರ ಎಂ.ಜಿ. ವೈದ್ಯ.

ಏನೀ ನಿಲುವು, ಯಾಕೀ ಒಲವು ಎನ್ನಬೇಡಿ. ಆರ್.ಎಸ್.ಎಸ್.ನ್ನು ಬಲ್ಲವರಿಗೆ ಈ ಗುಲ್ಲುಗಾರರ ಗುಟ್ಟು ತಿಳಿದಿದ್ದೆ. ಮನದಲ್ಲಿ ಏನು ಲೆಕ್ಕಾಚಾರವೋ ಬಹಿರಂಗವಾಗಬೇಕಷ್ಟೇ. ಅಂತೂ ಜನಮನದಲ್ಲಿ ಎದ್ದ ಅನುಮಾನದ ಅಲೆಗಳು ಆರ್.ಎಸ್.ಎಸ್. ನ ಅಂತರ್ಯವನ್ನು ಹೊಕ್ಕಿವೆ. ಜಗದುದ್ದಕ್ಕೂ ಸತ್ಯ, ಪ್ರಾಮಾಣಿಕತೆ, ದೇಶಪ್ರೇಮಿಗಳು ಎಂದು ಆಣಿಮುತ್ತು ಉದುರಿಸಿದ ಪರಿವಾರ ಕನಿಷ್ಠ 'ಮಾನ' ಉಳಿಸಿಕೊಳ್ಳಲಾದರೂ ಹೀಗೆ ಹೇಳಬೇಕಾಗಿ ಬಂದಿದೆ ಎಂಬುದೇ ಪರಿಸ್ಥಿತಿಯ ವಿಶಿಷ್ಟತೆ.

ಭಾರತವನ್ನು ಸಂಕಷ್ಟಕ್ಕೆ ನೂಕುವ ಷಡ್ಯಂತ್ರದಿಂದ ಜಾಗೃತವಾಗಿರಿ.
ಅಂದು ನಗರವಾಲಾ, ಬೋಫೋರ್ಸ್, ಯೂರಿಯಾ,
ಜೆ.ಎಂ.ಎಂ. ಹಗರಣಗಳ ಸರದಾರ : ಕಾಂಗ್ರೆಸ್
ಇಂದು ಹಗರಣ ಮುಕ್ತ, ಸಮರ್ಥ, ಸುಭದ್ರ ಸರ್ಕಾರವನ್ನು ಪತನಗೊಳಿಸುವ
ಒತ್ತೂರಿಯ ನೇತಾರ ಕಾಂಗ್ರೆಸ್.
ಎಚ್ಚರ ಎಚ್ಚರ
ದೇಶ ವಿರೋಧಿ ಶಕ್ತಿಗಳ ಷಡ್ಯಂತ್ರ ಬಯಲಾಗಲಿ ಉನ್ನತ ಮಟ್ಟದ ತನಿಖೆಯಾಗಲಿ
ಭಾರತೀಯ ಜನತಾ ಪಾರ್ಟಿ

ಇದು ಬೆಂಗಳೂರಿನ ಗೋಡೆಗೋಡೆಗಳಲ್ಲಿ ರಾರಾಜಿಸುವ ಪೋಸ್ಟರ್. ಹಾಕಿದವರು ಬಿಜೆಪಿಯೇ. ಶಹಬ್ಬಾಷ್! ಉನ್ನತಮಟ್ಟದ ತನಿಖೆಗೆ ತಾನೇ ಕೇಳಿಕೊಳ್ಳುವ ಹತಾಶ ಸ್ಥಿತಿ, ಅದಕ್ಕೂ ಹೆಚ್ಚಿನದೆಂದರೆ ನಾಚಿಯುಲ್ಲದ ಭಂಡತನ ಬೇರೆ.... ಹೌದು ಈ ಪೋಸ್ಟರ್ ಹಾರಿಸಿಕೊಟ್ಟದ್ದು ದೇಶಭಕ್ತ ಗುಪ್ತಾನೋ ಜನರಲ್ ಚೌಧರಿಯೋ....

ವ್ಯವಹಾರಗಳಲ್ಲಿ ಬೇರೆಯೇ ವ್ಯಕ್ತಿಯುನ್ನು ಬಳಸುತ್ತೇನೆ.... ಮೂರನೇ ವ್ಯಕ್ತಿ.
ತೆ: ಓ.ಕೆ.
ಜೈ: ಅವರು ಬರುತ್ತಾರೆ. ಅವರ ಅಕೌಂಟಿಗೆ ನಾನು ಕೊಡುವ ಹಣದ ಗ್ಯಾರಂಟಿ ಕೊಡುತ್ತಾರೆ.
ತೆ: ವಿದೇಶದಲ್ಲಿ?
ಜೈ: ಇಲ್ಲೇ ನನಗೆ ಗ್ಯಾರಂಟಿಯಿದೆ.
ತೆ: ಬ್ಯಾಂಕ್ ಗ್ಯಾರಂಟಿ
ಜೆ: ಇಲ್ಲ, ಬ್ಯಾಂಕ್ ಗ್ಯಾರಂಟಿಯಲ್ಲ.
ತೆ: ಮಾತಿನ ಗ್ಯಾರಂಟಿ
ಜೈ: ಮಾತಿನ ಗ್ಯಾರಂಟಿ... ಇಬ್ಬಿಬ್ಬ ಗೆಳೆಯರೊಂದಿಗೆ....
ಜೈ: ಹಣ ವರ್ಗಾವಣೆಯಾದ ಕೂಡಲೇ ಸ್ಲಿಪ್ ತೋರಿಸುತ್ತೇವೆ.
ತೆ: ಆಗ ಅದಕ್ಕೆ ಸರಿಯಾದ ಮೊತ್ತವನ್ನು ರೂಪಾಯಿಗಳಲ್ಲಿ ಕೊಡುತ್ತಾರೆ.
ಜೈ: ಕೊಡುತ್ತಾರೆ.
ತೆ: ಓಕೆ
ಜೈ: ಹಾಗೆ ಅವರ ವ್ಯವಹಾರ. ಕೆಲವೊಮ್ಮೆ ವಿದೇಶದಲ್ಲಿ ನನ್ನ ಸೋದರನಿಗೆ ಹಣ ಬೇಕಾಗುತ್ತದೆ. ಆಗ ಅದನ್ನು ಆತನ ಖಾತೆಗೆ ತಳ್ಳುತ್ತೇನೆ.
ತೆ: ಓಕೆ. ನೀವು ಮಾಡಿದ ಅತಿ ದೊಡ್ಡ ವ್ಯವಹಾರ ಯಾವುದು?
ಜೈ: ಅದು 600 ಕೋಟಿ ರೂ.ಗಳದ್ದು. ನನಗೆ ಮೂರು ಪರ್ಸೆಂಟ್
ತೆ: ಅಂದರೆ ಎಷ್ಟು ಬೆಲೆ?
ಜೈ: ಹೆಚ್ಚೇನಿಲ್ಲ
ತೆ: ಅದು ಸಾಕಷ್ಟು ದೊಡ್ಡ ಮೊತ್ತವೇ
ಜೈ: ನೋಡಿ, ಇದು....
ತೆ: (ಮಧ್ಯದಲ್ಲೇ ತಡೆದು) ಅರ್ಧ ಮಿಲಿಯ ಡಾಲರು
ಜೈ: ಜಯಾ ಜೇಟ್ಲೆ ಎರಡನೇ ಹೆಂಡತಿ. ಆದರೆ ಅಧಿಕೃತ ಮದುವೆಯಲ್ಲ. ಆಕೆಪಾರ್ಟಿ ಅಧ್ಯಕ್ಷೆ ಕೂಡಾ. ಹೀಗೆ ಇಬ್ಬರು ರಕ್ಷಣಾ ಮಂತ್ರಿಗಳಿದ್ದಾರೆ. ಒಬ್ಬರು ಜಾರ್ಜ್ ಫರ್ನಾಂಡೀಸ್, ಇನ್ನೊಬ್ಬರು ಜಯಾ ಜೇಟ್ಲಿ.
ಇಬ್ಬರೂ ನಗುತ್ತಾರೆ.

**"ಶ್ರೀನಿವಾಸಪ್ರಸಾದ್‌ಗೆ ಕಳಿಸಿ"**

ಗುಣಮಟ್ಟ ಭರವಸೆ ವಿಭಾಗದ ಅಡಿಶನಲ್ ಡೈರೆಕ್ಟರ್ ಜನರಲ್ ಮೇಜರ್ ಜನರಲ್ ಎಸ್.ಪಿ.ಮುರುಗೈ(ನಿವೃತ್ತ) ಜಯಾ ಜೇಟ್ಲಿಗೆ ತೆಹಲ್ಕಾ ತಂಡವನ್ನು ಪರಿಚಯಿಸಿದರು. ಜತೆಗೆ ಕಾನ್ಪುರದ ಉದ್ಯಮಿ ಸುರೇಂದ್ರ ಸುರೇಖಾ ಇದ್ದರು. ಆತ ರಕ್ಷಣಾ ಇಲಾಖೆಯೊಂದಿಗೆ ಬಲವಾದ ಸಂಪರ್ಕವಿರುವ ವ್ಯಕ್ತಿ. ಜಯಾ ಜೇಟ್ಲಿಗೆ ನಿಕಟವಾದ ವ್ಯಕ್ತಿ.
ಈ ದೃಶ್ಯ ಆರಂಭವಾಗುವುದು ಸುರೇಂದ್ರ ಸುರೇಖಾ ಈ ಭೇಟಿಗೆ 2 ಲಕ್ಷ ರೂ. ಸಾಂಕೇತಿಕವಾಗಿ ಹಣವನ್ನು ತಂದಿದ್ದೀರಾ ಎಂದು ಕೇಳಿ ಪಡೆಯುವುದರೊಂದಿಗೆ
ಸುರೇಂದ್ರ ಸುರೇಖಾ: ಪ್ಯಾಕೆಟ್ ಎಲ್ಲಿದೆ?
ತೆಹಲ್ಕಾ: ಪ್ಯಾಕೆಟ್.... ಹಣ ಸೂಟ್‌ಕೇಸಿನಲ್ಲಿದೆ.
ಸು: ಅದನ್ನು ಈ ಕೈಯಲ್ಲಿ ಹಿಡಿಯಿರಿ. ಅದನ್ನು ನನಗೆ ಕೊಡಿ.... ಏಕೆಂದರೆ ಈ ವಿಷಯ ನಾನು ನೋಡಿಕೊಳ್ಳುವುದು.
ತೆ: ಓಕೆ ಓಕೆ
(ಸುರೇಂದ್ರ ಮೇಲೆ ನೋಡಿ ಯಾರನ್ನೋ


ಜಯಾ ಜೆಟ್ಲಿ

ಕರೆಯುತ್ತಾರೆ. ಬಹುಶಃ ಬ್ರೀಫ್ ಕೇಸ್ ಒಯ್ಯಲು)
ತೆ: ಇಲ್ಲ, ನಾನೇ ತಗಿತೇನೆ, ನಾನೇ ತೆಗಿತೇನೆ. ಒಂದು ಲಕೋಟೆ ತಗೊಳ್ಳಿ.
ಸು: ಓಕೆ... ನೀವದನ್ನು ನನಗೆ ಕೊಡಿ... ಅದನ್ನು ಕೊಡಿ..
(ತೆಹಲ್ಕಾ ಬ್ರೀಫ್ ಕೇಸಿನಿಂದ ನೋಟುಗಳನ್ನು ತೆಗೆದು ಒಂದು ನ್ಯೂಸ್‌ಪೇಪರಿನಲ್ಲಿ ಸುತ್ತಲಾರಂಭಿಸುತ್ತಾರೆ. ಬಾಗಿಕೊಂಡಿದ್ದ ಸುರೇಂದ್ರ ಈಗ ಕಾಣಿಸುತ್ತಾರೆ.)
ಸು:ಕಾಫಿ, ಟೀ ಏನಾದರೂ?
ತೆ: ಬೇಡ, ಪರವಾಗಿಲ್ಲ.(ಸುತ್ತುವುದನ್ನು ಮುಂದುವರೆಸುತ್ತಾರೆ)
ಸು: ನಮ್ಮ ನಿರ್ದೇಶಕರು.... ಅದು ಚಂದ ಕಾಣುವುದಿಲ್ಲ.
ತೆ: ಇಲ್ಲ, ಬೇಡ ಬಿಡಿ
ಸು: ಚಂದ ಕಾಣುವುದಿಲ್ಲ... ಅದನ್ನು ಸುತ್ತಿಬಿಡಿ.
(ಹಿಂದಿರುಗಿ ಬಾಗಿಲು ಪರೀಕ್ಷಿಸುತ್ತಾರೆ)
ಸು: ಅದನ್ನು ತಗೊಂಡು ಹೋಗೋಣ
(ತೆಹಲ್ಕಾ ಹಿಂಬಾಲಿಸಲು ಎದ್ದು ನಿಲ್ಲುತ್ತಾರೆ)
ತೆ: ಅದನ್ನು ಆಕೆಗೆ ತೋರಿಸಬಯಸುತ್ತೇನೆ.
ಸು: ಅದರ ಅಗತ್ಯವೇನಿದೆ?
ತೆ: ಇಲ್ಲವೇ?
ಸು: ಮ್ಯಾಡಂ, ಇವರು ಸ್ಯಾಮುವೆಲ್
ತೆಹಲ್ಕಾ ಕೈ ಮುಗಿಯುತ್ತಾರೆ
ತೆ: ವೆಸ್ಟ್ ಎಂಡ್...
ಸು: ಅವರು ಇಲೆಕ್ಟ್ರಾನಿಕ್ಸ್ ವ್ಯವಹಾರದಲ್ಲಿದ್ದಾರೆ.
ಜಯಾ ಜೆಟ್ಲಿ: ಹೌದಾ.
ಸು:ನಾನೂ ಅವರನ್ನು ಸೇರಿಕೊಳ್ಳುತ್ತೇನೆ.
ಸು: ಈಗ ಅವರು ರಕ್ಷಣೆ ವಿಷಯದಲ್ಲಿ ಏನೋ ಒಂದು ವಿಷಯದಿಂದ ಆರಂಭಿಸುತ್ತಾರೆ. ಪಕ್ಷಕ್ಕೆ ಏನೋ ತಂದಿದ್ದಾರೆ


ಜನರಲ್ ಚೌಧರಿ

ಜ: ಹೂಂ. (ನಗುತ್ತಾರೆ)
(ಮೇಜರ್ ಜನರಲ್ ಮುರುಗೈ ಇಲೆಕ್ಟ್ರಾನಿಕ್ಸ್ ಇತ್ಯಾದಿ ಬಗ್ಗೆ ಮಾತನಾಡುತ್ತಿರುವಾಗ ನಡುವೆ ತೆಹಲ್ಕಾ ಮಾತನಾಡುತ್ತಾರೆ)
ತೆ: (ಹಣದ ಪ್ಯಾಕೆಟನ್ನು ಮುಂದಿಡುತ್ತಾ) ನಾನು... ನಾನು ಇದನ್ನು ಮ್ಯಾಡಂಗೆ ಕೊಡಲೇ?
(ತೆಹಲ್ಕಾ ಪ್ಯಾಕೆಟ್ ಬಲಬದಿಗೆ ನಿಂತಿದ್ದ ಇನ್ನೊಬ್ಬ ವ್ಯಕ್ತಿಗೆ ಕೊಟ್ಟು ಕೈ ಮುಗಿಯುತ್ತಾರೆ. ಜಯಾ ಜೇಟ್ಲಿ ಪ್ರತಿ ನಮಸ್ಕಾರ ಮಾಡುತ್ತಾರೆ)
ಮೇಜರ್ ಜನರಲ್ ಮುರುಗೈ: ಈ ಕಂಪನಿ....
ಜಯಾ ಜೇಟ್ಲಿ: ಇದನ್ನು ನಮ್ಮ ಮಂತ್ರಿಗಳಿಗೆ... ಶ್ರೀನಿವಾಸ ಪ್ರಸಾದ್‌ಗೆ ಕಳಿಸಿ
ತೆ: ಹೌದು
ಜ: ಅವರು... ರಾಷ್ಟ್ರೀಯ ಮಂಡಳಿ ಸಭೆಯ ಆತಿಥ್ಯ ನಡೆಸುತ್ತಿದ್ದಾರೆ.
ತೆ: ಓಕೆ, ಓಕೆ, ಓಕೆ, ಓಕೆ.
ಜ : ಎರಡು ದಿನಗಳ ಸಭೆ, 500-800 ಜನ ಬರುತ್ತಾರೆ.

→

# ಆರ್.ಎಸ್.ಎಸ್.ನ ಸಚ್ಚಾರಿತ್ರ್ಯದ ಬೊಗಳೆ ಮತ್ತು ದೇಶದ್ರೋಹಿಗಳ ಕೂಟ

ದರಿದ್ರ ಹಣಕ್ಕಾಗಿ ದೇಶದ ರಕ್ಷಣಾ ಪ್ರಶ್ನೆಯನ್ನೂ ಮಾರಿಕೊಳ್ಳುವ ಆರ್.ಎಸ್.ಎಸ್. ಒಂದು ದೇಶದ್ರೋಹಿಗಳ ಕೂಟ ಎಂಬುದನ್ನು ತೆಹಲ್ಕಾ ಕಾಮ್ ಬಹಿರಂಗಗೊಳಿಸಿದೆ.

**ಆರ್.ಕೆ.ಗುಪ್ತಾ ಮತ್ತು ಆರ್‌ಎಸ್‌ಎಸ್**

ಈ ಭ್ರಷ್ಟಾಚಾರ ಹಗರಣದಲ್ಲಿ ಸಿಕ್ಕಿಬಿದ್ದಿರುವ ಆರ್.ಕೆ. ಗುಪ್ತಾ ಆರ್.ಎಸ್.ಎಸ್. ಗೆ ಸೇರಿದವನು. ದೆಹಲಿಯಲ್ಲಿರುವ ಈಗ ಆರ್.ಎಸ್.ಎಸ್.ಗೆ ಸೇರಿದ 'ಜಾಂದೇವಾಲನ್' ಎಂಬ ಕಟ್ಟಡ 1967ರಲ್ಲಿ ಸುಮಾರು 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈತನೇ ಕಟ್ಟಿಸಿದ್ದು. ಈ ಹಣ ಈತನ ಇಂತಹ ಹಗರಣಗಳ ಪಾಪದ ಕೂಪದಿಂದ ಬಂದದ್ದು. ದೇಶದ ಪ್ರಧಾನಿ ವಾಜಪೇಯಿ ಮತ್ತು ಗೃಹಮಂತ್ರಿ ಅದ್ವಾನಿ ಇವರುಗಳು ಸುಮಾರು 17 ವರ್ಷಗಳ ಕಾಲ ಈತನಿಗೆ ಸೇರಿದ ಮನೆಯಲ್ಲೇ ವಾಸವಾಗಿದ್ದರು ಎಂಬುದು ಇವರ ನಡುವಿನ ಸಂಬಂಧಗಳನ್ನು ಬಯಲಿಗೆಳೆಯುತ್ತದೆ. ಈತನೇ ಹೇಳುವ ಪ್ರಕಾರ ರಕ್ಷಣಾ ಖಾತೆಗೆ ಸಂಬಂಧಿಸಿದಂತೆ ಪ್ರತೀ ಡೀಲ್‌ನಲ್ಲೂ ಕನಿಷ್ಠ ಪಕ್ಷ ಶೇ. 17 ರಷ್ಟು ಹಣವನ್ನು ಬೇರೆ ಬೇರೆ ಹಂತದಲ್ಲಿ ಪಡೆಯಲಾಗುತ್ತದೆಯಂತೆ.

ಆರ್‌ಎಸ್‌ಎಸ್, ಬಿಜೆಪಿಗೆ ತಿಂಗಳಿಗೆ 3-4 ಕೋಟಿ ಹಣ ನೀಡುತ್ತಾನಂತೆ. ತೆಹಲ್‌ಕಾ ಕಾಮ್‌ನಲ್ಲಿ ಈತನು ನಡೆಸಿರುವ ಸಂಭಾಷಣೆ ಆರ್.ಎಸ್.ಎಸ್. ಸಂಘಟನೆಯ ದುಷ್ಟಕೂಟವನ್ನು ಬಯಲಿಗೆಳೆಯುತ್ತದೆ.

"ಏನಂದ್ಕೊಂಡಿದ್ದೀರಿ ನನ್ನನ್ನ? ಖುದ್ದು ಕೆಲಸ ಆದ ಮೇಲೆ ಒಪ್ಪಿಕೊಂಡಹಾಗೇನೇ. ನಿಮ್ಮದುಡ್ಡಿಗೆ ನಾನು ಜವಾಬ್ದಾರಿ. ಅವರು ಕೆಲಸ ಮಾಡಿ ಕೊಡಲಿಲ್ಲ ಅಂದ್ರೆ ನಿಮ್ಮ ಹಣ ನಾನು ವಾಪಸ್ ಕೊಡ್ತೀನಿ. ಬ್ರಜೇಶ್ ಮಿಶ್ರಾ ಹೇಳಿದ ಮೇಲೆ ಜಾರ್ಜ್ ಫರ್ನಾಂಡಿಸ್ ಮಾಡಲೇಬೇಕು. ಮಾಡದಿದ್ರೆ ಮುಖಕ್ಕೆ ಹೊಡೆದು ಮಾಡಿಸ್ತೀನಿ. ಏನಂದ್ಕೊಂಡಿದಾರೆ? ಇದೇಥರಾ ಜಾರ್ಜ್‌ಗೆ, ಮಿಶ್ರಾಗೆ ಹಣಕೊಡಿಸಿ ರಷಿಯಾ ದೋರಿಗೆ ಡೀಲ್ ಮಾಡಿಸಿಕೊಟ್ಟೆ. ಅವರು 12 ರಿಂದ 15 ಪರ್ಸೆಂಟ್ ಕೊಟ್ಟರು. ಮೊದಲು ನಂಗೆ 25 ಲಕ್ಷ ಕೊಡಿ. ಕೆಲಸ ಆಗದಿದ್ರೆ ಕೇಳಿ. ಆರೆಸ್ಸೆಸ್ ಅಂದ್ರೆ ನಾನು! ನನ್ನ ಜೊತೆ ಬಿಜೆಪಿ ಆಫೀಸಿಗೆ ಬನ್ನಿ, ಎಷ್ಟು ಗೌರವಕೊಡ್ತಾರೋ ನೋಡಿ? ನನ್ನ ಮಾತು ಕೇಳದಿದ್ರೆ ಮುಖಕ್ಕೆ ಹೊಡೀತೀನಿ. ನನ್ನ ಮಾತು ನಂಬಿ. 25 ಲಕ್ಷ ಕೊಡಿ."

ಆರ್.ಎಸ್.ಎಸ್. ಈ ಬಗ್ಗೆ ಹೇಳಿಕೆ ನೀಡಿ ಇವನ ಹೇಳಿಕೆಯ ಸಾರಾಂಶವನ್ನು ನಿರಾಕರಿಸದಿದ್ದರೂ ಇವನಿಗೂ ಮತ್ತು ಆರ್.ಎಸ್.ಎಸ್.ಗೂ ಸಂಬಂಧವಿಲ್ಲ ಎನ್ನುವ ವಂಚನೆಯ ಹೇಳಿಕೆಯನ್ನು ಕೊಟ್ಟಿದೆ. ಆರ್.ಎಸ್.ಎಸ್. ಒಂದು ಟ್ರಸ್ಟ್ ಅಲ್ಲ. ಹೀಗಾಗಿ ಆರ್.ಕೆ. ಗುಪ್ತಾ ಧರ್ಮದರ್ಶಿಯಾಗಿರಲು ಸಾಧ್ಯವಿಲ್ಲ" ಎನ್ನುವ ವಿತಂಡ ....... ಅದರದ್ದು. ಇಂತಹ ವಾದ ಆಶ್ಚರ್ಯಕರವೇನಲ್ಲ. ಆರ್.ಎಸ್.ಎಸ್.ನ ಚರಿತ್ರೆಯನ್ನು ಬಲ್ಲವರಿಗೆ ಇದು ಸಹಜವಾಗಿ ಕಾಣುತ್ತಿದೆ. ಸುಳ್ಳು, ವಂಚನೆ, ಮೋಸಗಳೇ ಇವರ ಬೆಳವಣಿಗೆಯ ಬೇರುಗಳಾಗಿವೆ.

ಗಾಂಧಿಯನ್ನು ಕೊಂದದ್ದು ಗೋಡ್ಸೆಯಲ್ಲವೇ? ಇವನು ಆರ್.ಎಸ್.ಎಸ್.ಗೆ ಸೇರಿದವನಲ್ಲವೇ? ಇಡೀ ದೇಶವೇ ಇವರನ್ನು 'ಗಾಂಧಿಯನ್ನು ಕೊಂದ ದೇಶದ್ರೋಹಿಗಳೆಂದು ಹೇಳುತ್ತಿದ್ದರೆ ಅದ್ವಾಣಿಯವರು ಗೋಡ್ಸೆಗೂ ಆರ್.ಎಸ್.ಎಸ್.ಗೂ ಸಂಬಂಧವಿಲ್ಲ ಎಂದು ಯಾವುದೇ ನಾಚಿಕೆಯೂ ಇಲ್ಲದೆ ಹೇಳಲಿಲ್ಲವೇ? ಈ ಗೋಡ್ಸೆಯ ಸಹೋದರನೇ ಕೆಲವರ್ಷಗಳ ಹಿಂದೆ 'ಗಾಂದಿಯನ್ನು ಕೊಂದದ್ದೇಕೆ' ಪುಸ್ತಕ ಬಿಡುಗಡೆ ಮಾಡುತ್ತಾ ಗೋಡ್ಸೆ ಮತ್ತು ಆರ್.ಎಸ್.ಎಸ್. ಸಂಬಂಧವನ್ನು ದೃಢಪಡಿಸಿದ್ದನ್ನು ಮತ್ತು ಅದ್ವಾಣಿಯನ್ನು ಹೇಡಿಯೆಂದು ಜರಿದದ್ದನ್ನು ಇಷ್ಟು ಬೇಗ ಮರೆಯಲು ಸಾಧ್ಯವೇ?

ಗಾಂಧಿಯನ್ನು ಕೊಂದು ಕೋಮುವಿಷವನ್ನು ಚೆಲ್ಲಾಡಿದ ಈ ಜನ ಅದೇ ಗಾಂಧಿಯನ್ನು ರಾಜಕೀಯ ಲಾಭಕ್ಕೆ ಬಳಸಲು ಹೇಳಿದ ಸುಳ್ಳುಗಳಿಗೆ ಲೆಕ್ಕವಿಡಲು ಸಾಧ್ಯವೇ.

ಚಂದ್ರಶೇಖರ್ ಪ್ರಧಾನಿಯಾಗಿದ್ದಾಗ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೆ.ಎಲ್.ಶರ್ಮಾ (ಈತ ಪಕ್ಕಾ ಆರ್.ಎಸ್.ಎಸ್. ಚಡ್ಡಿ.) 1937ರ ಜುಲೈನಲ್ಲಿ ಮಹಾತ್ಮಗಾಂಧಿಯವರು ಅಯೋಧ್ಯೆಯ ರಾಮಜನ್ಮಭೂಮಿ ಹೋರಾಟವನ್ನು ಬೆಂಬಲಿಸಿ ತಮ್ಮ ಹರಿಜನ ಸೇವಕ ಪತ್ರಿಕೆಯಲ್ಲಿ ಎರಡು ಪ್ಯಾರಾಗಳಷ್ಟು ಬರೆದಿದ್ದಾರೆ. ಎಂದು ಒಂದು ಪತ್ರವನ್ನು ಪ್ರಧಾನಿಗೆ ಬರೆದುಬಿಟ್ಟರು. 1990ರ ಡಿಸೆಂಬರ್ 3 ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಸಂಶೋಧನಾ ವಿಭಾಗವು ಇದನ್ನು ಸಂಪೂರ್ಣ ಸುಳ್ಳೆಂದು ಪ್ರಕಟಿಸಿತು. ನಂತರ ಈತ ಈ ಸುಳ್ಳನ್ನು ಮುಚ್ಚಲು ಮತ್ತೊಂದು ಸುಳ್ಳನ್ನು ಹೇಳಿದ. ಭಂಡತನವನ್ನು ಪ್ರದರ್ಶಿಸಿದ.

**ಆರ್.ಎಸ್.ಎಸ್. ನ ಹಣದ ಮೂಲಗಳು ನಾಲಿಕೆ ತಿರುಚುವ ನಾಯಕರು**

ಆರ್.ಎಸ್.ಎಸ್.ನ ಹಣದ ಮೂಲವನ್ನು ಬಲ್ಲವರು ಬಹಳ ಕಡಿಮೆ. ಐಕ್ಯರಂಗದ ಹಿಂದಿನ ಸಂಚಿಕೆಗಳಲ್ಲಿ ವಿದೇಶಿ ಹಣದ ಮೂಲಗಳ ಬಗ್ಗೆ ಬರೆಯಲಾಗಿದೆ. ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸುವ ಆರ್.ಎಸ್.ಎಸ್. ಅದರ ಲೆಕ್ಕಾಚಾರ ಮತ್ತು ಪಾರದರ್ಶಕತೆಯನ್ನು ಪ್ರದರ್ಶಿಸುವುದಿಲ್ಲ. ತೆರಿಗೆ ವಂಚನೆಯ ಮೋಸದ ಜೊತೆಯಲ್ಲೇ ಆರ್.ಎಸ್.ಎಸ್.ನ ಹಣಸಂಪನ್ಮೂಲದ ಕಥೆಯಿದೆ. ಹಣಕ್ಕಾಗಿ ಹೇಗೆ ತಮ್ಮ ತತ್ವಗಳನ್ನೆ ಬದಲಾಯಿಸಬಲ್ಲರು ಎಂಬುದಕ್ಕೆ ಒಂದು ಘಟನೆಯನ್ನು ನೆನಪಿಸಿಕೊಳ್ಳುವುದು ಉಚಿತ.

ದಾರ್ಮಿಕವೂ ಮತ್ತು ಧರ್ಮಾರ್ಥವೂ ಅಲ್ಲದ ಕಾರಣದಿಂದ ತೆರಿಗೆ ರಿಯಾಯಿತಿಯನ್ನು ನೀಡಲಾಗದು ಎಂದು ಆದಾಯ ತೆರಿಗೆ ಆಯುಕ್ತರು 1972ರಲ್ಲಿ ಹೇಳಿದಾಗ ಆಗ ಆರ್.ಎಸ್.ಎಸ್.ನ ಮುಖ್ಯಸ್ಥರಾಗಿದ್ದ ದೇವರಸ್‌ರವರು ನಾಗಪುರದ ಅಪಿಲೇಟ್ ಅಸಿಸ್ಟೆಂಟ್ ಕಮೀಷನರ್ ಮುಂದೆ, "ಧರ್ಮಾರ್ಥ ಕಾರಣಗಳಿಗಾಗಿ ಟ್ರಸ್ಟ್‌ನಲ್ಲಿ ಹಣವನ್ನು ಹೊಂದಲಾಗಿದೆ" ಎನ್ನುತ್ತಾ ಅದಕ್ಕಾಗಿ ತನ್ನ ಸಂವಿಧಾನದ ವಿಧಿಗಳನ್ನೇ ತಿದ್ದುಪಡಿ ಮಾಡಿರುವ ಬಗ್ಗೆ ಖ್ಯಾತ ವಿಮರ್ಶಕರಾದ ಎ.ಜಿ. ನೂರಾನಿಯವರು ಬರೆದಿದ್ದಾರೆ. ಅನುಕೂಲ ಬಂದಾಗ ಟ್ರಸ್ಟ್ ಎಂದು ಹೇಳುವುದು ಅನಾನುಕೂಲ ವಾದಾಗ ಟ್ರಸ್ಟ್ ಅಲ್ಲವೆನ್ನುವುದು, ಅದಕ್ಕಾಗಿ ದಾಖಲೆಗಳನ್ನು ತಿರುಚುವುದು ಆರ್.ಎಸ್.ಎಸ್.ನ ಜಾಯಮಾನವಾಗಿದೆ.

ಇಂತಹ ಹೀನ ಲಾಭಕ್ಕಾಗಿ ಏನು ಬೇಕಾದರೂ ಮಾಡಬಲ್ಲ ಆರ್.ಎಸ್.ಎಸ್ ಅಧಿಕಾರಕ್ಕಾಗಿ ಏನೆಲ್ಲಾ ಮಾಡುವುದಿಲ್ಲ? ಅಧಿಕಾರದ ಲಾಭಕ್ಕಾಗಿ ಆರ್.ಎಸ್.ಎಸ್. ಬ್ರಿಟಿಷರ ಜೊತೆ ಕೆಲಸ ಮಾಡಿದ್ದನ್ನು ಯಾರು ತಾನೇ ಮರೆಯಲು ಸಾಧ್ಯ? ಇಷ್ಟು ಮಾತ್ರವಲ್ಲ, ಸದಾ ಮುಸ್ಲಿಮರ ವಿರುದ್ಧ ವಿಷಕಾರ್ಲುವ ಇವರು ಮುಸ್ಲಿಮರೊಂದಿಗೂ ಅನುಕೂಲದ ಆಡಳಿತವನ್ನು ನಡೆಸಿದವರು. 1942ರಲ್ಲಿ ಸಿಂಧ್ ಪ್ರಾಂತದಲ್ಲಿ ಮುಸ್ಲಿಂ ಲೀಗಿನ ಜೊತೆ ಸೇರಿ ಆಡಳಿತ ನಡೆಸುವ ಸಂದರ್ಭ ಬಂದಾಗಲೂ ಅಧಿಕಾರವನ್ನು ತ್ಯಜಿಸದಂತೆ ಹಿಂದೂಮಹಾಸಭಾದ ಅಧ್ಯಕ್ಷನಾಗಿದ್ದ ಸಾರ್ವರ್ ಪತ್ರ ಬರೆದಿದ್ದನ್ನು ಚರಿತ್ರೆ ಮರೆಯಲು ಸಾಧ್ಯವೆ?

**ಸುಳ್ಳುಗಳದ್ದೇ ಕರಾಳ ಇತಿಹಾಸ**

ದೇಶದ್ರೋಹಿ ಕೆಲಸಗಳಿಗೆ ಮತ್ತು ಕೋಮು ದಂಗೆಗಳನ್ನು ನಡೆಸಿದ ದುಷ್ಕೃತ್ಯಗಳಿಗೆ ಯಾವಾಗೆಲ್ಲಾ ಆರ್.ಎಸ್.ಎಸ್ ಅನ್ನು ನಿಷೇದಿಸಲಾಗಿದೆಯೋ ಆಗೆಲ್ಲಾ ಆರ್.ಎಸ್. ಎಸ್. ಸುಳ್ಳು ಭರವಸೆಗಳನ್ನು ಮತ್ತು ಆಶ್ವಾಸನೆಗಳನ್ನು ನೀಡಿಯೇ ಹೊರಬಂದಿರುವುದು ಭಾರತದ ಚರಿತ್ರೆಯನ್ನು ಕರಾಳವಾಗಿಸಿವೆ.

ಜಗತ್ತಿನ ಮಹಾನ್ ಪಾತಕ ಹಿಟ್ಲರ್‌ನ ವಂಶಸ್ಥರಾದ ಆರ್.ಎಸ್.ಎಸ್.ನವರು ಅವನ ಹಾದಿಯಲ್ಲಿ ನಡೆಯಲು ಹೆಮ್ಮೆಪಡುವವರು. ಹಿಟ್ಲರ್‌ನ ಪ್ರಚಾರ ಮಂತ್ರಿ ಗೋಬೆಲ್ಸ್‌ನ ಪ್ರಚಾರ ತಂತ್ರ ಹೀಗಿತ್ತು. "ಒಂದು ಸಾಕಷ್ಟು ಪ್ರಮಾಣದ ಸುಳ್ಳನ್ನು ಪದೇ ಪದೇ ಹೇಳುವುದರಿಂದ ಸತ್ಯವಾಗುತ್ತದೆ" ಎಂದು ಹೀಗಾಗಿ ಸುಳ್ಳುಗಳನ್ನು ಸೊಗಸಾಗಿ ಹೇಳುವ ಕಲೆಯನ್ನು ಅವನಿಂದಲೇ ಬಳುವಳಿ ಪಡೆದಿದ್ದಾರೆ ಈ ಸ್ವದೇಶಿಗಳು. "ಬಾಬ್ರಿ ಮಸೀದಿಯನ್ನು ಉರುಳಿಸಿದ್ದು ಬಾಂಬುಗಳು ಕರಸೇವಕರಲ್ಲ" ಎಂದು ಆರ್.ಎಸ್.ಎಸ್.ನ ಮುಖ್ಯಸ್ಥ ಸುದರ್ಶನ್ ಇತ್ತೀಚೆಗೆ ಹೇಳಲ್ಲವೇ? ಹೀಗಾಗಿ ಅದು ಆರ್.ಕೆ. ಗುಪ್ತಾ ಆಗಿರಲಿ, ಅದ್ವಾನಿ ಆಗಿರಲಿ, ಬಂಗಾರು ಲಕ್ಷ್ಮಣ್ ಆಗಿರಲಿ ಅಥವಾ ವಾಜಪೇಯಿಯೇ ಆಗಿರಲಿ... ಈ ಸುಳ್ಳಿನ ಸೂತ್ರವನ್ನು ಮೀರುವವರಲ್ಲ. ಜನಾಂಗೀಯ ದ್ವೇಷದ ಆಧಾರದ ಮೇಲೆ ಅದಿಕಾರಕ್ಕೆ ಹಾತೊರೆಯುವ ಈ ಮಂದಿ ಎಂತಹ ಸುಳ್ಳನ್ನೂ ಹೇಳುತ್ತಾರೆ. ಹೀಗಾಗಿ ಆರ್.ಎಸ್.ಎಸ್.ನ ಮತ್ತೊಂದು ಹೆಸರೇ ಸುಳ್ಳು (ರಾಷ್ಟ್ರೀಯ ಸುಳ್ಳರ ಸಂಘವಂತೆ)

ಆರ್.ಕೆ. ಗುಪ್ತಾ ಆರ್.ಎಸ್.ಎಸ್. ಗೆ ಸೇರಿದವನಲ್ಲ, ಬಂಗಾರು ಲಕ್ಷ್ಮಣ್ ಆರ್‌ಎಸ್‌ಎಸ್.ನ ಪಾಸಾದ ವಿದ್ಯಾರ್ಥಿಯಲ್ಲ ಪೇಲಾದವನ ಎಂದು ಏನೆಲ್ಲಾ ಬೊಗಳೆ ಬಿಟ್ಟರೂ, ಆರ್‌ಎಸ್‌ಎಸ್ ನ ಹಣಕಾಸಿನ ಸಂಪನ್ಮೂಲಗಳ ನೀಚ ಹಿನ್ನೆಲೆಗಳನ್ನು, ಅದರ ಸುಳ್ಳುಗಳ ಸರಮಾಲೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಭಾರತದ ಬಂಡವಾಳದಾರರ ನಿಷ್ಠ ಸೇವಕನಾಗಿ ವರ್ಣಾಶ್ರಮ ಪ್ರಾಬಲ್ಯವನ್ನು ಎತ್ತಿಹಿಡಿಯಲು ನಡೆಸುವ ಕುತಂತ್ರಗಳನ್ನು ಪಿತೂರಿಗಳನ್ನು ನಿಲ್ಲಿಸದಿದ್ದರೆ, ಆರ್.ಎಸ್.ಎಸ್. ಎಂಬ ವಂಚನೆಯ ಸಂಸ್ಥೆಗೆ ದೇಶದ ಜನತೆ ಸರಿಯಾದ ಪಾಠವನ್ನು ಕಲಿಸುತ್ತಾರೆ.

- ಕೆ. ಪ್ರಕಾಶ್

# ಬಾಬಾ ಬುಡನ್‌ಗಿರಿಯಲ್ಲಿ ಉರುಸ್-ಜನಮನದಲ್ಲಿ ಸೌಹಾರ್ದತೆಯ ಬೆಳಕು

ತಮ್ಮದುಷ್ಟ ರಾಜಕೀಯಕ್ಕಾಗಿ ಸಾಂಸ್ಕೃತಿಕ ಸೌಹಾರ್ದ, ಸಾಮರಸ್ಯದ ಸಂಕೇತವಾಗಿದ್ದ ಚಿಕ್ಕಮಗಳೂರು ಜಿಲ್ಲೆಯ ಬಾಬಾ ಬುಡನ್‌ಗಿರಿಯನ್ನೇ ಕೋಮು ಸಂಘರ್ಷದ ಕಿಚ್ಚಾಗಿಸಿ, ಕೋಮುದ್ವೇಷದ ಅಖಾಡವನ್ನಾಗಿಸಲು ಹೆಣಗಿದ್ದರು ಆರೆಸ್ಸೆಸ್ ಹಾಗೂ ಬಿಜೆಪಿ ಭಜರಂಗದಳಗಳ ಚಿಡ್ಡಿಗಳು ಮತ್ತು ಅವರ ಪರಿವಾರ.

ರಂಪಾಟ ಮಾಡಿ 'ಹೊಲಸೆ'ಬ್ಬಿಸಿದ ಈ ಸಂಘ ಪರಿವಾರದ ಕಿಡಿಗೇಡಿತನ ರಾಜ್ಯದ ಜನರ ಕಣ್ಣಲ್ಲಿ ಬಾಬಾ ಬುಡನ್‌ಗಿರಿಯ ಹಸಿರಿನಂತೆ ಇನ್ನೂ ಹಸಿಯಾಗಿದೆ. ರಾಜಕೀಯ ಹಸ್ತಕ್ಷೇಪಗಳು, ಪಿತೂರಿಗಳು ನಡೆಯದಿದ್ದರೆ, ಜನ ಒಂದಾಗಿ ಬಾಳುತ್ತಾರೆ. ಸಂತೆ-ಜಾತ್ರೆ-ಉತ್ಸವ ಉರುಸ್ ಜೊತೆ ಜೊತೆಯಾಗಿ ಮಾಡಿ ಸಂಭ್ರಮಿಸುತ್ತಾರೆ ಎಂಬುದಕ್ಕೆ ಇಲ್ಲಿದೆ ಸಾಕ್ಷಿ. ಪ್ರತಿವರ್ಷದಂತೆ ಈ ಬಾರಿಯೂ ಮಾರ್ಚ್ 12, 2001 ರಂದು ಉರುಸ್ ಆಚರಣೆ ಸಂಭ್ರಮದಿಂದ ಆರಂಭವಾಯಿತು. ಅತ್ತಿಗುಂಡಿಯಿಂದ ಸಂಪ್ರದಾಯದಂತೆ ಮೆರವಣಿಗೆ ಮೂಲಕ ಪೀಠಕ್ಕೆ ಗಂಧವನ್ನು ತರಲಾಗಿದೆ. ಗೌಸ್ ಮೊಯಿದ್ದೀನ್ ಶಾಖಾದ್ರಿಯವರು ಉರುಸ್ ಆಚರಣೆಗೆ ಚಾಲನೆ ನೀಡಿದ್ದಾರೆ. ಮೆರವಣಿಗೆಯ ನಂತರ ಪವಿತ್ರ ಗಂಧವನ್ನು ಪೀಠದಲ್ಲಿರುವ ಗೋರಿಗಳಿಗೆ ಲೇಪಿಸಿ ಹೊಸ ಹಸಿರು ವಸ್ತ್ರಗಳನ್ನು ಹೊದಿಸಲಾಯಿತು ಎಂದು ವರದಿಯಾಗಿದೆ.

ಚಿಕ್ಕಮಗಳೂರು ಹಾಗೂ ಸುತ್ತಮುತ್ತಲ ಹಲವು ಜಿಲ್ಲೆಗಳಿಂದ ಹಿಂದೂ-ಮುಸ್ಲಿಂ ಧರ್ಮಗಳಿಗೆ ಸೇರಿದ ಸಾವಿರಾರು ಭಕ್ತರು ಈ ಉರುಸ್‌ನಲ್ಲಿ ಪಾಲ್ಗೊಂಡಿದ್ದಾರೆ. ಕೋಮುವಾದದ ಕರಾಳ ಛಾಯೆಯೋ ಎಂಬಂತೆ ಬಾಬಾ ಬುಡನ್‌ಗಿರಿ, ಪೀಠ ಸುತ್ತಮುತ್ತಲೆಲ್ಲಾ ಪೋಲೀಸ್ ಬಿಗಿ ಬಂದೋಬಸ್ತ್ ಕಂಡು ಬಂದಿತು.

ತೆ: ಓಕೆ, ಓಕೆ.
ಜಯಾ ಜೇಟ್ಲಿ ತಮ್ಮ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯ ಬಗ್ಗೆ ಮಾತನಾಡುತ್ತಾರೆ. ಐಟಂಗಳ ಗುಣಮಟ್ಟ, ಬೆಲೆ, ರಾಷ್ಟ್ರೀಯ ಹಿತಾಸಕ್ತಿ, ಇತ್ಯಾದಿಗಳ ಬಗ್ಗೆ, ತಾನು ಏನು 'ಸಹಾಯ' ಮಾಡಬಹುದು ಎಂಬ ಬಗ್ಗೆ ಮಾತಾಡುತ್ತಾರೆ)

### 'ಐದಾರು ಲಕ್ಷ'ಕ್ಕೆ ಮೌಲ್ಯಮಾಪನ ಆದೇಶ ಪತ್ರ

ಮೇಜರ್ ಜನರಲ್ ಚೌಧರಿ: ನಿಮ್ಮ ತಲೆಯಲ್ಲಿ ಒಂದು ವಿಷಯ ಸ್ಪಷ್ಟವಾಗಿರಬೇಕು. ಕಳೆದ ಬಾರಿ ವಿವರಿಸಿದಂತೆ ಇದು ಒಂದು ಏಕವ್ಯಕ್ತಿ ಶೋ ಅಲ್ಲ.
ತೆಹಲ್ಕಾ: ಸರಿ ಸಾರ್..... ಅದು ನನಗೆಚೆನ್ನಾಗಿ ಗೊತ್ತು. ಸಾರ್.,
ಚೌ: ನೀವೇನು ಮಾಡಬೇಕೆಂದರೆ ಸಚಿವಾಲಯದಲ್ಲಿ ಯಾರನ್ನಾದರೂ ಸಂಪರ್ಕಿಸಬೇಕು. ಅವರ ಕಚೇರಿಯಲ್ಲಿ ನಿಮಗೆ ಸಂಪರ್ಕಗಳಿರಬಹುದು. ಅಲ್ಲಿಂದ ನಮತ್ತ ತಳ್ಳಲು ಶುರುಮಾಡಿ. ನೀವಲ್ಲಿ ಇಲ್ಲದಿದ್ದರೂ ಫಲಿತಾಂಶ ಕಾಣುತ್ತೀರಿ. ಕೆಲಸಗಳು ಬಹಳ.... ಈಗಾಗಲೇ ಸಚಿವಾಲಯದಲ್ಲಿ ಸಂಪರ್ಕಿಸಿದ್ದರೆ ಅಗತ್ಯವಿಲ್ಲ.
ತೆ: ಅಗತ್ಯವಿಲ್ಲ, ಸರಿಯೇ? ಅದೇ.. ಅದೇ ನಾನು ಕೇಳುತ್ತಿರುವುದು. ನಾನು ಆಗಲೇ ಜಯಾಜೇಟ್ಲಿ ಮತ್ತು ರಾಜೀವ್ ಗೋಬಾರರನ್ನು ಕಂಡಿದ್ದೇವೆ.
ಚೌ: ಈಗಾಗಲೇ ನೀವಲ್ಲಿ ಇದ್ದರೆ... ಇದ್ದರೆ ನೀವು ಬೇರೆ ಕಡೆ ಹೋಗಬೇಕಾಗಿಲ್ಲ.
ತೆ: ಅಗತ್ಯ ಇಲ್ಲ, ಸರಿಯೇ? ಇದನ್ನು ನಿಮ್ಮಿಂದ ತಿಳಿದುಕೊಳ್ಳಬೇಕಾಗಿದೆ ಸಾರ್
ಚೌ: ಅವರೇ ಮುಖ್ಯ ಜನಗಳು
ಚೌ: ಸಮಸ್ಯೆಯಿಲ್ಲ... ನಾನು ನಿಮ್ಮನ್ನು ಸಂಪರ್ಕಿಸಿ ಅವರ ಪ್ರತಿಕ್ರಿಯೆ ಇದು ಎಂದು ತಿಳಿಸುತ್ತೇನೆ.
ತೆ: ಓಕೆ... ಸರಿ... ಸಮಸ್ಯೆಯಿಲ್ಲ. ಇವತ್ತೇ ತಂದೇ ಕೊಟ್ಟಿದ್ದೇನೆ. ಅವರು ಐದು ಅಥವಾ ಆರು (ಲಕ್ಷ ರೂಪಾಯಿ) ಕಳಿಸ್ತಾರೆ. ನಾನಿನ್ನು ಹೊರಡುತ್ತೇನೆ.
(ಅಡಿಶನಲ್ ಸೆಕ್ರೆಟರಿ ಎಸ್.ಎಂ.ಮೆಹ್ತಾ ಮೇಜರ್ ಜನರಲ್ ಚೌಧರಿಗೆ ಜನವರಿ ಎರಡನೇ ವಾರದಲ್ಲಿ ಸಂಬಂಧಪಟ್ಟ ಪತ್ರ ಕೊಟ್ಟರಂತೆ. ಅವರು 2 ಲಕ್ಷ ರೂ. ಕೇಳಿದರಂತೆ. ತೆಹಲ್ಕಾ ಪರವಾಗಿ ಜನರಲ್ ಮುರುಗೈ 50,000 ರೂ. ಅಡ್ವಾನ್ಸ್ ಕೊಟ್ಟರು. ಆದರೆ ತೆಹಲ್ಕಾ ತಂಡಕ್ಕೆ ಮುಂದುವರೆಯಲಾಗಲಿಲ್ಲ. ಏಕೆಂದರೆ ಪರೀಕ್ಷಣೆಗೆ ಅವರು ಮಾತುಕೊಟ್ಟಿದ್ದಂತೆ ಥರ್ಮಲ್ ಕ್ಯಾಮರಾಗಳನ್ನು ಒದಗಿಸಲಾಗಲಿಲ್ಲ. ಈ ನಡುವೆ ಮೇಜರ್ ಜನರಲ್ ಚೌಧುರಿ 'ಪರೀಕ್ಷಣಾ ಮೌಲ್ಯಮಾಪನ'ದ ಆದೇಶ ಪತ್ರ ನೀಡಿದರು.
ಈ ನಡುವೆ ಜನವರಿ 10 ರ ಸುಮಾರಿಗೆ ತೆಹಲ್ಕಾ ತಂಡದ 'ನಾಟಕ' ಬಯಲಾಗುವಂತಿತ್ತು. ಸಮತಾ ಪಕ್ಷದ ಖಜಾಂಚಿ ಜೈನ್ ಮತ್ತು ಬಂಗಾರು ಲಕ್ಷ್ಮಣ್ ಹಣಕ್ಕಾಗಿ ಹತಾಶರಾಗಿ 'ವೆಸ್ಟ್‌ಎಂಡ್ ಪ್ರತಿನಿಧಿ'ಗಳಿಗಾಗಿ ಕಾಯುತ್ತಿದ್ದರು.
ಜನರಲ್ ಮುರುಗೈ ರಿಂದ ಜನರಲ್ ಚೌಧರಿಯವರು ನೀಡಿದ ಆದೇಶ ಪತ್ರ ಪಡೆಯಲಾಗಲಿಲ್ಲ, ಈಗ ಸಂಬಂಧಿಸಿದ ಫೈಲುಗಳನ್ನು ಬದಲಿಸಲಾಗಿದೆ ಎಂದು ತಿಳಿದುಬಂದಿದೆ. ಆದರೂ ಜನರಲ್ ಚೌಧರಿಯವರ ಕಚೇರಿ ಸಿಬ್ಬಂದಿಯ ವಿಚಾರಣೆಯನ್ನು ಮಿಲಿಟರಿ ಗುಪ್ತಚರ ವಿಭಾಗ ನಡೆಸಿದರೆ ಸತ್ಯ ತಿಳಿದುಬರುತ್ತದೆ ಎನ್ನುತ್ತದೆ ತೆಹಲ್ಕಾ ತಂಡ.

- ಕೆ.ವಿ

# .....ಮಿಕಗಳನ್ನು ಹೊರಗೆಳೆದಿದ್ದು ಹೀಗೆ

ಪುಟ 7 ರಿಂದ

ನಾಯಕರು, ಕಡೆಗೆ ಪ್ರಧಾನ ಮಂತ್ರಿಗಳು, ಅವರ ಕಚೇರಿಯು ಈ ಹೊಲಸು ಹೊಂಡದಲ್ಲಿ ಮುಳುಗಿ ಎದ್ದಿದೆ.

ರಾಷ್ಟ್ರದ ರಕ್ಷಣಾ ಜಾಲದ ಅಡಿಪಾಯವನ್ನೆ ಕೊರೆಯುತ್ತಿರುವ ಈ ಕರಾಳ ಕೃತ್ಯಗಳ ಖದೀಮರನ್ನು ಕ್ಯಾಮರಾಕಣ್ಣುಗಳಲ್ಲಿ, ಕೂಡಿ ಹಾಕಿರುವ ಪತ್ರಕರ್ತರ ತಂಡದ ಸಾಹಸವಂತೂ ರೋಮಾಂಚನಕಾರಿ ಹಾಗೂ ಕುತೂಹಲಕಾರಿಯಾದ್ದದು.

ಸುಮಾರು ಒಂದು ವರ್ಷಗಳ ಹಿಂದೆ ರಾಷ್ಟ್ರದ ಕ್ರೀಡಾ ಲೋಕವನ್ನೇ ಅಲ್ಲೋಲ ಕಲ್ಲೋಲಗೊಳಿಸಿದ ಮ್ಯಾಚ್ ಫಿಕ್ಸಿಂಗ್ ಹಗರಣ'ವನ್ನು ಬಯಲಿಗೆಳೆದ ಅದೇ ತಂಡ ರಾಷ್ಟ್ರದ ರಾಜಕೀಯ ರಂಗದಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡಿರುವ ಈ ಭಯಾನಕ ಹಗರಣವನ್ನು ಬಯಲಿಗೆಳದಿದೆ. ತೆಹಲ್ಕಾ ಎಂದರೇನೇ ಅಲ್ಲೋಲ ಕಲ್ಲೋಲ ಎಂದರ್ಥ.

ಹಿಂದೆ ಔಟ್ ಲುಕ್ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿದ್ದ ತರುಣ್ ತೇಜಪಾಲ್ 'ಮ್ಯಾಚ್ ಫಿಕ್ಸಿಂಗ್' ಹಗರಣ ಬಯಲಿಗೆಳೆಯುವುದರಲ್ಲಿ ಪ್ರಾಧಾನ ಪಾತ್ರವಹಿಸಿದ ಅನಿರುದ್ಧ ಬಹಲ್ ಹಾಗೂ ಮ್ಯಾಥ್ಯು ಸ್ಯಾಮುಯೆಲ್ ಮತ್ತಿತರ ಯುವ ಉತ್ಸಾಹಿ ಪತ್ರಕರ್ತರು ಮಿತ್ರರು ಸೇರಿ ಲಂಡನ್ ವಿಳಾಸದಲ್ಲಿ ವೆಸ್ಟ್ ಎಂಡ್ ಇಂಟರ್ ನ್ಯಾಷನಲ್ ಎಂಬ ರಕ್ಷಣಾ ಸಾಧನಗಳನ್ನು "ಉತ್ಪಾದಿಸುವ" ಕಂಪನಿಯನ್ನು ಸ್ಥಾಪಿಸಿದರು. ಸಿಯಾಚಿನ್ ನಂತಹ ಮಂಜು ಭೂಮಿಯಲ್ಲೂ ಕಗ್ಗತ್ತಲ ರಾತ್ರಿಗಳಲ್ಲೂ ಸ್ಪುಟವಾಗಿ ಕೆಲಸ ಮಾಡಬಲ್ಲ. ಥರ್ಮಲ್ ಇಮೇಜಿಂಗ್ ಬೈನಾಕುಲರ್ ಎನ್ನುವ ರಾತ್ರಿ ದರ್ಶಕಗಳನ್ನು ಪೂರೈಸುವುದರ ಕತೆ ಕಟ್ಟಿದ ಈ ತಂಡ, ನಮ್ಮ ರಕ್ಷಣಾ ಇಲಾಖೆಯ ಸುತ್ತ ಮುತ್ತ ಆವರಿಸಿ ಕೊಂಡಿರುವ ದಲ್ಲಾಳಿ ಜಾಲದ ಸಣ್ಣ ಎಳೆಯೊಂದನ್ನು ಹಿಡಿದು ರಕ್ಷಣಾ ಇಲಾಖೆ ಸಚಿವಾಲಯ ಮತ್ತಿತರ ಉನ್ನತ ವಲಯದವರೆಗೆ ರಕ್ಷಣಾ ಕ್ಷೇತ್ರದ ಅಂತರಂಗ ಗರ್ಭವನ್ನೆಲ್ಲಾ ಹೊಕ್ಕು ಹೊರ ಬಂದಿದ್ದಾರೆ. ದೇಶಕ್ಕೆ ದೇಶವನ್ನೆ ದಂಗು ಬಡಿಸುವ ಅಘಾತಕಾರಿ ವಿಚಾರಗಳನ್ನು ಹೊರಹಾಕಿದ್ದಾರೆ.

ನನಗೇ ರಕ್ಷಣಾ ಕಾರ್ಯದರ್ಶಿ ಅಪಾಯಿಂಟ್ ಮೆಂಟ್ ಫಿಕ್ಸ್ ಮಾಡಿಕೊಡಿ ನಾನೇ 25 ಲಕ್ಷ ಕೊಡುತ್ತೇನೆ. ಜನ ಇಲ್ಲಿ ಕೋಟಿಗಳಲ್ಲಿ ಮಾತನಾಡುತ್ತಾರೆ. ಆದರೆ ನೀವು ಲಕ್ಷಗಳಲ್ಲಿ ಎರಡು ಲಕ್ಷ ಐದು ಲಕ್ಷದ ಮಾತನಾಡುತ್ತೀರಿ" ರಕ್ಷಣಾ ಕಾರ್ಯದರ್ಶಿ ಬೇಟಿಯನ್ನು ನಿಗದಿಪಡಿಸುವುದೂ ಒಂದು ದೊಡ್ಡ ಸಾಧನೆಯೇ. ಯಾಕೆಂದರೆ ಎಲ್ಲವೂ ಅಧಿಕೃತವಾಗಿ ಬಿಡುತ್ತದೆ. ಅಲ್ಲಿಯವರೆಗೆ ತಲುಪುವುದೇ ಒಂದು ದೊಡ್ಡ ವಿಜಯ. 5 ಲಕ್ಷ 10 ಲಕ್ಷ ರೂಪಾಯಿಗಳು ಬಿಸಾಡುವ ದುಡ್ಡು"

"ನೀವು ಹೇಳಿದ ಶೇಕಡಾ 17 ಕಮಿಷನ್ ವಿಷಯ ಆನಂತರದ ಹಂತದಲ್ಲಿ ಬರುತ್ತದೆ..."

ಇವು ರಕ್ಷಣಾ ಸಾಮಗ್ರಿಗಳ ಖರೀದಿ ಏಜೆಂಟನೊಬ್ಬ 'ತೆಹಲ್ಕಾ' ದೊಂದಿಗೆ ಆಡಿರುವ ಮಾತಿನ ತುಣುಕುಗಳು.

"ಡಾಲರ್ ಆಗಬಹುದು... ಡಾಲರ್‌ನಲ್ಲಿ ಕೊಡಿ" ಎನ್ನುತ್ತಾರೆ. ಬಿಜೆಪಿಯ ರಾಷ್ಟ್ರಾಧ್ಯಕ್ಷ ಬಂಗಾರು ಲಕ್ಷ್ಮಣ್(ಬಂಗಾರು ಲಕ್ಷ್ಮಣ್‌ಗೆ ಏನಿಲ್ಲವೆಂದರೂ 5-6 ವಿದೇಶಿ ಬ್ಯಾಂಕ್ ಅಕೌಂಟ್‌ಗಳಿವೆ ಎನ್ನಲಾಗಿದೆ)

ಇದು ಒಂದು ಅಸಮಾನ್ಯ ಸಾಹಸ. "ಮೊದಲು ನನಗೆ 25 ಲಕ್ಷ ಕೊಡಿ. ನಿಮ್ಮ ಕೆಲಸ ಆಗದಿದ್ರೆ ಕೇಳಿ. ಈವರ್ಷ 100 ಕೋಟಿ ಕಮಿಷನ್ ಸಿಗುವ ನಿರೀಕ್ಷೆಯಲ್ಲಿದ್ದೇನೆ" ಎನ್ನುವ ಆರೆಸ್ಸೆಸ್ ಟ್ರಸ್ಟಿ ಆರ್.ಕೆ.ಗುಪ್ತಾ, "ದೀಪಾವಳಿಯ ದಿನ ಮನೆಗೆ ಬರುವಾಗ ಬ್ಲೂಲೇಬಲ್ ವಿಸ್ಕಿ ತನ್ನಿ" ಎನ್ನುವ ಮೇಜರ್ ಜನರಲ್ ಮನಜಿತ್ ಸಿಂಗ್ ಅಹ್ಲುವಾಲಿಯ. ಇಂತಹ ಖರೀದಿ ವ್ಯವಹಾರಗಳ ಕಮಿಷನ್ ಹಣದಿಂದ ತನ್ನ ಪಕ್ಷಕ್ಕೆ 50 ಕೋಟಿ ಕೊಡಿಸಿದ್ದೇನೆ, ನಾನು 10 ಕೋಟಿ ಹೊಡೆದಿದ್ದೇನೆ ಎನ್ನುವ ಸಮತಾ ಪಕ್ಷದ ಖಚಾಂಚಿ ಆರ್.ಕೆ.ಜೈನ್.... ಇನ್ನೊಬ್ಬ ರಕ್ಷಣಾ ಮಂತ್ರಿಯೆಂದೇ ಬಣ್ಣಿಸಲ್ಪಟ್ಟ ಜಯಾ ಜೇಟ್ಲಿ, ಪ್ರಧಾನ ಕಾರ್ಯದರ್ಶಿ ಬ್ರಿಜೇಶ್ ಮಿಶ್ರಾ... ಇಂತಹ ಖದೀಮರ ವಿಕಾರ ಮುಖಗಳನ್ನು ರಹಸ್ಯ ಕ್ಯಾಮರಾ ಕಣ್ಣಿನಲ್ಲಿ ಸೆರೆ ಹಿಡಿಯುದು, ಅವರ ಅಂತರಂಗದ ಅಣಿಮುತ್ತುಗಳನ್ನು ದಾಖಲಿಸಿಕೊಳ್ಳುವುದು ಸಾಮಾನ್ಯವಾದದ್ದೇನಲ್ಲ.

ಈ ಉನ್ನತ ಕಾರ್ಯಾಚರಣೆಯನ್ನು ಯೋಜಿಸಿದ ತೆಹಲ್ಕಾ ತಂಡ ಇದಕ್ಕಾಗಿ ಸುಮಾರು 8 ತಿಂಗಳುಗಳ ಕಾಲ ಅತ್ಯಂತ ಸಂಯಮದಿಂದ ಕೆಲಸ ಮಾಡಿದೆ. 40 ಕೋಟಿ ರೂಪಾಯಿಗಳ ಒಟ್ಟು 'ವ್ಯಾಪಾರ'ದ ಮಾತನಾಡುತ್ತಾ ವಿವಿಧ ಹಂತಗಳಲ್ಲಿ ಸೇನಾಧಿ ಕಾರಿಗಳ ಮಂತ್ರಿ ಮಹೋದಯರ ವಿಜೇತರುಗಳು ಹಾಗೂ ಕಾರ್ಯದರ್ಶಿಗಳಿಗೆ ಏಜೆಂಟರು, ರಾಜಕೀಯ ಮುಖಂಡರಿಗೆ, ಒಟ್ಟು 10.8 ಲಕ್ಷ ರೂ.ಗಳ ಲಂಚವನ್ನು ತುಣುಕು ತುಣುಕಾಗಿ ಎಸೆದಿದೆ. ಮತ್ತು ಅಡಗಿಸಿಟ್ಟುಕೊಂಡ ಕ್ಯಾಮರಾ ಅದನ್ನು ಸೆರೆ ಹಿಡಿದಿದೆ.

ದೇಶದ ರಕ್ಷಣೆಯನ್ನು ಮರೆತು ಲಂಚಕ್ಕಾಗಿ ಜೊಲ್ಲು ಸುರಿಸುವ ಇಂತಹ ಭಂಡರು, ದೇಶ ದ್ರೋಹಿಗಳ ಜಾಲವನ್ನು ಜಾಲಾಡುವ ಕೆಲಸ ಎಂದರೆ ತಮ್ಮ ಪ್ರಾಣವನ್ನೇ ಪಣಕ್ಕೆ ಒಡ್ಡಿದಂತೆ. ಅದನ್ನು 'ಆಪರೇಷನ್ ವೆಸ್ಟ್ ಎಂಡ್' ಕಾರ್ಯಾಚರಣೆಯ ಮೂಲಕ ತಂಡ ಧೈರ್ಯವಾಗಿ, ಯಶಸ್ವಿಯಾಗಿ ನಡೆಸಿದೆ. ಈಸಾಹಸ-ಚಾಣಾಕ್ಷತೆ ಅಭಿನಂದನಾರ್ಹ. ಈ ಸಣ್ಣ ತಂಡದ ಬಳಿ ಹೆಚ್ಚು ಹಣವಿರಲಿಲ್ಲವಂತೆ. ಇದ್ದಿದ್ದರೆ ಇನ್ನಷ್ಟು ತಿಮಿಂಗಿಲಗಳನ್ನು 'ರೆಡ್ ಹ್ಯಾಂಡಾಗಿ' ಹಿಡಿಯ ಬಹುದಿತ್ತು, ಇನ್ನೂ ಭಾರಿ ಭಾರಿ ಹಗರಣಗಳ ಹೂರಣಗಳನ್ನೆಲ್ಲಾ ಹೊರಚೆಲ್ಲಬಹುದಾಗಿತ್ತು ಎನ್ನುತ್ತದೆ ತೆಹಲ್ಕಾ ತಂಡ.



ಭ್ರಷ್ಟಾಚಾರವನ್ನು ಬಯಲಿಗೆಳೆದ ತೆಹಲ್ಕಾ ತಂಡ ಪ್ರಧಾನ ಸಂಪಾದಕ ತರುಣ್ ತೇಜ್‌ಪಾಲ್, ಪ್ರಮುಖ ಪಾತ್ರವಹಿಸಿದ ಅನಿರುದ್ ಬೆಹಲ್, ಮಾಥ್ಯೂ ಸಾಮ್ಯುಯಲ್

"ಎತ್ತು ಈಯ್ತು ಎಂದರೆ ಕೊಟ್ಟಿಗೆಗೆ ಕಟ್ಟು' ಎಂದರಂತೆ. ಹಾಗೆ ಅಸ್ತಿತ್ವದಲ್ಲೇ ಇಲ್ಲದ ಕಂಪನಿ ಜಗತ್ತಿನಲ್ಲಿ ಎಲ್ಲೂ ತಯಾರಾಗದ 'ರಾತ್ರಿ ದರ್ಶಕ'ಗಳನ್ನು ಮಾರುವುದಾಗಿ ಹೇಳಿದರೆ, ಕನಿಷ್ಠ ಒಂದು ಮಾದರಿಯನ್ನಾದರೂ ಪರಿಶೀಲಿಸದೆ ಅಡ್ವಾನ್ಸ್ ಆಗಿ ಲಕ್ಷ ಲಕ್ಷ ಲಂಚ ಮುಕ್ಕುವ ಜನರು ನಮ್ಮ ರಕ್ಷಣಾ ವ್ಯವಸ್ಥೆ-ರಾಜಕೀಯ ವ್ಯವಸ್ಥೆ ನೈತಿಕವಾಗಿ ಎಷ್ಟು ಕುಸಿದಿದೆ ಎಂದು ಸಾರುತ್ತಿದ್ದಾರೆ. ಈ ತೆಹಲ್ಕಾ ತಂಡಕ್ಕೆ ಬೆದರಿಕೆ ಫೋನ್ ಕರೆಗಳು,ವಿವಿಧ ಒತ್ತಡಗಳು ಬರತೊಡಗಿದೆಯಂತೆ. ಕಾದು ನೋಡೋಣ ಮುಂದೆ ಏನಾಗಲಿದೆ ಎಂದು.

ಪತ್ರಿಕೋದ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎನ್ನಲಾಗುತ್ತದೆ. ದೊಡ್ಡ ಸಂಖ್ಯೆಯ-ಮಾಧ್ಯಮದ ಪ್ರತಿನಿಧಿಗಳು, ಪತ್ರಕರ್ತರು ತಾವು ಏನು ಎಂಬುದನ್ನು ಮರೆತಂತೆ ಕಾಣುತ್ತಿದೆ. 'ತೆಹಲ್ಕಾ' ತಂಡದ ಕಾರ್ಯಾಚರಣೆ ಇದನ್ನು ಸ್ವಲ್ಪ ನೆನಪಿಸಿದೆ.

- ಆರ್.ರಾಮಕೃಷ್ಣ

## ವಿಶಿಷ್ಟ ಮದುವೆ..............

ಸಂಘಟನೆಯ ರಾಜ್ಯ ಅಧ್ಯಕ್ಷೆ ಕೆ.ಎಸ್. ವಿಮಲಾ ಕಾರ್ಯ ಕ್ರಮ ನಿರೂಪಿಸಿದರು.

ಇಂಥ ತೊಡಕುಗಳಲ್ಲಿ ಗಂಡ-ಹೆಂಡತಿ ನಡುವೆ ಪ್ರೀತಿ, ವಿಶ್ವಾಸ, ತಿಳುವಳಿಕೆ, ತಾಳ್ಮೆ ಮುಖ್ಯವಾಗುತ್ತವೆ. ಅಲ್ಲಲ್ಲಿ ಅನೇಕ ಕಾರಣಗಳಿಂದಾಗಿ ಮುರಿದುಬೀಳುವ ಅಂತರಜಾತಿ ಮದುವೆಗಳನ್ನು ಎತ್ತಿ ತೋರಿಸುವ ಜನರೇ ಬಹಳ. ಆದರೆ ಹೆಚ್ಚಿನ ಇಂಥ ಅನೇಕ ಜೋಡಿಗಳು ಒಂದಾಗಿ ಬದುಕುವುದನ್ನೂ ನಾವು ನೋಡಿದ್ದೇವೆ.

- ಚಂಪಾ

ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ರಾಮಕೃಷ್ಣ ಆರ್. ಸ್ವಾಗತಿಸಿ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಮಹಂತೇಶ್ ವಂದಿಸಿದರು.

ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಲಕ್ಷ್ಮಿ, ಉಮೇಶ್ ರವರ ಬಂಧು-ಬಳಗ-ಮಿತ್ರರು ಹಿತೈಷಿಗಳು ವಿವಿಧ ವಿಭಾಗದ ಚಳುವಳಿಯನ್ನು ಪ್ರತಿನಿಧಿಸುವ ಮುಖಂಡರು, ಶಿಕ್ಷಕರು, ಸಾಂಸ್ಕೃತಿಕ ರಂಗದ ಪ್ರತಿನಿಧಿಗಳು ಬುದ್ಧಿಜೀವಿಗಳು ದೊಡ್ಡಸಂಖ್ಯೆಯಲ್ಲಿ ಈ ಸಂಭ್ರಮದ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

- ಯಶವಂತ್ ಟಿ.

ಕಥೆ

# ಮನಸ್ಸಿನಲ್ಲಿ ಮನೆ ಮಾಡಿದ ಆ ಕೂಸು

ಮೂಲ: ಸುಧೀರ್ ಕಕರ್
ಕನ್ನಡಕ್ಕೆ: ಜಿ.ರಾಜಶೇಖರ

**(ಸುಧೀರ್ ಕಕರ್ ಅಂತರ್ರಾಷ್ಟ್ರೀಯ ಖ್ಯಾತಿಯ ಮನಃಶಾಸ್ತ್ರಜ್ಞರು. ಹೈದಾರಾಬಾದಿನ 1990 ರ ಕೋಮುಗಲಭೆ ಕುರಿತ ಅವರ ಅಧ್ಯಯನ 'The colours of violence(ಪೆಂಗ್ವಿನ್ ಬುಕ್ಸ್, ಡೆಲ್ಲಿ-1996) ಮೊದಲ 5 ಪುಟಗಳ ಅನುವಾದ ಇಲ್ಲಿದೆ. ಮನಃಶಾಸ್ತ್ರದ ಶಿಸ್ತಿನ ಜೊತೆ ಕಾವ್ಯದ ಉತ್ಕಟತೆಯನ್ನು ಮೈಗೂಡಿಸಿಕೊಂಡ ಅವರ ಈ ಪುಟಗಳ ಅರ್ಥವನ್ನು ನನಗೆ ನಾನೇ ಸ್ಪಷ್ಟಪಡಿಸಿಕೊಳ್ಳಲು ಈ ಅನುವಾದವನ್ನು ಮಾಡಿದೆ. ಇಲ್ಲಿ ಒಂದು ಕಥೆ ಅಥವಾ ಕಥೆಯ ಹೊಳಹು ಇದೆ ಎಂದು ನನಗೆ ಅನ್ನಿಸಿದ್ದು ಅನುವಾದಕ್ಕೆ ಇನ್ನೊಂದು ಕಾರಣ.)**

ಎರಡು ವರ್ಷ ಪ್ರಾಯದ ಆ ಹುಡುಗಿಯ ಮುಖ ನನ್ನ ಮನಸ್ಸಿನ ಒಂದು ಮೂಲೆಯಲ್ಲಿ ಖಾಯಂ ಆಗಿ ಉಳಿದುಬಿಟ್ಟಿದೆ. ಮತ್ತೆ ಮತ್ತೆ ಅದು ನನ್ನ ಪ್ರಜ್ಞೆಯ ಮೇಲು ಪದರದಲ್ಲಿ ಮೂಡಿ ಬರುತ್ತದೆ. ಅದು ಹಾಗೆ ಕಾಣಿಸಿಕೊಳ್ಳುವ ಕೆಲವು ಸಂದರ್ಭಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಜಗತ್ತಿನ ಹಲವೆಡೆ, ಜನಾಂಗೀಯ, ಧಾರ್ಮಿಕ ಮತ್ತು ಭಾಷಿಕ ಗುಂಪುಗಳ ನಡುವೆ ನಡೆಯುವ ಹಿಂಸೆಯ ಕುರಿತು ನಾನು ಪತ್ರಿಕೆಗಳಲ್ಲಿ ಓದುತ್ತಿರುವಾಗ ಅಥವಾ ಟಿ.ವಿಯಲ್ಲಿ ನೋಡುತ್ತಿರುವಾಗ ಗಾಯಗೊಂಡ ಆ ಹುಡುಗಿಯ ಮುಖದ ಚಿತ್ರ ನನ್ನ ಮನಸ್ಸಿನ ಎದುರು ಬಂದು ನಿಲ್ಲುವುದರಲ್ಲಿ ನಿಗೂಢವಾದದ್ದೇನೂ ಇಲ್ಲ. ಹೈದರಾಬಾದು ಶಹರದ ಬಗ್ಗೆ ಲೋಕಾಭಿರಾಮವಾಗಿ ಮಾತಾಡುತ್ತಾ, ಅದರ ಗತ ವೈಭವವನ್ನೋ, ಊಟ ತಿಂಡಿಗಳ ಸೊಗಸನ್ನೋ, ಪಾಳೆಯಗಾರಿ ಗತ್ತನ್ನೋ, ಜನ ನೆನಪಿಸಿಕೊಂಡಾಗ, ಆ ಹುಡುಗಿಯ ಮುಖ ನನ್ನ ಮನಸ್ಸಿನಲ್ಲಿ ಕಾಣಿಸಿಕೊಳ್ಳುವುದನ್ನು ಕೂಡ ನಾನು ಅರ್ಥ ಮಾಡಿಕೊಳ್ಳಬಲ್ಲೆ. ನನಗೆ ಅದು ಇಷ್ಟವಾಗುವುದಿಲ್ಲ. ಅದು ಬೇರೆ ಮಾತು. ಆದರೆ ಇನ್ನೂ ಕೆಲವು ಸಂದರ್ಭಗಳಲ್ಲಿ ಆ ಹುಡುಗಿಯ ಮುಖ ಯಾಕೆ ಧುತ್ತೆಂದು ನನ್ನ ಕಣ್ಣೆದುರು ನಿಲ್ಲುತ್ತದೆ ಎಂದು ನನಗೆ ಅರ್ಥವಾಗುವುದಿಲ್ಲ. ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿರುವ ನನ್ನ ಪರಿಚಿತನೊಬ್ಬ, ಆಫೀಸಿನಲ್ಲಿ ತನ್ನ ಬಾಸ್ ಜೊತೆ ನಡೆದ ಮಾತುಕತೆಯಿಂದ ತನಗಾದ ನೋವಿನ ಬಗ್ಗೆ

**ಹುಡುಗಿಯ ಕಣ್ಣುಗಳಿಂದ ನಾನು ಆ ಘಟನೆಯನ್ನು ನೋಡಲು ಯತ್ನಿಸುತ್ತೇನೆ. ತನ್ನ ಮನೆ ಒಳಗೆ ನುಗ್ಗಿಬಂದ ಜನ, ರಾಕ್ಷಸರ ದಂಡಿನ ಹಾಗೆ ಆಕೆಗೆ ಕಂಡಿರಬೇಕು. ಅವರು ತಮ್ಮ ಮುಖದ ಕೆಳ ಅರ್ಧವನ್ನು ಕಪ್ಪುಬಟ್ಟೆಯಿಂದ ಮುಚ್ಚಿಕೊಂಡಿದ್ದರು. ಮನೆಯ ಬಾಗಿಲನ್ನು ಮುರಿದು ಅವರು ಒಳನುಗ್ಗಿದರು. ಅವರಲ್ಲಿ ಒಬ್ಬ ತನ್ನ ಮಚ್ಚಿನಿಂದ, ತನ್ನ ಅಪ್ಪನನ್ನು ಹೊಡೆದು ಬೀಳಿಸಿದ್ದನ್ನು ಅವಳು ನೋಡಿದಳು. ಇನ್ನೇನು ಅವಳ ಅಪ್ಪ ಅಲ್ಲಿಂದ ಓಡಬೇಕು, ಅಷ್ಟರಲ್ಲಿ ಮಚ್ಚು ಅವನ ಮೇಲೆ ಎರಗಿತ್ತು.**

ನನ್ನೊಡನೆ ಹೇಳಿಕೊಳ್ಳುವಾಗ, ಅಥವಾ ನನ್ನ ಪೇಷೆಂಟ್ ಒಬ್ಬಳು, ತನ್ನ ಅಕ್ಕನಿಂದ ತಾನು ಅನುಭವಿಸಿದ ಅವಮಾನದ ಕುರಿತು ನನ್ನೊಡನೆ ಹೇಳುತ್ತಿರುವಾಗ ಯಾಕೆ ಆ ಮುಖ ಕಾಣಿಸಿಕೊಳ್ಳುತ್ತದೆ? ಈ ನಿಗೂಢತೆಯ ಪರದೆ ಸರಿಸಿ, ಅದನ್ನು ಸ್ಪಷ್ಟಪಡಿಸಿಕೊಳ್ಳಲು ನಾನು, ನನ್ನ ಬದುಕಿನ ಅನೇಕ ನೆನಪುಗಳನ್ನು ಮತ್ತು ಸಂಬಂಧಗಳನ್ನು ಪರಿಶೀಲಿಸಬೇಕು. ಆ ಹುಡುಗಿ, ನನ್ನ ಮನಸ್ಸಿನ ಒಳಗೆ, ಹೇಳದೆ ಬಂದು ನೆಲೆಸಿದವಳು. ಹಾಗಾಗಿ ನಾನು ಆ ಪ್ರಯತ್ನಕ್ಕೆ ಉತ್ಸಾಹ ತೋರಿಸುವುದಿಲ್ಲ.

ಮೊದಲ ಬಾರಿ ಆ ಹುಡುಗಿಯ ಫೋಟೋ ನೋಡಿದ್ದು ಒಂದು ಪತ್ರಿಕೆಯಲ್ಲಿ. 1990 ರ ಡಿಸೆಂಬರ್ ತಿಂಗಳಲ್ಲಿ ಹೈದಾರಾಬಾದ್‌ನಲ್ಲಿ ನಡೆದು ಹಿಂದು-ಮುಸ್ಲಿಂ ಕೋಮು ಘರ್ಷಣೆಯ ವರದಿಯ ಜೊತೆ ಆ ಫೋಟೋ ಕೂಡ ಅಚ್ಚಾಗಿತ್ತು. ಅದರ ಮಾರನೆಯ ವರ್ಷ, ನಾನು ಆ ಗಲಭೆಯ ಕುರಿತ ನನ್ನ ಅಧ್ಯಯನವನ್ನು ಪ್ರಾರಂಭಿಸಿದೆ. ಆಗ ನಾನು ಆ ಫೋಟೋವನ್ನು ದಿನಪತ್ರಿಕೆಗಳು ಮತ್ತು ಮ್ಯಾಗಜಿನ್‌ಗಳಲ್ಲಿ ಮೇಲಿಂದ ಮೇಲೆ ನೋಡಬೇಕಾಗಿ ಬಂತು. ಆ ವೇಳೆಗಾಗಲೆ, ಹುಡುಗಿಯ ಆ ಚಿತ್ರ ಕೋಮು ಹಿಂಸೆಯ ಒಂದು ರೂಪಕವಾಗಿ ಮಾರ್ಪಟ್ಟಿತ್ತು. ಆ ಹುಡುಗಿ



ಹಿಂದುವೋ ಮುಸ್ಲಿಮಳೋ ಎಂದು ನನಗೆ ತಿಳಿಯದು. ಆದರೆ ಹಿಂದುಗಳ ಪಕ್ಷ ವಹಿಸುವ ಒಂದು ತೆಲುಗು ಪತ್ರಿಕೆಯ ಪ್ರಕಾರ ಅವಳು ಹಿಂದು ಮತಸ್ಥಳು, ಫೋಟೋದಲ್ಲಿ ಮೊದಲು ನಿಮ್ಮ ಕಣ್ಣಿಗೆ ಬೀಳುವುದು, ತಲೆಬಾಚದ, ಕೊಳೆಯಿಂದ ಸಿಕ್ಕುಗಟ್ಟಿದ ಕೂದಲಿನ, ಕೊಳಗೇರಿಯ ಒಬ್ಬ ಹುಡುಗಿ. ಅಷ್ಟನ್ನು ಗಮನಿಸಿದ ಮೇಲೆ ನಿಮ್ಮನ್ನು ಆಘಾತಗೊಳಿಸುವುದು, ಆ ಹುಡುಗಿಯ ಹಣೆಯಲ್ಲಿ ಕಾಣಿಸುವ ಆಳವಾದ ಗಾಯ. ಗಾಯ ಇನ್ನೂ ಪೂರ್ತ ಒಣಗಿ ಕರೆಕಟ್ಟಿಲ್ಲ. ಅದು ಆಕೆಯ ಬಲಗಣ್ಣಿನ ರೆಪ್ಪೆಯಿಂದ ಶುರುವಾಗಿ, ಕಣ್ಣುಗುಡ್ಡೆಯನ್ನು ಸವರಿಕೊಂಡು, ಸ್ವಲ್ಪ ಚಪ್ಪಟೆ ಎನ್ನಿಸುವ ಅವಳ ಮೂಗಿನ ಮೇಲೆ ಸರಿದು, ಎಡಗಣ್ಣೆಯ, ಮರಳು ಕೂತ ಚರ್ಮದವರೆಗೆ ಸಾಗಿತ್ತು. ಅವಳ ಗಾಯಕ್ಕೆ ಹಾಕಿದ ಹೊಲಿಗೆಯಲ್ಲಿ, ತಜ್ಞ ವೈದ್ಯನ ಕಸುಬುಗಾರಿಕೆ ಕಾಣಿಸುತ್ತಿರಲಿಲ್ಲ. ಅದು, ಹುಳ ಹಿಡಿದ ಸರಕಾರಿ ಆಸ್ಪತ್ರೆಯೊಂದರ ಎಮರ್ಜೆನ್ಸಿ ರೂಮಿನಲ್ಲಿ, ಒಮ್ಮೆಗೇ ಜಮೆಯಾದ ಗಾಯಾಳುಗಳ ಜೊತೆ ಏಗಲಾರದೆ ತಲೆ ರೋಸಿದ ಒಬ್ಬ ರೆಸಿಡೆಂಟ್ ಡಾಕ್ಟರನ ಬೇಕಾಬಿಟ್ಟಿ ಕೆಲಸದ ಹಾಗಿತ್ತು. ಗಾಯವನ್ನು ಹೊಲಿದ ಹೆಣಿಗೆಗಳ ಗುರುತು, ಹುಡುಗಿಯ ಮುಖದ ಮೇಲೆ ಯದ್ವಾತದ್ವಾ ಮೂಡಿದ್ದವು. ಅದನ್ನು ನೋಡಿದರೆ, ಯಾರೋ ತಮ್ಮ ಮತ್ತು 0 ಯ ಅರ್ಥಹೀನ ಆಟವನ್ನು ಅವಸರದಲ್ಲಿ ಮುಗಿಸಿ, ಎದ್ದುಹೋದಂತೆ ಭಾಸವಾಗುತ್ತಿತ್ತು. ಹುಡುಗಿಯ ಒಂದು ಕೈ ದಿಂಬಿನ ಮೇಲಿತ್ತು. ದಿಂಬು, ಅವಳ ನೋವಿಗೆ ತುಸುವಾದರೂ ಆಸರೆಯಾದ ಹಾಗೆ ಕಾಣಲಿಲ್ಲ. ಮುಖದ ಬಲಭಾಗ ಮತ್ತು ಗಾಯಗೊಂಡ ಬಲಕಣ್ಣನ್ನು ದಿಂಬಿಗೆ ಅಂಟಿಗೆ ಆನಿಸಿಕೊಂಡು ಅವಳು ಮಲಗಿದ್ದಳು. ತನ್ನ ಎಡಕಣ್ಣಿನಿಂದ ಅವಳು ಕ್ಯಾಮಾರಾವನ್ನು ಮತ್ತು ಜಗತ್ತನ್ನು ನೋಡುತ್ತಿದ್ದಳು. ಆ ನೋಟವನ್ನು ತಪ್ಪಿಸಲು ನಾನು ಎಚ್ಚರವಹಿಸದೆ ಇದ್ದರೆ ಆ ಕಣ್ಣು ನನ್ನನ್ನೂ ನೋಡುತ್ತದೆ.

ಆ ಭೀಕರ ಘಟನೆಯಿಂದ ಜರ್ಜರಿತವಾದ ಅವಳ ಪುಟ್ಟ ದೇಹ ಮತ್ತು ಆತ್ಮ ತಲುಪಿದ ಆಳ ನನ್ನ ಅಳಿವಿಗೆ ಮೀರಿದ್ದು. ಅವಳ ಮುಖದಲ್ಲಿ ಭಾವನೆಯೇ ಇರಲಿಲ್ಲ. ಅದೂ ನನ್ನ ಅಳವಿಗೆ ಮೀರಿದ್ದು. ಹುಡುಗಿಯ ಕಣ್ಣುಗಳಿಂದ ನಾನು ಆ ಘಟನೆಯನ್ನು ನೋಡಲು ಯತ್ನಿಸುತ್ತೇನೆ. ತನ್ನ ಮನೆ ಒಳಗೆ ನುಗ್ಗಿಬಂದ ಜನ, ರಾಕ್ಷಸರ ದಂಡಿನ ಹಾಗೆ ಆಕೆಗೆ ಕಂಡಿರಬೇಕು. ಅವರು ತಮ್ಮ ಮುಖದ ಕೆಳ ಅರ್ಧವನ್ನು ಕಪ್ಪುಬಟ್ಟೆಯಿಂದ ಮುಚ್ಚಿಕೊಂಡಿದ್ದರು. ಮನೆಯ ಬಾಗಿಲನ್ನು ಮುರಿದು ಅವರು ಒಳನುಗ್ಗಿದರು. ಅವರಲ್ಲಿ ಒಬ್ಬ ತನ್ನ ಮಚ್ಚಿನಿಂದ, ತನ್ನ ಅಪ್ಪನನ್ನು ಹೊಡೆದು ಬೀಳಿಸಿದ್ದನ್ನು ಅವಳು ನೋಡಿದಳು. ಇನ್ನೇನು ಅವಳ ಅಪ್ಪ ಅಲ್ಲಿಂದ ಓಡಬೇಕು, ಅಷ್ಟರಲ್ಲಿ ಮಚ್ಚು ಅವನ ಮೇಲೆ ಎರಗಿತ್ತು. ಅವನು ಕೆಳಗೆ ಬಿದ್ದ, ಕತ್ತಿ, ಚೂರಿ, ದೊಣ್ಣೆಗಳನ್ನು ಹಿಡಿದ ಜನ ಅವನನ್ನು ಸುತ್ತುವರಿದರು. ಅವಳ ಅಮ್ಮ ಇದನ್ನೆಲ್ಲ ನೋಡುತ್ತ, ಗರಬಡಿದು ನಿಂತಿದ್ದಾಳೆ. ಒಂದು ಚೂಪಾದ ಈಟಿ ಅವಳ ಕತ್ತನ್ನು ಇರಿಯುತ್ತದೆ. ಚೀರಿಕೊಂಡದ್ದೋ ಅಥವಾ ಕೆಮ್ಮಿದ್ದೊ ಎಂದು ಗೊತ್ತಾಗದಂತಹ ಒಂದು ಸದ್ದು ಅವಳ ಗಂಟಲಿನಿಂದ ಹೊರಡುತ್ತದೆ. ಮಗಳು ತಾಯಿಯ ಸಮೀಪ ಹೋಗಲೆಂದು ಹೆಜ್ಜೆ ಇಟ್ಟಿದ್ದಾಳೆ. ಆ ಕ್ಷಣದಲ್ಲಿ ಕತ್ತಿ ಅವಳ ಮುಖದ ಮೇಲೆ ಬೀಸಿ ಬಂದು ಬಿದ್ದಿದೆ. ಆ ಗಾಯದ ನೋವು, ಅದರ ಉರಿ ಅವಳ ಅನುಭವಕ್ಕೆ ಮೀರಿದ್ದು. ಗಾಯದಿಂದ ರಕ್ತ ಅವಳ ಕಣ್ಣಿನೊಳಗೆ ಇಳಿಯುತ್ತದೆ.

ಆ ಕ್ಷಣದಲ್ಲಿ, ಅಂದರೆ ಆ ಹುಡುಗಿ ತನಗೆ ಗೊತ್ತಿರುವ ಎಲ್ಲ ನೆಲೆಗಳನ್ನೂ, ಆಸರೆಗಳನ್ನೂ ಕಳೆದುಕೊಳ್ಳುವ ಪ್ರಜ್ಞೆಯ ಪಾತಾಳದ ಕಡೆ ಮೊದಲ ಹೆಜ್ಜೆ ಇಟ್ಟ ಆ ಕ್ಷಣದಲ್ಲಿ, ಆಕೆಗೆ ಜಗತ್ತು ತನ್ನ ರಹಸ್ಯವನ್ನು ತೋರಿಸಿತು ಎಂದು ನಾನು ಯೋಚಿಸುತ್ತೇನೆ. ಹುಟ್ಟು, ಸಾವು, ದೇಹ, ಕಾಮ, ಕುಟುಂಬ ಮುಂತಾದ ನಾನಾ ಸಂಗತಿಗಳಿಂದ ಈ ಬದುಕಿಗೆ ಒಂದು ಅರ್ಥ ಕಲ್ಪಿಸಲು ನಾವು ಹತಾಶ ಪ್ರಯತ್ನ ನಡೆಸುತ್ತೇವೆ. ಆದರೆ ಮನುಷ್ಯ ಜೀವ ಎಂದು ನಾವು ಕರೆಯುವ ಈ ಪುಟ್ಟ ಬೆಳಕಿನ ಕಣವನ್ನು, ಅಸೀಮ ಅನಾಸಕ್ತಿ ಸುತ್ತು ವರಿದಿದೆ. ಹುಡುಗಿಗೆ ಆ ಕ್ಷಣದಲ್ಲಿ ಅದರ ಅರಿವಾಗಿರಬಹುದು.

ಈ ಭ್ರಾಮಕ ಕಲ್ಪನೆಗಳನ್ನು ತಲೆಯಿಂದ ಕೊಡವಿಕೊಂಡು ನಾನು ಮತ್ತೆ ಆ ಫೋಟೋದತ್ತ ತಿರುಗುತ್ತೇನೆ. ಕಲ್ಲಿನಂತಹ ಮುಖಭಾವದ, ಒಂದು ಕಣ್ಣಿನ ನೋಟ ಕಳೆದುಕೊಂಡ ಆ ಹುಡುಗಿಯ ಫೋಟೋ, ನನ್ನ ಈ ಭ್ರಮಾಲಹರಿ, ಸಹಾನೂಭೂತಿಯ ಸೋಲು ಎಂದು ನನಗೆ ಗೊತ್ತಿದೆ. ಆಕೆಯ ಮೇಲೆ ಎಸಗಲಾದ ಹಿಂಸೆಯ ಅಗಾಧತೆ ಅಸಹನೀಯ. ಹಾಗಾಗಿ ನನ್ನ ವೃತ್ತಿಯ ಒಂದು ಮುಖ್ಯ ಪರಿಕರವನ್ನು ಇನ್ನೊಬ್ಬ ವ್ಯಕ್ತಿಯ ಮನಸ್ಸಿನ ಒಳಗೆ ಏನು ನಡೆದಿದೆ ಎಂಬದು ಗ್ರಹಿಸಲು ಒಬ್ಬ ಮನೋವಿಜ್ಞಾನಿ ಬಳಸಲೇಬೇಕಾದ ಪರಿಕರವನ್ನು ನಾನು ಈ ಸಂದರ್ಭದಲ್ಲಿ ಬಳಸಲಾರೆ. ಆ ಹುಡುಗಿ ಆಕ್ರಮಣಕ್ಕೆ ಬಲಿಯಾದ ಅಸಹಾಯ ಜೀವವಾಗಿರುವುದೂ ಇದಕ್ಕೆ ಕಾರಣವಿರಬಹುದು. ಅದೃಷ್ಟ ಅವಳನ್ನು ನೆಲ ಕಚ್ಚಿಸಿಬಿಟ್ಟಿದೆ. ಅದೊಂದು ದಟ್ಟದರಿದ್ರ ಸ್ಥಿತಿ. ಸಹಾನೂಭೂತಿ ತೋರಿಸಲು ಸಾಧ್ಯವಾಗುವುದು, ತಮ್ಮ ಮೇಲೆ ತಾವೇ ದುರಂತವನ್ನು ತಂದುಕೊಂಡವರ ಬಗ್ಗೆ ಮಾತ್ರ; ಅಂದರೆ ಅದೃಷ್ಟದ ಸಹವರ್ತಿಗಳಾಗಿ, ತಮ್ಮ ಪಾಡನ್ನು ತಾವೇ ಮೈಮೇಲೆ ಎಳೆದುಕೊಂಡವರ ಬಗ್ಗೆ ಮಾತ್ರ. ಆ ಹುಡುಗಿಯಾದರೋ, ಅದೃಷ್ಟಕ್ಕೆ ಸುಮ್ಮನೆ ಬಲಿಯಾದಳು. ದುರಂತ, ವ್ಯಕ್ತಿ, ಅದೃಷ್ಟದ ಜೊತೆ ಕೈ ಜೋಡಿಸಿದ್ದರ ನೆನಪನ್ನು ಉಳಿಸಿಕೊಂಡು, ಕೊನೆಗಾದರೂ ಅದರಿಂದ ಪಾರಾಗುವ ಭರವಸೆಯನ್ನು ಇರಿಸಿಕೊಂಡಿರುತ್ತದೆ. ಆದರೆ ಆ ಭರವಸೆಯೇ ಇಲ್ಲದ ನೋವಿನ ಜಡತೆ, ಅದನ್ನು ನೋಡುವವರ ಎದೆಯ ಮೇಲೆ ಹೆಣ ಭಾರವಾಗುತ್ತದೆ. ನಾನು ಆ ಹುಡುಗಿಯ ನೋವಿನ ಬಗ್ಗೆ ಸಹಾನುಭೂತಿ ತೋರಿಸಲಾರೆ. ಯಾಕೆಂದರೆ ಆ ನೋವಿನ ನಿರ್ವಣ್ಣತೆಯ ಎದುರು ನನ್ನನ್ನು ನಾನು ರಕ್ಷಿಸಿಕೊಳ್ಳಬೇಕು. ಅವಳ ಬಗ್ಗೆ ಕನಿಕರ ತೋರಿಸುವುದು ಸಹಾನುಭೂತಿಗಿಂತ ಸುಲಭ. ಕನಿಕರ, ಯಾವಾಗಲೂ ನಾವು ದೂರದಲ್ಲಿ ನಿಂತು ವ್ಯಕ್ತಪಡಿಸುವಂತದ್ದು. ಹಾಗಾಗಿ ಆ ಹುಡುಗಿಯ ಮುಖ ನನ್ನನ್ನು ಕಾಡುವುದಿಲ್ಲ. ಅದು ಕಿರಿಕಿರಿ ಮಾಡುತ್ತದೆ ಅಷ್ಟೆ. ರಸ್ತೆಯಲ್ಲಿ ನಮ್ಮ ಕಣ್ಣಿಗೆ ಬೀಳುವ ಭಿಕ್ಷೆ ಬೇಡುವ ಮಕ್ಕಳು ಅಥವಾ ರೇಜಿಗೆಯಾಗುವ ಹಾಗೆ ಅಂಗಲಾಚುವ ಕುಷ್ಠ ರೋಗಿಗಳು ನಮಗೆ ಕಿರಿಕಿರಿ ಮಾಡುವ ಹಾಗೆ, ನಮಗೆ ಅವರನ್ನು ಕಂಡು 'ಪಾಪ' ಅನ್ನಿಸುತ್ತದೆ; ಸಿಟ್ಟೂ ಬರುತ್ತದೆ. ಸಿಟ್ಟು ಯಾಕೆಂದರೆ, 'ಸಾಯಿ, ಆಚೆ ತೊಲಗು, ನನ್ನ ಕಣ್ಣಿಗೆ ಬೀಳಬೇಡ' ಎಂದು ನಾವು ಆ ದರಿದ್ರಗಳಿಗೆ ಹೇಳಲು ಸಾಧ್ಯವಾಗದ್ದಕ್ಕೆ.

'ಭಾವನಾ' ಮಾಸ ಪತ್ರಿಕೆಯಿಂದ

## ಭಾರತಕ್ಕೆ ಕೀರ್ತಿ ತಂದ ಗೋಪಿಚಂದ್

ಭಾರತದ ಷಟ್ಲರ್ ಗೋಪಿಚಂದ್ ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಕಿರೀಟವನ್ನು ತಮ್ಮದಾಗಿಸಿಕೊಂಡಿದ್ದಾರೆ. ಮಾರ್ಚ್ 11 ರಂದು ನಡೆದ ಫೈನಲ್ ಪಂದ್ಯದಲ್ಲಿ ಚೀನಾದ ಚೆನ್ ಹಾಂಗ್‌ರನ್ನು ಮಣಿಸಿದ ಗೋಪಿಚಂದ್ ಎರಡು ದಶಕದ ನಂತರ ( 20 ವರ್ಷಗಳ ಹಿಂದೆ ಕರ್ನಾಟಕದ ಪ್ರಕಾಶ ಪಡುಕೋಣೆ ಈ ಪ್ರಶಸ್ತಿ ಗಳಿಸಿದ್ದರು) ನಂತರ ಈ ಪ್ರಶಸ್ತಿಯನ್ನು ಮರಳಿ ಭಾರತಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ವಿಶ್ವದ ಅಗ್ರಕ್ರಮಾಂಕಿತ, ಒಲಂಪಿಕ್ ಚಾಂಪಿಯನ್ನಗಳನ್ನೆಲ್ಲ ಸೋಲಿಸಿ, ವಿಶ್ವ ಬ್ಯಾಡ್ಮಿಂಟನ್‌ನ ಹೊಸ ದೊರೆಯಾಗಿ ಅರಳಿ ವಿಶ್ವ ಕ್ರಮಾಂಕ ಪಟ್ಟಿಯಲ್ಲಿ 50ನೇ ಸ್ಥಾನದಿಂದ 5ನೇ ಸ್ಥಾನಕ್ಕೇರಿದ್ದಾರೆ.

5 ಬಾರಿ ರಾಷ್ಟ್ರೀಯ ಕಿರೀಟವನ್ನು ಧರಿಸಿರುವ ಗೋಪಿಚಂದ್ ಕ್ವಾಲಲಂಪುರದಲ್ಲಿ ನಡೆದಿದ್ದ ಮಲೇಶ್ಯಾ ಓಪನ್ ಚಾಂಪಿಯನ್ ಷಿಪ್‌ನಲ್ಲಿ ಪ್ರಥಮ ಬಾರಿಗೆ ಅಂತರರಾಷ್ಟ್ರೀಯ ಪಂದ್ಯದಲ್ಲಿ ಭಾಗವಹಿಸಿ ಫೈನಲ್ ತಲುಪಿದ್ದರು.



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : S.Y.GURUSHANTH